ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ ೧೧ ಸಂಚಿಕೆ ೨೬ - ೨೭ ಜುಲೈ ೯- ೧೬, ೧೯೮೯ ಬೆಲೆ ರೂ ೧.೨೫

ಕಾಮ್ರೇಡ್ ಅಂಡ್ರೈ ಗ್ರೊಮಿಕೊ

ಹಿರಿಯ ಕಮ್ಯುನಿಸ್ಟ್ ಮುಖಂಡ, ಪ್ರಖ್ಯಾತ ಸೋವಿಯತ್ ಮುತ್ಸದ್ದಿ ಮತ್ತು ಇತ್ತೀಚಿನವರೆಗೆ ಸೋವಿಯತ್ ಒಕ್ಕೂಟದ ಸುಪ್ರೀಂ ಸೋವಿಯತ್‌ನ ಅಧ್ಯಕ್ಷ ವ ತಳಿಯ ಅಧ್ಯಕ್ಷರಾಗಿದ್ದ ಅಂಡ್ರೈ ಗ್ರೊಮಿಕೊರವರ ನಿಧನಕ್ಕೆ, ಸಿ.ಪಿ.ಐ. (ಎಂ) ಪಾಲಿಟ್‌ಬ್ಯುರೋ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ. ಸೋವಿಯತ್ ವಿದೇಶಾಂಗ ಧೋರಣೆಯ ನಿರ್ವಹಣೆಯಲ್ಲಿ ಕಾಮ್ರೇಡ್ ಗ್ರೊಮಿಕೋರವರ ಕಾಣಿಕೆ ಸುವಿಖ್ಯಾತ. ವಿವಿಧ ಸ್ಥಾನಗಳಲ್ಲಿ ಮತ್ತು ಎರಡು ದಶಕಗಳಿಗೂ ಹೆಚ್ಚುಕಾಲ ವಿದೇಶಾಂಗ ಮಂತ್ರಿಯಾಗಿ ಸೋವಿಯತ್ ಒಕ್ಕೂಟಕ್ಕೆ ಸೇವೆ ಸಲ್ಲಿಸಿರುವ ಕಾಮ್ರೇಡ್ ಗ್ರೊಮಿಕೊ ಭಾರತ-ಸೋವಿಯತ್ ಸಂಬಂಧಗಳನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ಹಾಗೂ ಕಾಮ್ರೇಡ್ ಗ್ರೊಮಿಕೋರವರ ಕುಟುಂಬದ ಸದಸ್ಯರಿಗೆ ಸಿ.ಪಿ.ಐ. (ಎಂ) ಪಾಲಿಟ್‌ಬ್ಯುರೋ ತನ್ನ ಸಂತಾಪ ಸೂಚಿಸಿದೆ.

ಕೋಮುವಾದದ ವಿರುದ್ಧ ಆಗಸ್ಟ್ 15ರಂದು ರಾಜ್ಯ ಸಮಾವೇಶ
ಸಿ.ಪಿ.ಐ. (ಎಂ), ಸಿ.ಪಿ.ಐ. ನಿರ್ಣಯ

ಸಿ.ಪಿ.ಐ. ರಾಜ್ಯ ಮಂಡಳಿ ಹಾಗೂ ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿ ಮಂಡಳಿಗಳ ಒಂದು ಜಂಟಿ ಸಭೆ ಬೆಂಗಳೂರಿನಲ್ಲಿ ಜುಲೈ 3ರಂದು ನಡೆದು ಕೋಮುವಾದದ ವಿರುದ್ಧ ಪ್ರಚಾರ ಪ್ರಕ್ಷೋಭೆ ನಡೆಸಲು ನಿರ್ಧರಿಸಿತು.

ದೇಶದಲ್ಲಿ ಹೆಚ್ಚುತ್ತಿರುವ ಕೋಮು ಕಲಹಗಳು, ಬಿಜೆ.ಪಿ., ಆರ್.ಎಸ್.ಎಸ್., ವಿಶ್ವ ಹಿಂದೂ ಪರಿಷತ್, ಶಿವಸೇನೆ, ಮತ್ತಿತರ ಹಿಂದೂ ಕೋಮುವಾದೀ ಶಕ್ತಿಗಳು ಬಾಬ್ರಿ ಮಸೀದಿಯನ್ನು ಕೆಡವಿ ರಾಮಮಂದಿರವನ್ನು ಕಟ್ಟಲು ಮಾಡುತ್ತಿರುವ ಸಿದ್ಧತೆಗಳಿಂದಾಗಿ ದೇಶದಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಮುಸ್ಲಿಂ ಮೂಲಭೂತವಾದೀಗಳ ಕೂಡಾ ಕಾಳಗಕ್ಕೆ ಸಿದ್ಧರಾಗುತ್ತಿದ್ದು ಪರಿಸ್ಥಿಯ ಬಿಗುವು ಇನ್ನಷ್ಟು ಹೆಚ್ಚುತ್ತಿದೆ. ಇದನ್ನು ಅತ್ಯಂತ ಆತಂಕದಿಂದ ಗಮನಿಸುತ್ತಿರುವ ಸಿ.ಪಿ.ಐ. ಹಾಗೂ ಸಿ.ಪಿ.ಐ. (ಎಂ) ಎಲ್ಲಾ ಬಣ್ಣದ ಕೋಮುವಾದಿಗಳ ವಿರುದ್ಧ ಶಕ್ತಿಮೀರಿ ಹೋರಾಡುವುದೇ ಕೋಮು ಸೌಹಾರ್ದ ಹಾಗೂ ರಾಷ್ಟ್ರೀಯ ಐಕ್ಯತೆ ರಕ್ಷಿಸುವ ಏಕೈಕ ಮಾರ್ಗ ಎಂಬ ಧೃಢ ಅಭಿಪ್ರಾಯ ಬಂದಿವೆ ಎಂದು ಈ ಸಭೆಯ ನಂತರ ಎರಡೂ ಪಕ್ಷಗಳ ರಾಜ್ಯಕಾರ್ಯದರ್ಶಿಗಳು ನೀಡಿದ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಹಿನ್ನಲೆಯಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಲಾಗಿದೆ.

(i) ಕೋಮುವಾದದ ವಿರುದ್ಧ ಜಾತ್ಯಾತೀತ ಶಕ್ತಿಗಳನ್ನು ಮತ್ತು ರಾಷ್ಟ್ರೀಯ ಐಕ್ಯತೆ ಬಲಗೊಳಿಸಲು ಬೆಂಗಳೂರಿನಲ್ಲಿ ಆಗಸ್ಟ್ 15-16ರಂದು ರಾಜ್ಯಮಟ್ಟದ ಸಮಾವೇಶ

(ii) ಜುಲೈ 10ರಂದು ಎನ್.ಜಿ.ಒ

8 ನೇ ಪುಟಕ್ಕೆ

ಒಳಪುಟಗಳಲ್ಲಿ

ಸಿ.ಪಿ.ಐ.(ಎಂ.) ರಾಜ್ಯ ಸಮಿತಿ ಹೇಳಿಕೆ

ಅಧಿಕಾರಶಾಹಿ ದಬ್ಬಾಳಿಕೆ ಪ್ರವೃತ್ತಿಯ ಕಟ್ಟು ಹರಿದು ಬಿಟ್ಟಂತಾಗಿದೆ

ರಾಜ್ಯದ ಜನರಿಂದ ಆಯ್ಕೆಗೊಂಡು ಜನರ ಅಭಿಪ್ರಾಯಕ್ಕೆ ಬೆಲೆ ಕೊಡಬೇಕಾದ ಅನಿವಾರ್ಯತೆಯಿರುವ ಸರಕಾರವೊಂದು ತೆಗೆದುಕೊಳ್ಳಲು ಹಿಂಜರಿದ ಅನೇಕ ಜನವಿರೋಧಿ ಕ್ರಮಗಳನ್ನು ಯಾವುದೇ ಅಂಜಿಕೆಯಿಲ್ಲದೆ ರಾಜ್ಯಪಾಲರು ಕೈಗೊಳ್ಳುತ್ತಿದ್ದಾರೆ. ಅಧಿಕಾರಶಾಹೀ ದಬ್ಬಾಳಿಕೆಯ ಪ್ರವೃತ್ತಿಯನ್ನು ಕಟ್ಟು ಹರಿದು ಬಿಟ್ಟಂತಾಗಿದೆ ಎಂದು ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ವಿಮರ್ಶಿಸುತ್ತಾ ಖಂಡಿಸಿದೆ.

ಕರ್ನಾಟಕದಲ್ಲಿ ಚುನಾಯಿತ ಸರಕಾರವೊಂದನ್ನು ಕಿತ್ತೆಸೆದು ರಾಷ್ಟ್ರಪತಿ ಆಡಳಿತವನ್ನು ಹೇರಿದ ನಂತರ ರಾಜ್ಯಪಾಲರು ತಮ್ಮ ಸಲಹೆಗಾರರೊಂದಿಗೆ ನಡೆಸುತ್ತಿರುವ ಆಡಳಿತ ವೈಖರಿಯನ್ನು ವಿಮರ್ಶಿಸುತ್ತಾ ರಾಜ್ಯಸಮಿತಿ ಮೆಡಿಕಲ್, ಇಂಜಿನಿಯರಿಂಗ್ ಶುಲ್ಕ ಏರಿಕೆ, ಬಸ್‌ದರ ಏರಿಕೆ, ಬಸ್ ಮಾರ್ಗಗಳ ಕಡಿತ ವರ್ಗಾವರ್ಗಿಗಳು ಪ್ರಜಾಸತ್ತಾತ್ಮಕ ಪ್ರತಿಭಟನೆಗೆ ಅಸಹನೆ, ರೇಷನ್ ವಿತರಣೆ ಕಡಿತ ಇದಕ್ಕೆ ಉದಾಹರಣೆ ಎಂದು ಅಭಿಪ್ರಾಯಪಟ್ಟಿದೆ.

ಜುಲೈ 7 ರಂದು ಬೆಂಗಳೂರಿನಲ್ಲಿ ಕಾಂ॥ ಎನ್.ಕೆ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆದ ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯಸಮಿತಿಯ ಸಭೆ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಿ, ರಾಜ್ಯಪಾಲರ ಆಡಳಿತ ವೈಖರಿ ಮಾತ್ರವಲ್ಲ, ರಾಜೀವ್ ಗಾಂಧಿಯ ಕರ್ನಾಟಕ ಪ್ರವಾಸ, ಕೇಂದ್ರ ಹಣಕಾಸು ಆಯೋಗ, ಭೂಮಿ ಚಳುವಳಿ, ಅಸಂಘಟಿತ ಕಾರ್ಮಿಕರ ಚಳುವಳಿ ಹಾಗೂ ಕೋಮುವಾದ-ವಿರೋಧಿ ಸಮಾವೇಶಗಳ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿತು.

ಸಭೆಯ ನಂತರ ನೀಡಿದ ಪತ್ರಿಕಾ ಹೇಳಿಕೆಯನ್ನು ಮುಂದೆ ಕೊಡಲಾಗಿದೆ:

8ನೇ ಪುಟಕ್ಕೆ

ಪಾಲಿಟ್ ಬ್ಯೂರೋ ಹೇಳಿಕೆ

ಚೀಣಾ ಸಮಾಜವಾದೀ ಕ್ರಾಂತೀಯ ರಕ್ಷಣೆಗೆ ಸಿ.ಪಿ.ಐ.(ಎಂ) ಬದ್ಧ

ಚೀಣಾದ ಇತ್ತೀಚಿನ ಘಟನೆಗಳ ಹಿನ್ನಲೆಯಲ್ಲಿ ಭಾರತದಲ್ಲಿ ನಡೆಯುತ್ತಿರುವ ಸಮಾಜವಾದ-ವಿರೋಧಿ ಅಪಪ್ರಚಾರದಿಂದ ದಾರಿ ತಪ್ಪಬಾರದೆಂದುಸಿ.ಪಿ.ಐ.(ಎಂ) ಪಾಲಿಟ್‌ಬೂರೋ ದೇಶದ ಜನತೆಗೆ ಮನವಿಮಾಡಿಕೊಂಡಿದೆ: ಈ ರೀತಿ ದೂಷಣೆಯ ಸುರಿಮಳೆಗರೆಯುತ್ತಿರು ವವರನ್ನು ನಿರಂತರವಾಗಿ ಬಯಲಿಗೆಳೆಯಬೇಕೆಂದು ಪಕ್ಷದ ಕಾರ್ಯಕರ್ತ ರಿಗೆ ಪಾಲಿಟ್‌ಬ್ಯೂರೋ ಕರೆ ನೀಡಿದೆ. ಚೀಣೀ ಸಮಾಜವಾದೀ ಕ್ರಾಂತಿಯ ರಕ್ಷಣೆಗೆ ತಾನು ಪ್ರಾಮಾಣಿಕವಾಗಿ ಬದ್ಧ ಎಂದು ಸಿ.ಪಿ.ಐ. (ಎಂ) ಘೋಷಿಸಿದೆ.

ಜೂನ್ 20ರಂದು ಪಾಲಿಟ್‌ಬ್ಯೂರೋ ಸಭೆ ಸೇರಿ ಚೀಣಾದ ಇತ್ತೀಚಿನ ಆತಂಕಕಾರಿ ಬೆಳವಣಿಗೆಗಳ ಬಗ್ಗೆ ಜೂನ್ 5ರ ತನ್ನ ಹೇಳಿಕೆಯ ಪರಾಮರ್ಶೆ ನಡೆಸಿದ ನಂತರ ನೀಡಿದ ಹೇಳಿಕೆಯಲ್ಲಿ ಈ ಕರೆ ನೀಡಲಾಗಿದೆ.

ಈ ಅಲ್ಲೋಲಕಲ್ಲೋಲದಲ್ಲಿ ಜನತಾ ವಿಮೋಚನಾ ಸೇನೆಯ ಸೈನಿಕರು, ವಿದ್ಯಾರ್ಥಿಗಳು ಹಾಗೂ ಇತರರ ದಾರುಣ ಪ್ರಾಣಹಾನಿ ಬಗ್ಗೆ ಪಾಲಿಟ್ ಬ್ಯೂರೋ ತನ್ನ ದುಃಖ ವ್ಯಕ್ತಪಡಿಸಿತು. ತಿಯಾನ್ ಮೆನ್ ಚೌಕವನ್ನು ವಿದ್ಯಾರ್ಥಿಗಳು ಗಮನಾರ್ಹ ಸಂಖ್ಯೆಯಲ್ಲಿ ಆಕ್ರಮಿಸಿಕೊಳ್ಳುವ ವರೆಗಿನ ಘಟನೆಗಳ ಹಿಂದೆ ಇದ್ದ ಒಂದು ಗುಂಪು ಕೇಳುತ್ತಿದ್ದುದು ಸಮಾಜವಾದೀ ವ್ಯವಸ್ಥೆಯೊಳಗೆ ಪ್ರಜಾ ಪ್ರಭುತ್ವವನ್ನು ಬಲಗೊಳಿಸಬೇಕೆಂದಲ್ಲ. ಬದಲಾಗಿ ಬೂರ್ಜ್ವಾ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹೀಯ ಮರು ಸ್ಥಾಪನೆಯಾಗಬೇಕೆಂದು ಅದು ಒತ್ತಾಯಿ ಸುತ್ತಿದ್ದು ಸಾರ್ವಜನಿಕ ಅಭಿಪ್ರಾಯವನ್ನು ದಾರಿ ತಪ್ಪಿಸಲು ಶಕ್ತರಾದ ಈ ವ್ಯಕ್ತಿಗಳು ಈ ಮೂಲಕ ಸಮಾಜವಾದೀ ವ್ಯವಸ್ಥೆಗೇ ಸವಾಲೊಡ್ಡಿ ಒಂದು ಕ್ರಾಂತಿ-ವಿರೋಧಿ ದಂಗೆ ಸಂಘಟಿಸುತ್ತಿದ್ದರು ಎಂದು ಪಾಲಿಟ್ ಬ್ಯೂರೋ ವಿಶ್ಲೇಶಿಸಿದೆ.


ಜೂನ್ 5ರ ನಂತರ ಬೆಳಕಿಗೆ ಬಂದಿರುವ ಸಂಗತಿಗಳು ಈ ಪಿತೂರಿಯಲ್ಲಿ ಸಾಮ್ರಾಜ್ಯಶಾಹೀಗಳ ಕೈವಾಡವನ್ನು ಧೃಡಪಡಿಸಿವೆ ಎಂದಿರುವ ಪಾಲಿಟ್‌ಬ್ಯೂರೋ ಈ ಚಳುವಳಿ ಚೀಣಾ-ಸೋವಿಯತ್ ಶೃಂಗ ಸಭೆಯ ಮುನ್ನಾ ದಿನದಂದೇ ನಡೆದಿರುವುದು ಕೇವಲ ಆಕಸ್ಮಿಕವಲ್ಲ ಎಂದು ಹೇಳಿದೆ. ಸೋವಿಯತ್ ಒಕ್ಕೂಟ ಮತ್ತು ಜನತಾ ಚೀಣಾದ ನಡುವಿನ ಸಂಬಂಧಗಳ ಸಾಮಾನ್ಯೀಕರಣ ವಿಶ್ವದ ಮುಂದಿನ ಬೆಳವಣಿಗೆಗಳನ್ನು ರೂಪಿಸುವಲ್ಲಿ ಬಹಳ ಮಹತ್ವದ ಘಟನೆ. ಈ ಮುನ್ನಡೆಯನ್ನು ತಡೆಯಲು ಅಮೇರಿಕಾ ನೇತೃತ್ವದ ಪ್ರತಿಗಾಮೀ ಶಕ್ತಿಗಳು ತಮ್ಮ ಬತ್ತಳಿಕೆಯಲ್ಲಿರುವ ಎಲ್ಲಾ ಅಸ್ತ್ರಗಳನ್ನು ಬಳಸುತ್ತಿವೆ. ಈ ಹಿನ್ನೆಲೆಯಲ್ಲಿ ಚೀಣಾದ ಕ್ರಾಂತಿವಿರೋಧಿ ಶಕ್ತಿಗಳಿಗೆ ಈ ದೇಶಗಳು ನೇರ ಬೆಂಬಲ ಹಾಗೂ ಕುಮ್ಮಕ್ಕು ನೀಡುತ್ತಿವೆ. ಸಾರ್ವಜನಿಕ ಅಭಿಪ್ರಾಯವನ್ನು ತಮ್ಮ ಪರವಾಗಿ ರೂಪಿಸಲು ಇವು ಅಪಪ್ರಚಾರದ ಮಹಾಪೂರವನ್ನೇ ಹರಿಯಬಿಟ್ಟಿವೆ. ಚೀಣಾದಲ್ಲಿ ಬಂಡವಾಳಶಾಹೀಯ ಮರು ಸ್ಥಾಪನೆಗೆ ಯತ್ನಿಸಿದ ಪಿತೂರಿಗಾರರನ್ನು ಬಹಿರಂಗವಾಗಿಯೇ ಬೆಂಬಲಿಸಿ ಕಮ್ಯೂನಿಸ್ಟ್-ವಿರೋಧಿ ಧಾರ್ವೋನ್ಮಾದ ಎಬ್ಬಿಸಲು ಬೂರ್ಜ್ವಾ ನಿಯಂತ್ರಣದ ಪತ್ರಿಕಾರಂಗ ಎಲ್ಲಾ ಸುಳ್ಳು ವಿಕೃತಿಗಳ ಮೊರೆ ಹೋಗಲೂ ಹಿಂಜರಿದಿಲ್ಲ ಎಂದು ಪಾಲಿಟ್ ಬ್ಯೂರೋ ಟೀಕಿಸಿದೆ.

ವಿದ್ಯಾರ್ಥಿಗಳ ಹಾಗೂ ಜನಗಳ ಸಮೂಹಗಳನ್ನು ಸಮಾಜವಾದೀ ವ್ಯವಸ್ಥೆಗೆ ಸವಾಲೆಸೆದ ಪಿತೂರಿಗಾರರಿಂದ ಪ್ರತ್ಯೇಕಿಸಲು ಜನತಾ ವಿಮೋಚನಾ ಸೇನೆ ನಿಷ್ಕಾರಣವಾಗಿ ತನ್ನ ಮೇಲೆ ಹಿಂಸಾಚಾರ ನಡೆಯುತ್ತಿದ್ದರೂ ಸಹನೆ ಕಳೆದುಕೊಳ್ಳದೆ ಸಂಯಮದಿಂದ ವರ್ತಿಸಿತು ಎಂಬುದರತ್ತ ಪಾಲಿಟ್ ಬ್ಯೂರೋ ಗಮನ ಸೆಳೆದಿದೆ.

ಬಂಡವಾಳ ಶಾಹೀಯ ಮರು ಸ್ಥಾಪನೆಗೆ, ಸಮಾಜವಾದೀ ಪ್ರಜಾಪ್ರಭುತ್ವದ ಬದಲು ಬೂರ್ಜ್ವಾ ಪ್ರಜಾಪ್ರಭುತ್ವ ತರಲು ಯತ್ನಿಸುವ ಇಂತಹ ಪ್ರವೃತ್ತಿಗಳ ವಿರುದ್ಧ ಹೋರಾಟದ ಅಗತ್ಯವನ್ನು ಚೀಣಾ ಕಮ್ಯುನಿಸ್ಟ್ ಪಕ್ಷ ಒತ್ತಿಹೇಳುತ್ತಾ ಬಂದಿದೆಯೆಂಬ ಸಂಗತಿಯ ಅರಿವೂ ಕೂಡಾ ತನಗಿದೆಯೆಂದಿರುವ ಪಾಲಿಟ್‌ಬ್ಯೂರೋ ಇಂತಹ ಪ್ರವೃತ್ತಿಯನ್ನು ಅದು ಬೂರ್ಜ್ವಾ ಉದಾರೀಕರಣ ಎಂದು ವರ್ಣಿಸಿತು ಎಂದಿದೆ. ಹಿಂದೆ ಜನವರಿ 1987ರಲ್ಲಿ ಪ್ರಧಾನ ಕಾರ್ಯದರ್ಶಿ ಹು ಯಾವೋ ಬಾಂಗ್‌ರ ಸ್ಥಾನದಲ್ಲಿ ಬೇರೆಯವರನ್ನು ಆರಿಸುವಂತಾಗುವ ಮಟ್ಟದವರೆಗೆ ವಿದ್ಯಾರ್ಥಿ ಕಾರ್ಯಾಚರಣೆಗಳು ಹೋಗಿದ್ದವು ಎಂದು ಗುರುತಿಸಿತು. ಆಗ ಪಕ್ಷ ಬೂರ್ಜ್ವಾ ಉದಾರೀಕರಣದ ವಿರುದ್ಧ ಆರಭ್ಭಿಸಿದ ಪ್ರಕ್ಷೋಭೆ ಧೃಢವಾದ ರೀತಿಯಲ್ಲಿ ನಡೆಯಲಿಲ್ಲವೆಂದು ಕಾಣುತ್ತದೆ ಎಂದು ವಿಶ್ಲೇಷಿಸುತ್ತಾ ಇದರ ಜೊತೆಗೆ ಚೀಣಾದ ಆಧುನೀಕರಣಕ್ಕೆ ಅಗತ್ಯ ಎಂದು ಭಾವಿಸಲಾದ ಕ್ರಾಂತಿ ಆರ್ಥಿಕ ಸುಧಾರಣೆಗಳೊಂದಿಗೇ ಬೂರ್ಜ್ವಾ ಸಿದ್ಧಾಂತಗಳ ಬೆಳವಣಿಗೆಯನ್ನು ಕೆಲವು ಎಚ್ಚರಿಕೆಗಳು ಸಮಾಜವಾದೀ ವ್ಯವಸ್ಥೆ ಹಾಗೂ ಚೀಣಾ ಕಮ್ಯುನಿಸ್ಟ್ ಪಕ್ಷದ ... ಕತ್ವಕ್ಕೇ ಸವಾಲೆಸೆಯಲು ಬಳಸಿಕೊಂಡವು ಎಂದು ಪಾಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಸಾಮ್ರಾಜ್ಯಶಾಹೀ ತಂತ್ರಗಳು ಹಾಗೂ ಸಮಾಜವಾದೀ ವ್ಯವಸ್ಥೆಯ ... ಯನ್ನು ಕುಂದಿಸಲು ಪ್ರಯತ್ನಿಸುವ ಇಂತಹ ಪ್ರವೃತ್ತಿಗಳ ವಿರುದ್ಧ ಚೀಣಾ ಕಮ್ಯುನಿಸ್ಟ್ ಪಕ್ಷ ತನ್ನ ಕೈಲ್ಲಾ... ದೃಢತೆಯನ್ನು ... ವಿಶ್ವಾಸವನ್ನು ಸಿ.ಪಿ. ವ್ಯ... ...ಸಿದೆ.

5 ನೇ ಪುಟಕ್ಕೆ



ಬಲಿಯಾದದ್ದು ಯಾರು? ಸೈನಿಕರೋ? ವಿದ್ಯಾರ್ಥಿಗಳೋ ಎಂಬುದಕ್ಕೆ ನಿಚ್ಚಳ ಉದಾಹರಣೆ. ಬಲಿಯಾದ ಸೈನಿಕ ಶಿರಸ್ತ್ರಾಣ, ಬಂದೂಕು ಬೀದಿಬೀದಿಯಲ್ಲಿ ಪ್ರದರ್ಶನವಾಯಿತು. ಸೈನಿಕರು ವಿದ್ಯಾರ್ಥಿಗಳೊಡನೆ ಸಂಯಮದಿಂದ ನಡೆದುಕೊಂಡರು ಎಂಬುದು ಇದರಿಂದ ಗೊತ್ತಾಗುತ್ತದೆ.

ರಾಜೀವ್ ಸರ್ಕಾರದ ರಾಜೀನಾಮೆ ಒತ್ತಾಯಿಸಿ

ಕಲ್ಕತ್ತೆಯಲ್ಲಿ ಎರಡು ಲಕ್ಷ ಕಾರ್ಮಿಕರ ರ‍್ಯಾಲಿ

ಸಿ.ಪಿ.ಐ.(ಎಂ) ಪಶ್ಚಿಮಬಂಗಾಳದ ಗ್ರಾಮೀಣ ಪ್ರದೇಶಗಳಲ್ಲೇನೋ ಭದ್ರವಾಗಿ ಕಾಲೂರುತ್ತಿದೆ. ಆದರೆ ನಗರಗಳಲ್ಲಿ ಅದು ಪ್ರಭಾವ ಕಳೆಕೊಳ್ಳುತ್ತಿದೆ- ಇದು ಬೂರ್ಜ್ವಾ ಪತ್ರಿಕಾ ವಿಶ್ಲೇಷಕರ ಸಾಮಾನ್ಯ ರಾಗ. ಜೂನ್ 25 ರಂದು ಕಲ್ಕತ್ತೆಯಲ್ಲಿ ನಡೆದ ಬೃಹತ್‌ರ‍್ಯಾಲಿ ಅವರ ವಿಶ್ಲೇಷಣೆಗಳನ್ನೆಲ್ಲಾ ತಲೆಕೆಳಗಾಗಿಸಿ ಅವರ ಭ್ರಮೆಯ ಗುಳ್ಳೆಯೊಡೆದಿದೆ. ಕಲ್ಕತ್ತೆಯ ಎರಡು ಲಕ್ಷ ಕಾರ್ಮಿಕರು ಇದರಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ಜೂನ್ 25 ರಂದು ಕಲ್ಕತ್ತೆಯ ಮುಖ್ಯ ದಾರಿಗಳು ಮಾತ್ರ ವಲ್ಲ ಬೀದಿಗಳು ಓಣಿಗಳು ಕೆಂಬಾವುಟ ಹೊತ್ತ ಜನಪ್ರವಾಹದಿಂದ ತುಂಬಿಹೋಗಿತ್ತು. ಇವರೆಲ್ಲಾ ಕಲ್ಕತ್ತೆಯ ನಿವಾಸಿಗಳೇ. ಹೊರ ಊರುಗಳಿಂದ, ಹಳ್ಳಿಗಳಿಂದ ಬಂದವರಲ್ಲ ಎಂಬುದು ಗಮನಾರ್ಹ. ಕಲ್ಕತ್ತಾ ಲಕ್ಷಾಂತರ ಕಾರ್ಮಿಕರ, ಕೆಳಮಧ್ಯಮ, ಮೇಲ್ಮಧ್ಯಮ ವರ್ಗಗಳ ನೌಕರರು, ಸಣ್ಣ ವ್ಯಾಪಾರಿಗಳು ರಿಕ್ಷಾ ಕೈಗಾಡಿ ನಡೆಸುವವರು, ತಲೆಹೊರೆ ಕೆಲಸಗಾರರು ಮುಂತಾದ ದುಡಿಯುವ ಜನಗಳಿಂದ ಕೂಡಿದ ನಗರ. ದೇಶದ ಎಲ್ಲಾ ಮೂಲೆಗಳಿಂದ ಬಂದ ಜನಗಳು ಇಲ್ಲಿದ್ದಾರೆ. (ಆದ್ದರಿಂದಲೇ "ಬಂಗಾಳಿಗಳಲ್ಲಿ ಮಾತ್ರ ಪ್ರಭಾವವಿರುವ ಸಿ.ಪಿ.ಐ.(ಎಂ)" ಗೆ ಹಳ್ಳಿಗಳಲ್ಲಿ ಇದ್ದಷ್ಟು ಪ್ರಭಾವ ಇಲ್ಲಿಲ್ಲ ಎಂಬುದು, ಲೆಕ್ಕಾಚಾರ) ಇವರೆಲ್ಲರಿಗೂ ಏಕೈಕ ಸಮಾನ ಅಂಶವೆಂದರೆ ಇವರೆಲ್ಲಾ ತಮ್ಮ ಶ್ರಮಶಕ್ತಿಮಾರಿ ಬದುಕು ನಡೆಸ ಬೇಕಾದವರು. ಆದ್ದರಿಂದಲೇ ಇವರನ್ನು ಸಂಘಟಿಸಲು ಕಮ್ಯುನಿಸ್ಟರ ವರ್ಗದೃಷ್ಟಿಗೆ ಮಾತ್ರ ಸಾಧ್ಯ. ಜೂನ್ 25ರ ರ‍್ಯಾಲಿಯಲ್ಲಿ ಹಿಂದಿ ಭಾಷಿಕ ಕಾರ್ಮಿಕರು ಗಮನಾರ್ಹ ಸಂಖ್ಯೆಯಲ್ಲಿದುದು ಎಲ್ಲರ ಗಮನ ಸೆಳೆದಿದೆ. ಮಹಿಳೆಯರೂ ಹಿಂದೆಂದೂ ಕಂಡಿರದ ರೀತಿಯಲ್ಲಿ ಈ ರ‍್ಯಾಲಿಯಲ್ಲಿ ಭಾಗವಹಿಸಿದರು.

ಸಂಪೂರ್ಣವಾಗಿ ಸಿ.ಪಿ.ಐ.(ಎಂ)ನ ಕಲ್ಕತ್ತಾ ಜಿಲ್ಲಾ ಸಮಿತಿ ಮಾತ್ರವೇ ಸಂಘಟಿಸಿದ್ದ ರ‍್ಯಾಲಿಯಿದು. ಕಳೆದ ಐದು ತಿಂಗಳಿಂದ ರಾಜೀವಗಾಂಧಿ ಸರಕಾರದ ರಾಜೀನಾಮೆ ಒತ್ತಾಯಿಸಿ ನಡೆದ ಪ್ರಚಾರ-ಪ್ರಕ್ಷೋಭೆಯ ಕೊನೆಯ ಹಂತ ಇದಾಗಿತ್ತು. ಕಲ್ಕತ್ತಾ ಜಿಲ್ಲಾ ಸಮಿತಿ ಇಷ್ಟೊಂದು ಬೃಹತ್ ಪ್ರಮಾಣದ ರ‍್ಯಾಲಿಯನ್ನು ಹಿಂದೆಂದೂ ನಡೆಸಿರಲಿಲ್ಲ.

ಕಳೆದ ಐದು ತಿಂಗಳಲ್ಲಿ ಕಲ್ಕತ್ತೆಯಲ್ಲಿ ಮನೆ-ಮನೆಗೆ ಹೋಗಿ ರಾಜಕೀಯ ಚರ್ಚೆ ನಡೆಸುವುದರ ಮೇಲೆ ಈ ಬಾರಿ ಜಿಲ್ಲಾ ಸಮಿತಿ ವಿಶೇಷ ಒತ್ತು ನೀಡಿತ್ತು. ಇತ್ತೀಚೆಗೆ ಕಲ್ಕತ್ತಾ ಜಿಲ್ಲಾ ಸಮಿತಿ ಬೀದಿ, ಓಣಿ ಮಟ್ಟದಲ್ಲಿ ಪಕ್ಷದ ಶಾಖೆ ರಚಿಸುವತ್ತ ಹೆಚ್ಚು ಗಮನ ನೀಡಿತ್ತು. ಇಂತಹ ಪ್ರತಿಯೊಂದು ಶಾಖೆಗೆ ನಿರ್ದಿಷ್ಟ ಸಂಖ್ಯೆಯ ಮನೆಗಳನ್ನು ಸಂಪರ್ಕಿಸುವ ಜವಾಬ್ದಾರಿ ವಹಿಸಲಾಗಿದೆ. ದೇಶದ, ರಾಜ್ಯದ, ಸ್ಥಳೀಯ ರಾಜಕೀಯ ಘಟನೆಗಳ ಬಗ್ಗೆ ಜನಗಳ ಪ್ರತಿಕ್ರಿಯೆ ತಿಳಿಯಲು, ಪಕ್ಷದಿಂದ ಅವರೇನು ಬಯಸುತ್ತಾರೆ ಎಂದು ತಿಳಿಯಲು, ಅವರ ಸಮಸ್ಯೆಗಳನ್ನು ಅರಿತು ಸಾಧ್ಯವಾದ ಪರಿಹಾರ ಒದಗಿಸಲು ಈ ಶಾಖೆಗಳಿಂದ ಸಾಧ್ಯವಾಗಿದೆ.

ಈ ಐದು ತಿಂಗಳಲ್ಲಿ ಪಕ್ಷದ ಕಾರ್ಯಕರ್ತರು ಮನೆ-ಮನೆಗಳಲ್ಲಿ ರಾಜೀವ್ ಸರ್ಕಾರದ ದಿವಾಳಿ ಕೋರನೀತಿಗಳು, ನಿರುದ್ಯೋಗ, ಹೆಚ್ಚುತ್ತಿರುವ ಬಡತನ, ಮುಚ್ಚುತ್ತಿರುವ ಕಾರ್ಖಾನೆಗಳು ಇವೆಲ್ಲದರ ಬಗ್ಗೆ ಚರ್ಚೆ ನಡೆಸಿದರು. ನಮ್ಮ ದೇಶ ಏಕೆ ಸಾಲದ ಬಲೆಯತ್ತ ಧಾವಿಸುತ್ತಿದೆ ಎಂದು ವಿವರಿಸಿದರು. ಆಳುವ ದೊಡ್ಡ ಜನಗಳ ಭ್ರಷ್ಟಾಚಾರಗಳು, ಹಗರಣಗಳ ವಿಶ್ಲೇಷಣೆ ನಡೆಸಿದರು. ಜನಗಳಿಗೆ ಪರಿಹಾರ, ಅಧಿಕಾರ ನೀಡುವ ನೆಪದಲ್ಲಿ ಹೇಗೆ ಅಧಿಕಾರದ ಕೇಂದ್ರೀಕರಣ ನಡೆಯುತ್ತಿದೆ, ರಾಜ್ಯಗಳ ಅಧಿಕಾರಗಳ ಹರಣ ನಡೆಯುತ್ತಿದೆ ಎಂದು ವಿವರಿಸಿದರು. ನಾಲ್ಕೂವರೆ ವರ್ಷಗಳ ಕಾಲ ಎಲ್ಲಾ ಜನವಿಭಾಗಗಳ ದುಃಖದುಮ್ಮಾನಗಳ ಬಗ್ಗೆ ಕಿವಿಗೊಡಲು ನಿರಾಕರಿಸುತ್ತಿದ್ದ ರಾಜೀವ್ ಗಾಂಧಿ ಬಡವರ, ದಲಿತರ, ಮಹಿಳೆಯರ ಬಗ್ಗೆ ಈಗ ವಿಶೇಷ ಸಹಾನುಭೂತಿ ಏಕೆ ಪ್ರದರ್ಶಿಸುತ್ತಿದ್ದಾರೆ ಎಂಬುದನ್ನು ಜನರೊಡನೆ ಚರ್ಚಿಸಿದರು.ಇದರ ಫಲವೇ ಜೂನ್ 25ರ ಇನ್ನೊಂದು ಐತಿಹಾಸಿಕ ರ‍್ಯಾಲಿ.

ಜೂನ್ 25ರಂದು ನಡೆದ ಬಹಿರಂಗ ಸಭೆ ಕಲ್ಕತ್ತಾ ಜಿಲ್ಲಾ ಸಮಿತಿಯ ಅತ್ಯಂತ ಹಿರಿಯ, ಅನುಭವೀ ಸದಸ್ಯರಾದ ಕಾ.ನರೇನ್‌ಸೆನ್‌ರ ಅಧ್ಯಕ್ಷತೆಯಲ್ಲಿ ನಡೆಯಿತು. ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ರಾಜ್ಯ ಕಾರ್ಯದರ್ಶಿ ಕಾಂ. ಸರೋಜ್ ಮುಖರ್ಜಿಯವರು ಸಭೆ ಯನ್ನು ಉದ್ದೇಶಿಸಿ ಮಾತನಾಡುತ್ತಾ ಕಳೆದ ಐದು ತಿಂಗಳ ಈ ಪ್ರಕ್ಷೋಭೆಯನ್ನು ಇನ್ನೂ ತೀವ್ರಗೊಳಿಸಿ ಟಿ.ವಿ., ರೇಡಿಯೋ, ಬೂರ್ಜ್ವಾ ಪತ್ರಿಕೆಗಳನ್ನು ಬಳಸಿ ಕಾಂಗ್ರೆಸ್ ನಡೆಸುತ್ತಿರುವ ಅಪಪ್ರಚಾರದ ಆಕ್ರಮಣವನ್ನು ಎದುರಿಸಬೇಕು ಎಂದರು.

ಕಲ್ಕತ್ತಾ ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ಪಶ್ಚಿಮ ಬಂಗಾಳ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಲಕ್ಷ್ಮಿ ಸೇನ್ ಮಾತನಾಡುತ್ತಾ ಪಶ್ಚಿಮಬಂಗಾಳ ಸರಕಾರ ಅಭಿವೃದ್ಧಿಗೆ ಹೋರಾಟದ ಪರ್ಯಾಯ ಮಾರ್ಗ ತೋರಿದೆಯೆಂದರು. ಒಂದೆಡೆ ಕೇಂದ್ರದ ಮುಚ್ಚಿದ ಕಾರ್ಖಾನೆಗಳ, ಹಣದುಬ್ಬರ, ಭ್ರಷ್ಟಾಚಾರಗಳ ನೀತಿ ಇನ್ನೊಂದೆಡೆ ದಬ್ಬಾಳಿಕೆಗಳನ್ನು ಎದುರಿಸಿ ಜನಗಳ ಹೋರಾಟದ ನೀತಿ. ಬಕ್ರೇಶ್ವರ ಯೋಜನೆ ಹಾಗೂ ಹಲ್ದಿಯಾ ಪೆಟ್ರೋ-ರಾಸಾಯನಿಕ ಯೋಜನೆಗಳು ಇದರ ಸ್ಪಷ್ಟ ಸಾಕ್ಷಿಗಳು ಎಂದರು. ಕಲ್ಕತ್ತಾ ಜಿಲ್ಲಾ ಸಮಿತಿಯ ಕರೆಗೆ ಓಗೊಟ್ಟು ನಡೆದ ಈಅತೀ ದೊಡ್ಡ ರ‍್ಯಾಲಿ ಸಿ.ಪಿ.ಐ. (ಎಂ) ನ ಶಕ್ತಿಯನ್ನು ಪೂರ್ಣವಾಗಿ ತೋರಿಸಿಕೊಟ್ಟಿದೆಯೆಂದರು.

ಪಶ್ಚಿಮ ಬಂಗಾಳದ ಭೂಕಂದಾಯ ಮಂತ್ರಿ ಹಾಗೂ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಸದಸ್ಯ ಕಾಂ. ಬಿನೊಯ್ ಚೌಧುರಿ ಕಲ್ಕತ್ತಾ ಜಿಲ್ಲಾ ಸಮಿತಿಯನ್ನು ಈ ಭವ್ಯ ಪ್ರದರ್ಶನಕ್ಕಾಗಿ ಅಭಿನಂದಿಸುತ್ತಾ ಎಡರಂಗ ಸರ್ಕಾರ ರೂಪಿಸಿರುವ ಪರ್ಯಾಯ ಮಾರ್ಗವನ್ನು ಬಲಗೊಳಿಸಬೇಕಾದುದರಮಹತ್ವವನ್ನು ವಿವರಿಸಿದರು.

ಕಲ್ಕತ್ತಾ ಜಿಲ್ಲಾ ಸೆಕ್ರೆಟಾರಿಯಟ್ ಸದಸ್ಯರುಗಳಾದ ಕಾಂ. ಶ್ಯಾಮಲ ಚಕ್ರವರ್ತಿ ಮತ್ತು ಕಾಂ.ರಾಜದೇವ್ ಗಯೋಲಾ ಕೂಡಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು. ರಾಜೀವ್‌ಗಾಂಧಿಯವರನ್ನು ಅಧಿಕಾರದಿಂದಿಳಿಸುವ ಹೋರಾಟ ಜೀವನಕ್ಕಾಗಿಯಲ್ಲ ಮುಂದೆಯೂ ನಾವು ಬದುಕುಳಿಯಬೇಕು ಎನ್ನುವುದಕ್ಕಾಗಿ; ಉತ್ತಮ ಆಹಾರಕ್ಕಾಗಿ ಅಲ್ಲ, ಅನ್ನ ರೊಟ್ಟಿಗಾಗಿ ಎಂದರು.

ಈ ರ‍್ಯಾಲಿ ಕಲ್ಕತ್ತೆಯ ಪಕ್ಷದ ಸಂಘಟನೆಯಲ್ಲಿ ಹೊಸ ಉತ್ಸಾಹ, ಚೈತನ್ಯ ಹುಟ್ಟಿಸಿದೆ.

'ಉದಯಿಸಿತು ಸುಂದರಯ್ಯನಗರ'

ಬಳ್ಳಾರಿ ಜಿಲ್ಲೆ ಸಂಡೂರುತಾಲೂಕು ತೋರಣಗಲ್ಲು ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನ 'ಗೊಳ್ಳ ಬೇಕಾಗಿರುವ ಪ್ರಸಿದ್ಧ ಸ್ಥಳ. ಇಲ್ಲಿ ಡಿ.ವೈ.ಎಫ್.ಐ. ಜನತಾಕಾ ಲೋನಿಯ ನಿವೇಶನ ರಹಿತ ಕೃಷಿಕೂಲಿಗಾರರನ್ನು ಸಂಘಟಿಸಿ ಅವರಿಗೆ ನಿವೇಶನದ ಹಕ್ಕು ಪತ್ರ ನೀಡಬೇಕೆಂದು ನಡೆಸಿದ ಹೋರಾಟ ಕೈಗೂಡಿದೆ.

ಅಂದು ಆ ಕೃಷಿ ಕೂಲಿಗಾರರ ಮುಖದಲ್ಲಿ ಹರ್ಷದ ಹೊನಲು. ಭಾರತದ ದುಡಿಯುವ ಜನತೆಯ ಅಪ್ರತಿಮ ಹೋರಾಟಗಾರ ದಿ॥ಕಾ॥ ಪಿ.ಸುಂದರಯ್ಯ ನಗರವೆಂದು ಹೆಸರಿಡಲಾಗಿತ್ತು ಈ ಬಡಾವಣೆಗೆ. ಈ ಉತ್ಸಾಹದ ಸಮಾರಂಭವನ್ನು ರಾಜ್ಯದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕ ಕಾ॥ ಎನ್.ಕೆ. ಉಪಾಧ್ಯಾಯರು ಉದ್ಘಾಟಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮಂಡಲ ಪ್ರಧಾನ ಅರಿಕೇರಿ ಬಸಪ್ಪ ಪಟ್ಟಾ ವಿತರಣೆ ಮಾಡಿದರು. ತಾಲೂಕಿನ ನಾಯಕರಾದ ಕಾ॥ ಜಂಬಯ್ಯನಾಯಕ್, ಸುರೇಶ್ ಕುಷ್ಟಗಿ, ಚೆನ್ನಬಸಯ್ಯ, ಎಸ್.ಶಂಕಣ್ಣ, ವಿರೇಶ್‌ರವರುಗಳು ಮಾತ ನಾಡಿದರು. ಈ ಸಭೆಯಲ್ಲಿ ಸುಮಾರು 500 ಮಂದಿ ಪಾಲ್ಗೊಂಡಿದ್ದರು.

ಡಿ.ವೈ.ಎಫ್.ಐ 4ನೇ ಕೇರಳ ರಾಜ್ಯ ಸಮ್ಮೇಳನದ ಕರೆ

ಐದು ಕೋಟಿಮಾನವ ದುಡಿಮೆಯ ದಿನಗಳ ಅಪೂರ್ವ ಕೊಡುಗೆ

ನೆನಪಿನಲ್ಲಿ ಅಚ್ಚಳಿಯದೇ ಉಳಿಯುವ, ಚಿರಸ್ಮರಣೀಯವಾಗೀ ಯಾವಾಗಲೂ ಉಲ್ಲೇಖಿಸ ಬೇಕಾದ ಘೋಷಣೆಯ ನಿರ್ಣಯವಿದು. ಯುವ ಸಂಘಟನೆಗಳಿಗೆ ಯುವ ಶಕ್ತಿಗೆ ತೋರು ದೀಪ ವಾಗಲಿರುವ ಐಕ್ಯ ಶ್ರಮದ ನಿರ್ಣಯ. ಅದೇ ಕೇರಳ ರಾಜ್ಯ ಡಿ.ವೈ.ಎಫ್.ಐ. 4ನೇ ರಾಜ್ಯ ಸಮ್ಮೇಳನ ಸ್ವೀಕರಿಸಿರುವ ಐದು ಕೋಟಿ ಮಾನವ ದುಡಿಮೆಯ ದಿನಗಳನ್ನು ಮೊದಲ ಕಂತಾಗಿ ದಾನ ಮಾಡುವ ಐತಿಹಾಸಿಕ ನಿರ್ಧಾರ.

ಯುವ ಸಮಸ್ಯೆಗಳನ್ನು ಅರಿಯದ ಯುವ ಪ್ರಧಾನಿಯ ಆಡಳಿತಾವಧಿಯಲ್ಲಿ ಯುವ ಶಕ್ತಿ ಯುವ ಪ್ರತಿಭೆ ನಶಿಸುತ್ತಿದೆ. ದುಡಿಯುವ ಕೈಗಳಿಗೆ ಕೆಲಸವಿಲ್ಲದೆ ದಿನ ನಿತ್ಯವೂ ಲಕ್ಷಾವಧಿ ದುಡಿಮೆಯ ದಿನಗಳು ಹಾಳಾಗುತ್ತಿವೆ. ದುಡಿಯುವ ಕೈಗಳಿಗೆ ಕೆಲಸ ನೀಡುವುದಾದರೆ, ಕೋಟಿಗಟ್ಟಲೆ ನಿರುದ್ಯೋಗಿಗಳನ್ನು ಅನಕ್ಷರಸ್ಥರನ್ನು ಹಾಗೂ ನಿವಾರಿಸಲಾಗದ ಅಸಮಾನತೆಗಳನ್ನು ಹೊಂದಿರುವ ರಾಜೀವ್‌ರವರ ಇಪ್ಪತ್ತೊಂದನೆಯ ಶತಮಾನಕ್ಕೆ ಬದಲಾಗಿ,ರಾಷ್ಟ್ರ, ಈ ಸಮಸ್ಯೆಗಳಿಂದ ಮೈದಡವಿಕೊಂಡು ಹಸಿರುಮಯವಾಗುತ್ತದೆ. ವಿಜ್ಞಾನ ತಂತ್ರಜ್ಞಾನ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಐಕ್ಯವಾಗುತ್ತದೆ. ಇಪ್ಪತ್ತೊಂದನೆಯ ಶತಮಾನದ ಮುಂಬೆಳಗು ಹೊಂಬೆಳಕಾಗುತ್ತದೆ.

ರಾಷ್ಟ್ರ ಕಟ್ಟುವ ಈ ನಿಟ್ಟಿನಲ್ಲಿ ಡಿ.ವೈ.ಎಫ್.ಐ. ಕೇರಳ ಘಟಕವು ಪಾದಾರ್ಪಣೆಗೆ ಮೂಡಿದೆ. ಕೇರಳ ರಾಜ್ಯದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಅದು ತನ್ನ ಅದ್ವಿತೀಯ ಸದಸ್ಯ ಬಲದ ಯುವಶಕ್ತಿಯನ್ನು ಬಳಸಿ ಮೊದಲ ಕಂತಾಗಿ ಐದುಕೋಟಿ ಮಾನವ ದಿನಗಳ ಶ್ರಮದಾನ ಮಾಡಲಿದೆ. ಇದು ಕೇರಳ ರಾಜ್ಯಕ್ಕೂ ರಾಷ್ಟ್ರಕ್ಕೂ ಅತ್ಯಮೂಲ್ಯ ಕೊಡುಗೆಯಾಗಿದೆ.

24,06,969 ಸದಸ್ಯತ್ವವನ್ನು ಪ್ರತಿನಿಧಿಸಿದ್ದ 125ಮಹಿಳಾ ಪ್ರತಿನಿಧಿಗಳನ್ನೊಳಗೊಂಡ ಪ್ರತಿನಿಧಿಗಳ ನಾಲ್ಕನೇ ರಾಜ್ಯ ಡಿ.ವೈ.ಎಫ್.ಐ. ಸಮ್ಮೇಳನವು ಜೂನ್ ಒಂದರಂದು ಕಾಂ॥ ವಿ.ಎಸ್. ಅಚ್ಯುತಾನಂದನ್ ರವರಿಂದ ಉದ್ಘಾಟಿಸಲ್ಪಟ್ಟಿತು.

ಅಚ್ಯುತಾನಂದನ್‌ರವರು ರಾಜೀವ್‌ರವರ ಚುನಾವಣಾ ಘೋಷಣೆಗಳು ಹಾಗೂ ಸುಳ್ಳು ಆಶ್ವಾಸನೆಗಳನ್ನು ಬಯಲು ಮಾಡುತ್ತಾ ತನ್ನ ಪಕ್ಷದಲ್ಲಿ ಆಂತರಿಕ ಚುನಾವಣೆ ನಡೆಸದ ಕೇವಲ ಆಜ್ಞೆಗಳ ಮೂಲಕ ಏಕೀಕರಣ ನಡೆಸುತ್ತಿರುವ ರಾಜೀವ್ ತಮ್ಮ ಪಕ್ಷದ ಆಡಳಿತವಿರುವ ರಾಜ್ಯಗಳಲ್ಲಿ ಜನರಿಗೆ ಅಧಿಕಾರ ನೀಡಿದೆ ಕಾಂಗ್ರೆ ಸದಸ್ಯರ ಕಪಿಮುಷ್ಟಿಯಲ್ಲಿ ಕೇಂದ್ರೀಕರಣಗೊಂಡು ಹೆಪ್ಪುಗಟ್ಟಿರುವಾಗ ಜನತೆಗೆ ಅಧಿಕಾರ ಎಂದು ಬೊಬ್ಬಿಡುತ್ತಿರುವ ರಾಜೀವ್‌ರ ಅಪ್ರಾಮಾಣಿಕತನವನ್ನು ಬಯಲು ಮಾಡಿದರು. ಹಾಗೆ ನೋಡಿದರೆ, ಕಾಂಗ್ರೆಯೇತರ ರಾಜ್ಯ ಸರ್ಕಾರಗಳು ಪ್ರಜಾಸತ್ತಾತ್ಮಕವಾಗಿ ಐದು ವರ್ಷಗಳಿಗೊಮ್ಮೆ ಪಂಚಾಯತ್ ಚುನಾವಣೆ ನಡೆಸಿವೆ. ಅಧಿಕಾರದ ವಿಕೇಂದ್ರೀಕರಣ ಹೆಸರಿನಲ್ಲಿ ರಾಜೀವ್ ಪಕ್ಷ ಸಂವಿಧಾನ ತಿದ್ದುಪಡಿಗೆ ಹೊರಟಿರುವುದು ಜಿಲ್ಲಾಧಿಕಾರಿಗಳು ಹಾಗೂ ರಾಜ್ಯಪಾಲರುಗಳ ಮೂಲಕ ದೆಹಲಿಯಿಂದ ಆಡಳಿತ ನಡೆಸುವ ಸಲುವಾಗಿ, ರಾಜೀವ್‌ರವರ ಈ ಸರ್ವಾಧಿಕಾರಿ ಹೆಜ್ಜೆ ರಾಷ್ಟ್ರದ ಫೆಡರಲ್ ತತ್ವದ ತಳಹದಿಗೆ ಕೊಡಲಿ ಪೆಟ್ಟು ಕೊಡುತ್ತದೆ ಎಂದು ಹೇಳಿದ ಅವರು ಜವಾಹರ್ ರೋಜ್ಗಾರ್ ಯೋಜನೆ ಜನರನ್ನು ವಂಚಿಸುವುದಾಗಿದೆ ಎಂದರು.

ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಕಾಂ॥ ಇ.ಎಂ.ಎಸ್. ರವರು ಪ್ರತಿನಿಧಿಗಳ ಗಮನ ಸೆಳೆದು ಶುಭಾಶಯಕೋರಿ ಮಾತನಾಡುತ್ತ ಡಿ.ವೈ.ಎಫ್.ಐ. ನಿರುದ್ಯೋಗದ ವಿರುದ್ಧ ಹೋರಾಟ ನಡೆಸಿ ಕೆಲವು ಸಾಧನೆಗಳನ್ನು ಮಾಡಿರುವುದರ ಜೊತೆಯಲ್ಲಿಯೇ ಯುವ ಜನರು ಸ್ವಯಂ ಸೇವಾ ಮನೋಭಾವದಿಂದ ಅಭಿವೃದ್ಧಿ ಕಾರ್ಯಗಳಲ್ಲಿಯೂ ರೈತ ಕಾರ್ಮಿಕರು, ಕೃಷಿಕೂಲಿಗಾರರು, ಮಹಿಳೆಯರು ನೌಕರರು ಹಾಗೂ ಮಧ್ಯಮವರ್ಗದವರನ್ನು ಐಕ್ಯಗೊಳಿಸಿ ರಾಜ್ಯ ಹಾಗೂ ಸರ್ಕಾರ ಎದುರಿಸುತ್ತಿರುವ ಅಭಿವೃದ್ಧಿಕಾರ್ಯಗಳನ್ನು ಸುಗಮಗೊಳಿಸ ಬ ನಿಧಿ ಸಂಗ್ರಹ, ಸ್ವಯಂ ಸೇವೆ ಇವೇ ಮುಂತಾದ ಚಟುವಟಿಕೆಗಳಲ್ಲಿ ತೊಡಗುವ ಗುರಿ ಹೊಂದಬೇಕೆಂದು ಹೇಳಿದರು. ಕೇಂದ್ರದಿಂದ ಏನನ್ನು ನಿರೀಕ್ಷಿಸುತ್ತೇವೆಯೋ ಅದನ್ನು ಜನರೇ ಮಾಡುವಂತಹ ಕಾರ್ಯನಿರೂಪಿಸಬೇಕು ಎಂದರು.

ಕೇರಳ ರಾಜ್ಯ ಸತತವಾಗಿ ಸಂಪನ್ಮೂಲ ಮಲತಾಯಿಧೋರಣೆಗಳಿಂದಲೂ ತತ್ತರಿಸುತ್ತಿರುವ ಈ ಸಂದರ್ಭದಲ್ಲಿ ಕೇರಳ ರಾಜ್ಯದ ಅಭಿವೃದ್ಧಿಯಲ್ಲೂ ರಾಜ್ಯ ಸರ್ಕಾರವನ್ನು ಮುನ್ನಡೆಸುವಲ್ಲಿಯೂ ನಿರಂತರ ನೆರವು ನೀಡಬೇಕೆಂದ ಇ.ಎಂ.ಎಸ್. ಈ ವಿಷಯವಾಗಿ ಕೇವಲ ಯು.ಡಿ.ಎಫ್. ಜೊತೆಯಲ್ಲಿಯೂ ಜಂಟಿ ಪ್ರಯತ್ನ ಮಾಡಬಹುದೆಂದರು.

ಡಿ.ವೈ.ಎಫ್.ಐ.ನ ಸದ್ಯದ ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಯಶಸ್ವೀ ಬೆಳವಣಿಗೆಯು ಅದು ಯಾವ ದಾರಿ ಅನುಸರಿಸುತ್ತದೋ ಅದನ್ನೇ ಅವಲಂಬಿಸಿದೆ ಎಂದರು.

ಐದು ಕೋಟಿ ದುಡಿಮೆಯ ದಿನಗಳ ಕೊಡುಗೆ

ಇ.ಎಂ.ಎಸ್.ರವರ ಕರೆಯಮೇರೆಗೆ ಸಮ್ಮೇಳನವು ಐದು ಕೋಟಿ ಮಾನವ ದಿನಗಳ ದುಡಿಮೆಯನ್ನು ಮೊದಲ ಕಂತಾಗಿ ಕೇರಳ ರಾಜ್ಯದ ಅಭಿವೃದ್ಧಿಗೆ ನೀಡುವ ನಿರ್ಣಯಕೈಗೊಂಡಾಗ 'ದೀರ್ಘ ಕಾಲ ಕರತಾಡನ ಮಾಡಿ ಪ್ರತಿನಿಧಿಗಳು ಸ್ವೀಕರಿಸಿದರು. ಜವಾಹರ್‌ರೋಜ್ಗಾರ್ ಯೋಜನೆಯನ್ವಯ ಕಡುಬಡ ತನದಲ್ಲಿರುವ ಕುಟುಂಬ ಗಳಿಗೆ ತಲಾ ಒಂದು ಉದ್ಯೋಗ ನೀಡುವು ದಾದರೆ, ಯೋಜನೆಗಾಗಿ ಇಡಲಾಗಿದೆ ಎಂದು ಹೇಳಲಾಗಿರುವ 1050 ಕೋಟಿ ರೂಪಾಯಿಗಳು ಕೇವಲ 17 ದಿನಗಳು ಸಂಬಳ ನೀಡಲು ಸಾಲದಾಗುವುದು ಎಂದು ಸಮ್ಮೇಳನ ನಿರ್ಣಯಿಸಿದೆ. ಆದ್ದರಿಂದ ಸರ್ಕಾರದ ಈ ಕಪಟ ತಂತ್ರಗಾರಿಕೆಯನ್ನು ಬಯಲು ಮಾಡಬೇಕೆಂದು ನಿರ್ಧರಿಸಲಾಗಿದೆ.

ಮಾನವ ಗೋಡೆ

ಕಿವಿಗಡಚಿಕ್ಕುವ ಕರತಾಡನಗಳ ಮಧ್ಯೆ ಸಮ್ಮೇಳನವು ಮತ್ತೊಂದು ನಿರ್ಣಯ ಮಾಡಿದೆ. ಅದು 'ಮಾನವ ಗೋಡೆಯ ನಿರ್ಮಾಣ' ಆಗಸ್ಟ್ 15, 1986 ರಂದು ಕಿ.ಮೀ. ದೂರ ನಿರ್ಮಿಸಿದ ಮಾನವ ಸರಪಳಿಯ ಐತಿಹಾಸಿಕ ನೆನಪಿದೆ. ಈ ವರ್ಷ ಆಗಸ್ಟ್ 15ರಂದು ಕೇರಳದ ಉದ್ದಕ್ಕು ಮಾನವ ಗೋಡೆ ನಿರ್ಮಾಣವಾಗಲಿದೆ.

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರವು ಆರ್ಥಿಕ ಅಸಹಕಾರದ ಅಘೋಷಿತ ಯುದ್ಧದ ವಿರುದ್ಧ ಈ ಮಾನವ ಮಹಾ ಗೋಡೆ ಏಳಲಿದೆ.

ಡಿ.ವೈ.ಎಫ್.ಐ.ನ ಲಕ್ಷಾವಧಿ ಸೇವಕರು ಸಮ್ಮೇಳನದ ರ‍್ಯಾಲಿಯಲ್ಲಿ ಎಲ್ಲಾ ರಸ್ತೆ, ಅಡ್ಡ ರಸ್ತೆಗಳಿಂದ ಯುವ ಪ್ರವಾಹ ಹರಿದು ಬಂದು ಯುವ ಶಕ್ತಿಯ ಪ್ರದರ್ಶನ ಮಾಡಿದ್ದಾರೆ. ಎಲ್.ಡಿ.ಎಫ್. ಸರ್ಕಾರವನ್ನು ಉರುಳಿಸಬೇಕೆಂದು ರಾಜೀವ್ ರವರ ಕೊಚ್ಚಿನ್ ಭಾಷಣಕ್ಕೆ ಉತ್ತರ ನೀಡಿದ್ದಾರೆ.

—ಎಸ್. ಶಿವರಾಂ

ರಾಜೀವ್ ಗಾಂಧಿ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ದೂರದರ್ಶನ ಆಕಾಶವಾಣಿ ಮುತ್ತಿಗೆ-ಬಂಧನ

ಗುಲ್ಬರ್ಗಾ ಜಿಲ್ಲೆಗೆ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಜೂನ್ 21 ರಂದು ಬೇಟಿ ನೀಡಿದ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೂರುಮಂದಿ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶನ ನಡೆಸಿ ಅವರು ಅಲ್ಲಿಂದ ಹಿಂತಿರುಗುವಂತೆ ಒತ್ತಾಯಿಸಿದರು.

ಪ್ರಜಾಪ್ರಭುತ್ವ ರೀತಿಯಲ್ಲಿ ಜನತೆಯಿಂದ ಚುನಾಯಿತವಾದ ಬೊಮ್ಮಾಯಿ ಸರ್ಕಾರವನ್ನು ವಜಾಗೊಳಿಸಿದನ್ನು ತೀವ್ರವಾಗಿ ಪ್ರತಿಭಟಿಸಿ ಪ್ರಜಾಪ್ರಭುತ್ವ ಕೊಲೆ ಮಾಡುವ ರಾಜೀವ್ ಗಾಂಧಿ ಹಿಂತಿರುಗಲಿ ಎಂದು ಘೋಷಣೆ ಕೂಗಿದ ಕಾರ್ಯಕರ್ತರನ್ನು ಪೋಲಿಸರು ಬಂಧಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ|| ಕಲ್ಲಪ್ಪ ಕಿರಣಗಿ, ಮಾರುತಿ ಮಾನ್ಪಡೆ, ಬಸವರಾಜ ಮರಡಿಯವರು ನೇತೃತ್ವ ವಹಿಸಿದ್ದರು.

ಕೇಂದ್ರದ ಕಾಂಗ್ರೆಸ್ (ಐ) ಸರ್ಕಾರ ಪ್ರಸಾರ ಮಾಧ್ಯಮಗಳಾದ ದೂರದರ್ಶನ ಹಾಗೂ ಆಕಾಶವಾಣಿಗಳನ್ನು ತನ್ನ ಪಕ್ಷದ ಪ್ರಚಾರ ಪ್ರಕ್ರೋಭೆಗಳಿಗಾಗಿ ದುರುಪಯೋಗ ಪಡಿಸುತ್ತಿರುವ ನೀತಿಯನ್ನು ಪ್ರತಿಭಟಿಸ ಬೇಕೆಂದು ರಾಷ್ಟ್ರೀಯ ರಂಗ ಹಾಗೂ ಎಡಪಕ್ಷಗಳು ಜೂನ್ 26 ರಂದು ನೀಡಿದ ಜಂಟಿ ಕರೆಯಂತೆ ಕರ್ನಾಟಕದಲ್ಲಿ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನಡೆದ ಪ್ರತಿಭಟನೆಗಳ ವಿವರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಗುಲ್ಬರ್ಗಾ

ತಿಮ್ಮಾಪುರಿ ಚೌಕದಿಂದ ಹೊರಟ 300 ಕ್ಕೂ ಮೇಲ್ಪಟ್ಟ ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ. ಪಕ್ಷದ ಕಾರ್ಯಕರ್ತರು ಆಕಾಶವಾಣಿ ಕೇಂದ್ರದ ಮುಂದೆ ಧರಣಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು.

ಧರಣಿಯನ್ನುದ್ದೇಶಿಸಿ ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕಾ|| ಕಲ್ಲಪ್ಪ ಕಿರಣಗಿ, ಗುಲಾಮ ಇಬ್ರಾಹಿಂ, ಮಾರುತಿ ಮಾನ್ಪಡೆ. ಸಿ.ಪಿ.ಐ.ನ ಮುಖಂಡ ಅಡವೆಪ್ಪನವರು ಮಾತನಾಡಿ ಪ್ರಸಾರ ಮಾಧ್ಯಮದ ದುರುಪಯೋಗ ಮುಂದುವರಿದಿದ್ದೆ ಆದರೆ ಮುಂದೆ ತೀವ್ರ ರೀತಿಯ ಹೋರಾಟವನ್ನು ಎದುರಿಸಬೇಕಾಗುತ್ತದೆ ವೆಂದು ಎಚ್ಚರಿಸಿದರು. ಕಾಂಗ್ರೆಸ್(ಐ) ಸರಕಾರ ಎಲ್ಲಾ ರಂಗಗಳಲ್ಲೂ ವಿಫಲವಾಗಿದ್ದು ಜನ ವಿಶ್ವಾಸವನ್ನು ಕಳಕೊಂಡಿದೆ ಎಂದ ಅವರುಗಳು ಎಡ-ಪ್ರಜಾಪ್ರಭುತ್ವ ಶಕ್ತಿಗಳನ್ನು ಮುಂದಿನ ಚುನಾವಣೆಯಲ್ಲಿ ಬಲಪಡಿಸ ಬೇಕೆಂದು ಜನತೆಗೆ ಕರೆನೀಡಿದರು.

ಬಿಜಾಪುರ

ಸಿ.ಪಿ.ಐ.(ಎಂ), ಸಿ.ಪಿ.ಐ. ಜನತಾದಳದ ಸುಮಾರು 100 ಮಂದಿ ಕಾರ್ಯಕರ್ತರು ಬಿಜಾಪುರ ದೂರದರ್ಶನ ಕೇಂದ್ರಕ್ಕೆ ಮುತ್ತಿಗೆ ಹಾಕಿ ಬಂಧನಕ್ಕೊಳಗಾದರು. ಈ ಮುತ್ತಿಗೆ ಕಾರ್ಯಕ್ರಮದಲ್ಲಿ ಡಿ.ವೈ.ಎಫ್.ಐ. ಎಸ್.ಎಫ್.ಐ. ಹಾಗೂ ಹಲವಾರು ಮಹಿಳೆಯರು ಪಾಲ್ಗೊಂಡಿದ್ದರು. ಬಂಧಿತರಲ್ಲಿ ಸಿ.ಪಿ.ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾ|| ಭೀಮಸಿ ಕಲಾದಗಿ, ಜನತಾದಳದ ಲೋಕಸಭಾ ಸದಸ್ಯ ಎಸ್.ಎಂ.ಗುರಡಿ, ಮಾಜಿ ಸಚಿವರಾದ ಜಿ.ಎಸ್.ದೇಶಮುಖ್ ರಮೇಶ್ ಜಿಗಜೇನಿಗಿ ಜಿಲ್ಲಾಪರಿಷತ್ ಉಪಾಧ್ಯಕ್ಷೆ ಶ್ರೀಮತಿ ಸುಮನಕೊಲಾರ ಸಿ.ಪಿ.ಐ. ನ ಎಲ್.ಬಿ.ಲಾಯದಗುಂದಿ, ಎಲ್.ಕೆ. ಚಂಚಲಕರ, ಡಿ.ವೈ.ಎಫ್.ಐ.ನ ಮನ್ನುಸಾಬ ಕಲಾದಗಿ, ಸದಾನಂದ ಮೋದಿ, ಎಸ್.ಎಫ್.ಐ.ನ ಎಂ.ವಿ.ಕರಡಿ ಮತ್ತು ಹಲವಾರು ಜಿಲ್ಲಾ ಪರಿಷತ್ ಸದಸ್ಯರು ಮಂಡಲ ಪಂಚಾಯ್ತಿ ಸದಸ್ಯರು ಪಾಲ್ಗೊಂಡಿದರು.

ಮನೆ ಕಂದಾಯಏರಿಕೆ ವಿರುದ ಬಿಜಾಪುರ ಬಂದ್ ನಗರ ಸಭೆ ಮುತ್ತಿಗೆ

ಸಿ.ಪಿ.ಐ.(ಎಂ), ಸಿ.ಪಿ.ಐ. ಹಾಗೂ ಜನತಾದಳ ಪಕ್ಷಗಳ ಜಂಟಿ ಆಶ್ರಯದಲ್ಲಿ ಜೂನ್ 29 ರಂದು ಬಿಜಾಪುರ ನಗರ ಸಭೆ ಇತ್ತೀಚೆಗೆ ಏರಿಸಿದ ಮನೆ ಕಂದಾಯವನ್ನು ಪ್ರತಿಭಟಿಸಿ ಬಿಜಾಪುರ ಬಂದ್‌ಗೆ ನೀಡಿದ ಕರೆ ಅತ್ಯಂತ ಯಶಸ್ವಿಯಾಗಿದೆ.

ಮೊದಲಿನದಕ್ಕಿಂತ ಮನೆ ಕಂದಾಯದ 10ಪಟ್ಟು ಏರಿಕೆಯನ್ನು ಪ್ರಕಟಿಸಿದ ನಗರ ಸಭೆಯ ಭ್ರಷ್ಟ ಆಡಳಿತದ ವಿರುದ್ಧ ಉಗ್ರ ರೀತಿಯಲ್ಲಿ ಪ್ರತಿಭಟಿಸಿ ಬೃಹತ್ ಪ್ರದರ್ಶನದಲ್ಲಿ ಪಾಲ್ಗೊಂಡ ಬಿಜಾಪುರ ನಗರದ ಜನತೆ 5ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ ಅಭೂತ ಪೂರ್ವ ಆಕ್ರೋಶ ವ್ಯಕ್ತಪಡಿಸಿದರು. ಕನಿಷ್ಠ ನಾಗರೀಕ ಸೌಲಭ್ಯಗಳು ಇಲ್ಲದ, ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯಸೌಕರ್ಯ ಒದಗಿಸದೇ ಮನೆ ಕಂದಾಯವನ್ನು ಏರಿಸಿದ ನಗರಸಭೆ ಆಡಳಿತವನ್ನು ತರಾಟೆಗೆ ತೆಗೆದುಕೊಂಡ ಸಿಟ್ಟಿಗೆದ್ದ ಜನರು ಮುತ್ತಿಗೆ ಹಾಕಿ ಏರಿಸಿರುವ ತೆರಿಗೆ ಹಿಂತೆಗೆದುಕೊಂಡು ಕೂಡಲೇ ಸೌಲಭ್ಯ ನೀಡುವಂತೆ ಒತ್ತಾಯಿಸಿತು.

ತೆರಿಗೆ ನಿರ್ಧಾರ ತಮ್ಮಿಂದಾಗಿಲ್ಲದೆ ಅಸಸ್‌ಮೆಂಟ್ ಒತ್ತಡದ ಪರಿಣಾಮದಿಂದಾಗಿದೆ ಎಂದು ಹೇಳಿ ಬಹಳಷ್ಟು ಜನರಿಗೆ ಅನ್ಯಾಯವಾಗಿರುವುದರಿಂದ ಇದನ್ನು ಸರಿಪಡಿಸಲಾಗುವುದೆಂದು ನಗರಸಭೆಯ ಕಮಿಷನರ್‌ರವರು ನೆರೆದ ಜನರಿಗೆ ಆಶ್ವಾಸನೆ ನೀಡಿದರು.

ನಂತರ ಮುಂದೆಸಾಗಿದ ಮೆರವಣಿಗೆ 1ಗಂಟೆಗಳ ಕಾಲ ರಸ್ತೆರೋಕೋ ಚಳುವಳಿ ಮಾಡಿ ಬಸ್ ಸಂಚಾರವನ್ನು ಅಸ್ತವ್ಯಸ್ತಗೊಳಿಸಲಾಯಿತು. ಅಲ್ಲಿಂದ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಮನವಿ ಅರ್ಪಿಸಲಾಯಿತು. ತೆರಿಗೆ ಏರಿಕೆಯನ್ನು ಕುರಿತು ಪರಿಶೀಲಿಸುವುದಾಗಿ ಜಿಲ್ಲಾಧಿಕಾರಿ ಭರವಸೆ ನೀಡಿದರು.

ಸಂಜೆ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿ.ಪಿ.ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾ|| ಭೀಮಸಿ ಕಲಾದಗಿ, ಸಿ.ಪಿ.ಐ. ನ ಲಾಯದಗುಂದಿ, ಜನತಾದಳದ ರಾಜಪ್ಪಾ ಔರಂಗಬಾದ, ಡಿ.ವೈ.ಎಫ್.ಐ. ಸದಾನಂದ ಮೋದಿ, ಮನ್ನೂಸಾಬ ಕಲಾದಗಿ ಯವರು ಮಾತನಾಡಿ ನಗರಸಭೆ ಹಾಗೂ ಜಿಲ್ಲಾಧಿಕಾರಿಗಳು ತೆರಿಗೆ ಏರಿಕೆ ಹಿಂತೆಗೆದುಕೊಳ್ಳದಿದ್ದರೆ ನಗರದ ಜನರು ತೆರಿಗೆ ಕಟ್ಟದೆ ಬಹಿಷ್ಕಾರ ಹಾಕಬೇಕೆಂದು ಕರೆ ನೀಡಲಾಯಿತು. ಸಭೆ ಮುಕ್ತಾಯವಾದಾಗ ರಾತ್ರಿ10 ಗಂಟೆಯಾಗಿತ್ತು.

ಎನ್.ಎಲ್ ಗೆ ಕಾ|| ಸಿ.ಬಿ. ಮೊಣ್ಣಯ್ಯ ಸಂತಾಪ

30ರ ದಶಕದಲ್ಲಿಯೇ ಮಾರ್ಕ್ಸ್‌ವಾದದ ಕಡೆಗೆ ಸೆಳೆಯಲ್ಪಟ್ಟು ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿಯ ಆದ್ಯ ಪ್ರವರ್ತಕರಲ್ಲೊಬ್ಬರಾದ, ಹಾಗೂ ಎನ್.ಎಲ್.ಉಪಾಧ್ಯಾಯರೊಂದಿಗೆ ಆರಂಭದ ಸಂಕಷ್ಟಗಳನ್ನು ಹಂಚಿಕೊಂಡ ಕಾ||ಸಿ.ಬಿ. ಮೊಣ್ಣಯ್ಯನವರು ಕಾ|| ಎನ್ನೆಯವರಿಗೆ ಬರೆದ ಪತ್ರದಲ್ಲಿ ಕಾ|| ಎನ್.ಎಲ್‌ರ ನಿಧನಕ್ಕೆ ಸಂತಾಪವನ್ನು ತೋಡಿಕೊಳ್ಳುತ್ತಾ "ಇನ್ನೂ ತಲುಪಲಾಗದಿರುವ ನಮ್ಮ ಗುರಿಯನ್ನು ಮುಟ್ಟಲು ನಾವಿರುವಷ್ಟು ಕಾಲ ನಿಷ್ಠೆಯಿಂದ ದುಡಿದು ಎಳೆಯರಿಗೆ ಮಾರ್ಗದರ್ಶನಮಾಡಿ, ನಮ್ಮ ಕರ್ತವ್ಯವನ್ನು ಕೃತಿಯಲ್ಲಿ ತೋರಿಸೋಣವೆಂದು ಹಾರೈಸಿದ್ದಾರೆ.

ಡಿ.ವೈ.ಎಫ್.ಐ.ರಾಜ್ಯ ಸಮಿತಿಯ ಸಭೆ ಜುಲೈ 15-16 ಬೆಂಗಳೂರು

ರಾಜ್ಯ ಸಮಿತಿಯ ಸಭೆಯು ಬೆಂಗಳೂರಿನಲ್ಲಿ ಜುಲೈ15-16 ರಂದು ಎರಡು ದಿನಗಳ ಕಾಲ ನಡೆಯಲಿದೆ. ಎಲ್ಲ ರಾಜ್ಯಸಮಿತಿ ಸದಸ್ಯರು ತಪ್ಪದೆ ಹಾಜರಾಗಲು ಕೋರಲಾಗಿದೆ.

ಸದಸ್ಯತ್ವದ ಪುಸ್ತಕ ಮತ್ತು ಹಣ ಸುಲ್ತಾನ ಪೇಟೆಯ ವಿಳಾಸಕ್ಕೆ ಎಂ.ಓ. ಮಾಡುವುದು. ಜಿಲ್ಲಾ/ತಾಲ್ಲೂಕ್ ವರದಿಗಳನ್ನು ಸಹ ತಡ ಮಾಡದೆ ಕಳುಹಿಸಿಕೊಡುವುದು.

ಎಸ್.ಶಿವರಾಂ
ಕಾರ್ಯದರ್ಶಿ

ರಾಯಚೂರುಃ ಭೂ ಆಕ್ರಮಣ ಚಳುವಳಿ ಒಂದು ಅನುಭವ

ಕರ್ನಾಟಕ ಪ್ರಾಂತ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ|| ಚಂದ್ರಶೇಖರ್ ಬಾಳೆಯವರು ದಿನಾಂಕ- 6-6-89 ರಂದು ರಾಯಚೂರಿನ ಕರ್ನಾಟಕ ಸಂಘ ದಲ್ಲಿ ಸೇರಿದ್ದ ಪತ್ರಕರ್ತರಿಗೆ ಜಿಲ್ಲೆ ಯಲ್ಲಿನ ಭೂಹೋರಾಟದ ಬಗ್ಗೆ ಕೆಳಗಿನಂತೆ ವಿವರಿಸಿದರು. ಕಾ|| ಆರ್.ಬಸವರಾಜ್ ಕ.ಪ್ರಾಂ.ರೈತ ಸಂಘ ಜಿಲ್ಲಾ ಸಮಿತಿ ರಾಯ ಚೂರು ಮತ್ತು ಕಾಂ|| ಮಲ್ಲಯ್ಯ ಜಾಲಹಳ್ಳಿ, ಕ.ಪ್ರಾಂ.ರೈತ.ಸಂಘ ಜಿಲ್ಲಾ ಸಮಿತಿ ರಾಯಚೂರು ಉಪಸ್ಥಿತರಿದ್ದರು.

ನಾಲ್ಕು ಎಡಪಕ್ಷಗಳ ಏಳು ರೈತ-ಕೃಷಿಕೂಲಿಕಾರರ ಸಂಘಗಳು ದೆಹಲಿ ಸಮಾವೇಶದಲ್ಲಿ ತೆಗೆದು ಕೊಂಡ ತೀರ್ಮಾನದಂತೆ ಮತ್ತು ಖಮ್ಮಂ ಸಮ್ಮೇಳನದ ಕರೆಯಂತೆ ಮೇ 25 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಧರಣಿ ನಡೆದು ಯಶಸ್ವಿಯಾಗಿದೆ. ರಾಯಚೂರು ಜಿಲ್ಲೆ ಯಲ್ಲಿ, ಸಹ ಜಿಲ್ಲಾ ಕೇಂದ್ರದಲ್ಲಿ ರಾಯಚೂರು, ಮಾನ್ವಿ, ದೇವದುರ್ಗಗಳ ರೈತ ಕೂಲಿಕಾರರಿಂದ ಮತ್ತು ಉಳಿದ ತಾಲ್ಲೂಕುಗಳಲ್ಲಿ ಯಶಸ್ವಿಯಾಗಿ ಧರಣಿ ನಡೆದಿದೆ.

ಗಂಗಾವತಿಯಲ್ಲಿ ಮೇ 25ರಂದು ಧರಣಿ ನಡೆಸುವ [illegible] ಭೂಸ್ವಾಧೀನ ಮಾಡಿಕೊಂಡು ಹಂಚಿ ಕೊಳ್ಳುವ ವಿಷಯ [illegible] ಜರುಗಿದೆ.

ಭಟ್ರಂಚನಾಳ ಗ್ರಾಮದಲ್ಲಿ ಶಿವ 'ರಾಯಪ್ಪನೆಂಬ [illegible] ಭೂಮಾಲೀಕನ ವಶದಲ್ಲಿದ್ದ ಸರಕಾರಿ ಜಮೀನಾದ 19ಎಕರೆ ಯಲ್ಲಿ 11ಎಕರೆಯನ್ನು ಭಟ್ರಂಚಿನಾಳ ಮತ್ತು ಹಿರೇಜಂತಕಲ್‌ಗಳ ಭೂರಹಿತರು ಸ್ವಾಧೀನ ಮಾಡಿಕೊಂಡು ತಮ್ಮತಮ್ಮಲ್ಲೇ ಹಂಚಿಕೊಂಡಿದ್ದಾರೆ.

ಹಿಂದೆ ಇದೇ ಶಿವರಾಯಪ್ಪನು ಆಕ್ರಮಿಸಿಕೊಂಡ ಜಮೀನಿನ ಪಕ್ಕದಲ್ಲಿದ್ದ ನಾಲಾಭರ್ಮಾ ಜಮೀನನ್ನು ಭಟ್ರಂಚಿ ನಾಳ ಭೂರಹಿತರು ಉಳುಮೆ ಮಾಡಿ ಕೊಂಡಾಗ ಶಿವರಾಯಪ್ಪನು ಲಾರಿ ಟ್ರಾಕ್ಟರುಗಳಲ್ಲಿ 500 ಗೂಂಡಾಗಳೊಂದಿಗೆ ಸೇರಿ ರೈತರನ್ನು ಹಲ್ಲೆನಡೆಸಿದರು. ಅವರ ಮೇಲೆ ಅನೇಕ ತರದ ಕೇಸುಗಳನ್ನು ಹಾಕಿ ದ್ದನು. ಇಷ್ಟಾದರೂ ಹೆದರದೆ ಭಟ್ರಂಚಿ ನಾಳಗಳ ಭೂರಹಿತರು ತಮ್ಮೊಂದಿಗೆ ಹಿರೇ ಜಂತಕಲ್ಲದ ಭೂರಹಿತರನ್ನು ಸೇರಿಸಿ ಕೊಂಡು ಹೋರಾಟಕ್ಕೆ ಇಳಿದಿದ್ದಾರೆ.

ಈಗ ಶಿವರಾಯಪ್ಪನು ಈ ಎಲ್ಲಾ 36 ಸಂಗಾತಿಗಳನ್ನು ಮುಗಿಸುವ ಪಣ ತೊಟ್ಟಿದ್ದಾನೆ. ಅಲ್ಲದೆ ಈಗ ವೃತ್ತಿನಿರತ ಗುಂಡಾಪಡೆಯನ್ನು ಜಮೀನಿ ನಲ್ಲಿಟ್ಟಿ ದ್ದಾನೆ. ಈ ಬಗ್ಗೆ ಪೋಲೀಸ್ ಇಲಾಖೆಗೆ ದೂರು ಕೊಟ್ಟರೂ ಸಹ ಅವರು ಕ್ರಮ ಕೈಗೊಳ್ಳದೆ ಶಿವರಾಯಪ್ಪನ ಪರ ಬಂದಂತ ದೂರುಗಳನ್ನು ಮಾತ್ರ ದಾಖಲು ಮಾಡಿಕೊಳ್ಳುತ್ತಿದ್ದಾರೆ.

ದಿನಾಂಕ 2-6-89 ರಂದು ಜಿಲ್ಲಾಧಿಕಾರಿಗಳು ಬಂದಾಗ ಅವರಿಗೆ ಭೂರಹಿತರು ಘೇರಾವ್ ಮಾಡಿದಾಗ ಜಿಲ್ಲಾ ಧಿಕಾರಿಯವರು ಈ ಬಗ್ಗೆ ತಹಸಿಲ್ದಾರ 'ರನ್ನು ಮತ್ತು ಸಬ್‌ಇನ್ಸ್ ಪೆಕ್ಟರನ್ನು ಕೇಳಿ ದರೆ ರೈತರ ಆಕ್ರಮಣಕಾರರಿಂದೂ ಶಿವ ರಾಯಪ್ಪನು ಆ ಭೂಮಿಯ ಮಾಲಿಕ ನೆಂದು ಸುಳ್ಳು ಹೇಳಿದರು. ಆಗ [illegible] ಮುಖಂಡ ಕಾಂ|| [illegible] ಶಿವರಾಯಪ್ಪನು ಆಕ್ರಮಿಸಿಕೊಂಡಿದ್ದು ಸರಕಾರಿ ಜಮೀನೆ ಎಂಬುದನ್ನು ಪಾಣಿ ನಕಲುಗಳ ಸಹಿತ ಜಿಲ್ಲಾಧಿಕಾರಿಗೆ ತೋರಿಸಿದಾಗ ಕಕ್ಕಾಬಿಕ್ಕಿ ಯಾದ ಜಿಲ್ಲಾಧಿಕಾರಿ ತಕ್ಷಣವೆ ಭೂಮಿಯನ್ನು ಸರಕಾರ ಸ್ವಾಧೀನ ಪಡಿಸಿಕೊಂಡು ಉಳುಮೆಗಾರರ ಮತ್ತು ಅರ್ಜಿದಾರರ ಬಗ್ಗೆ ಸಮೀಕ್ಷೆ ನಡೆಸಿ ಹಂಚಬೇಕೆಂದು ಆಜ್ಞಾಪಿಸಿ ಹೋದರು. ಆದರೆ ಸ್ಥಳೀಯ ತಹಸಿಲ್ದಾರ ಮತ್ತು ಪೋಲಿಸ್ ಅಧಿಕಾರಿ ಗಳು ಇಲ್ಲಿಯವರೆಗೆ ಶಿವರಾಯಪ್ಪನ ಸ್ವಾಧೀನದಲ್ಲಿದ್ದ ಜಮೀನನ್ನು ಸರಕಾರದ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ.

ಈ ಎಲ್ಲ ಪರಿಸ್ಥಿತಿಯನ್ನು ಗಮನಿಸಿದ ಕ.ಪ್ರಾಂ.ರೈತಸಂಘ ಮತ್ತು ಕ.ಪ್ರಾಂ.ಕೃ.ಕೂಲಿಕಾರ ಸಂಘಗಳು ಜಂಟಿ ಸಭೆ ಸೇರಿ ದಿನಾಂಕ 9-6-89 ರಿಂದ 19-6-89 ರವರೆಗೆ ಸುತ್ತಲ ಗ್ರಾಮಗಳಲ್ಲಿ ಭೂಮಾಲಿಕರ ವಿರುದ್ಧ ಮತ್ತು ಅವರ ಪರವಾಗಿ ನಿಂತ ಸರಕಾರದ ವಿರುದ್ಧ ಪ್ರಚಾರ ಸಭೆಗಳನ್ನು ನಡೆಸಿದೆ. ಕಾಂ|| ರಾಘವೇಂದ್ರ ಕುಷ್ಟಗಿ, ಕಾಂ|| ಆರ್. ಬಸವರಾಜ್, ಕಾಂ||ಮಲ್ಲಯ್ಯ ಜಾಲಹಳ್ಳಿ, ಕಾಂ|| ಲಿಂಗಪ್ಪ ಇವರುಗಳು ಸತತವಾಗಿ ಪ್ರಚಾರ ಸಭೆಗಳಲ್ಲಿ ಮಾತನಾಡಿದ್ದಾರೆ.

ದಿನಾಂಕ 20-6-89 ರಿಂದ ಅನಿರ್ದಿಷ್ಟ ಕಾಲದವರೆಗೆ ಸತ್ಯಾಗ್ರಹವನ್ನು ತಹಸೀಲ್ದಾರ್ ಕಛೇರಿ ಮುಂದೆ ಆರಂಭ ವಾಗಿದೆ. ದಿನಾಂಕ 5-7-89 ರಂದು ಜಿಲ್ಲೆಯ ಎಲ್ಲಾ ತಾಲ್ಲೂಕು ಕಛೇರಿ (ರಾಯಚೂರುಬಿಟ್ಟು) ಮುಂದೆ ಭಟ್ರಂಚಿ ನಾಳ್ ಭೂಹೋರಾಟವನ್ನು ಬೆಂಬಲಿಸಿ ಮತ್ತು ಸ್ಥಳೀಯ ಭೂರಹಿತರಿಗಾಗಿ ಧರಣಿ ಸತ್ಯಾಗ್ರಹ ಆರಂಭವಾಗುತ್ತದೆ. ದಿನಾಂಕ 5-7-89 ರಂದೆ ಶಿವರಾಯಪ್ಪ ಆಕ್ರಮಿಸಿ ಕೊಂಡ ಸರಕಾರಿ ಜಮೀನಿಂದ 36 ತಮಟೆ ಗಳೊಂದಿಗೆ ಪ್ರಾಣ ಭಯಕ್ಕೊಳಗಾದ 36 ಭೂರಹಿತರೊಂದಿಗೆ ಈಗಲೋ-ಆಗಲೋ ನಾಶವಾಗಲಿರುವ 36 ತಾಳಿಗಳೊಂದಿಗೆ "ತಾಳಿರಕ್ಷಣೆಗಾಗಿ ಜಾತಾ" ಕಾರ್ಯಕ್ರಮ ಕಾಲ್ನಡಿಗೆಯೊಂದಿಗೆ ಗಂಗಾವತಿಗೆ ತಲು ಪಲಿದೆ. ಅಲ್ಲಿ ತಹಸೀಲ್ದಾರರಿಗೆ ಮನವಿ ಪತ್ರ ಕೊಟ್ಟು ಸಂಜೆ ಬಹಿರಂಗ ಸಭೆ ಜರುಗಿದ ನಂತರ ದಿನಾಂಕ 6-7-89 ರಂದು ಜಾತಾ ಜಿಲ್ಲಾ ಕೇಂದ್ರಕ್ಕೆ ಹೋಗುತ್ತದೆ.

ರಾಯಚೂರಿನ ಬೀದಿ, ಬೀದಿಗಳಲ್ಲಿ "ತಾಳಿರಕ್ಷಣೆಗಾಗಿ ಜಾತಾ" ಪ್ರದರ್ಶನವಾದ ನಂತರ ಅವುಗಳನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಲಾಗುತ್ತದೆ. ಮತ್ತು ಸಂಜೆ ಬಹಿ ರಂಗಸಭೆನಡೆಸಲಾಗುತ್ತದೆ. ಅಂದೇ ಜಿಲ್ಲಾ ಧಿಕಾರಿಗಳ ಕಛೇರಿ ಮುಂದೆ ರಾಯ ಚೂರು ತಾಲೂಕಿನವರಿಂದ ಅನಿರ್ದಿಷ್ಟಕಾಲದ ಧರಣಿ ಸತ್ಯಾಗ್ರಹ ಆರಂಭ ವಾಗುತ್ತದೆ.

ಬೇಡಿಕೆ ಒತ್ತಾಯಿಸಿ ರೈತರ ಪಾದಯಾತ್ರೆ

ಶಿವಮೊಗ್ಗ ತಾಲ್ಲೂಕು ಗ್ರಾಮಾಂತರ ಜನತೆಯ ಹೋರಾಟ ಸಮಿತಿ ಆಶ್ರಯ ದಲ್ಲಿ, ಗ್ರಾಮಾಂತರ ಜನತೆಯ ಬೇಡಿಕೆ ಗಳನ್ನು ಒತ್ತಾಯಿಸಿ ಎಡೆಹಳ್ಳಿ, [illegible], ಕಡೇಕಲ್, [illegible], ಕುಸ್ಕೂರ್, ಸಿದ್ಲಳ್ಳಿ, ಮತ್ತೂರ್, ಇಂದಿರಾನಗರಗಳ ರೈತ-ಕೃಷಿ ಕೂಲಿಗಾರರು ಪಾದಯಾತ್ರೆ ಕೈಗೊಂಡು ಶಿವಮೊಗ್ಗ ನಗರ ತಲುಪಿ ಜಿಲ್ಲಾ ಪರಿಷತ್‌ಗೆ ತಮ್ಮ ಬೇಡಿಕೆಗಳ ಮನವಿ ಅರ್ಪಿಸಿದರು.

ಪಾದಯಾತ್ರೆಯಲ್ಲಿ ಮಹಿಳೆ ಯರು ಒಳಗೊಂಡು 500 ಕ್ಕೂ ಹೆಚ್ಚು ರೈತ ಬಾಂಧವರು ಪಾಲ್ಗೊಂಡರು. ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕಾ|| ಎಸ್.ಬಿ.ಶಿವಶಂಕರ್, ಬಿ.ಎಸ್. ದಾಸ್, ಎಸ್.ಕೆ. ಶರ್ಮ, ವಾಸುದೇವ್, ಶ್ರೀಮತಿ ಶಿವಗಾಮಿ ಮುಂತಾದವರ ನಾಯಕತ್ವವಹಿಸಿದ್ದರು.

ಜಿಲ್ಲಾ ಪರಿಷತ್ ಅಧ್ಯಕ್ಷ ಶ್ರೀ ಮಹಾದೇವಪ್ಪನವರು ನಿಮ್ಮ ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಈಡೇರಿಸಲು ಸರ್ವ ಪ್ರಯತ್ನ ನಡೆಸುವುದಾಗಿ ಆಶ್ವಾಸನೆ ನೀಡಿದರು. ಶಾಸಕ ಕೆ.ಎಚ್.ಶ್ರೀನಿವಾಸ್ ರವರು ಈ ಸಂದರ್ಭದಲ್ಲಿ ಹಾಜರಿದ್ದು ರೈತರಿಗೆ ಬೆಂಬಲಿಸಿದರು.

ರೈತರ ಬೆಳೆಗೆ ನ್ಯಾಯಬೆಲೆ, ಬಗರ್ ಹುಕುಂ ಸಾಗುವಳಿ ಹಕ್ಕು ಪತ್ರ, ಕೃಷಿ ಕಾರ್ಮಿಕರಿಗೆ ಸರ್ಕಾರಿಭೂಮಿ ಹಂಚಿಕೆ ಯಾಗಬೇಕು. ನೀರಾವರಿ ಸೌಲಭ್ಯ ಒದಗಿಸ ಬೇಕೆಂಬ ಬೇಡಿಕೆಗಳನ್ನು ಮನವಿ ಒಳಗೊಂಡಿತು.

ಬ್ಯಾಂಕ್ ಸಾಲ ಒತ್ತಾಯಿಸಿ ರೈತರ ಧರಣಿ

ಕರ್ನಾಟಕ ಪ್ರಾಂತ ರೈತ ಸಂಘ ಕುಷ್ಟಗಿ ತಾಲ್ಲೋಕು ಸಮಿತಿಯ ಹಿರೇ ನಂದಿ ಹಾಳ ಗ್ರಾಮದ ರೈತರಿಗೆ ಬಾವಿ ಸಾಲ ಮಂಜೂರು ಮಾಡಬೇಕೆಂದು ಒತ್ತಾಯಿಸಿ P.L.D. ಬ್ಯಾಂಕ್ ಮುಂದೆ ಧರಣಿ ಸತ್ಯಾಗ್ರಹ ನಡೆಸಿತು. ಜೂನ್ 20ರಂದು ಆರು ದಿನಗಳು ಕಳೆದ ನಂತರ ಬ್ಯಾಂಕ್ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ರೈತ ಸಂಘದ ನಾಯಕ ಹಾಗೂ ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾ|| ಆರ್.ಕೆ. ದೇಸಾಯಿಯವರೊಡನೆ ಮಾತುಕತೆ ಆಶ್ವಾಸನೆ [illegible] ರೈತರಿಗೆ ಬಾವಿಸಾಲ ನೀಡುವುದಾಗಿ [illegible] ಆಶ್ವಾಸನೆ [illegible] ಧರಣಿಯನ್ನು [illegible] ರೈತ ಸಂಘದ [illegible] ಕಾರ್ಯದರ್ಶಿ [illegible] ಹೇಳಿಕೆಯಲ್ಲಿ [illegible]

ಸಮಾಜವಾದೀ ಪ್ರಭುತ್ವಕ್ಕೆ ಸವಾಲ್

ಕ್ರಾಂತಿ-ವಿರೋಧಿ ದಂಗೆಯ ದಮ

ಜೂನ್ ಮೊದಲ ವಾರದಲ್ಲಿ ಚೀಣಾದಲ್ಲಿ ನಡೆದ ಸಮಾಜವಾದ-ವಿರೋಧಿ ದಂಗೆಯಿಂದ ನಮ್ಮ ದೇಶದ ಕಮ್ಯುನಿಸ್ಟ್ ವಿರೋಧಿಗಳು, ಅದರಲ್ಲೂ ದೇಶದ ರಾಜಕೀಯದಲ್ಲಿ ಎಡಶಕ್ತಿಗಳಿಂದಾಗಿ ಮೂಲೆಗುಂಪಾಗುವ ಭಯ ಎದುರಿಸುತ್ತಿರುವ ಹಿಂದೂ ಕೋಮುವಾದಿಗಳಿಗೆ ಮೃಷ್ಟಾನ್ನವೆಂಬಂತೆ ಹುಳಿಯುತ್ತಿದ್ದಾರೆ. 1947 ರಲ್ಲಿ, ನಂತರ ಭಿವಂಡಿ, ಜಮಶೇಷಪು ಮುಂತಾದೆಡೆ ತಾಂಡವವಾಡಿದ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ ಎಂದು ಬೊಬ್ಬಿಡುತ್ತಿವೆ. ಅಮೇರಿಕಾದ ಯೂನಿಯನ್‌ಕಾರ್ಬೈಡ್ ಭೋಪಾಲದಲ್ಲಿ ಸಾವಿರಾರು ಬುಗ್ಗರ ಬಲಿ ತೆಗೆದುಕೊಂಡಾಗ, ಸೂಪರ್ 301 ಭಾರತೀಯರ ಆತ್ಮಾಭಿಮಾನವನ್ನು ಕೆಣಕಿದಾಗ ಬಾಯಿ ಮುಚ್ಚಿಕೊಂಡಿದ್ದ ಶಕ್ತಿಗಳು ಚೀಣೀ "ವಿದ್ಯಾರ್ಥಿ" ಗಳ ದೇಶಪ್ರೇಮವನ್ನು ಕೊಂಡಾಡುತ್ತಿವೆ.

ನಿಜವಾಗಿ ಚೀಣಾದಲ್ಲಿ ನಡೆದುದು ಸಮಾಜವಾದವನ್ನು ಕಿತ್ತೆಸೆಯುವ ಸುಯೋಜಿತ, ಸಾಮ್ರಾಜ್ಯಶಾಹೀ-ಬೆಂಬಲಿತ ಪ್ರಯತ್ನ. ಇದು ವಿಫಲಗೊಂಡಿದೆ. ಚೀಣಾ ಕಮ್ಯೂನಿಸ್ಟ್‌ಪಕ್ಷದ ಬೈಜಿಂಗ್ ಮುನ್ಸಿಪಲ್ ಸಮಿತಿ ನೀಡಿದ ಹೇಳಿಕೆ ಈ ಸಾರಾಂಶವನ್ನು ಇಲ್ಲಿ ಕೊಡುತ್ತಿದ್ದೇವೆ. ಇದರ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿಗಳ, ನಮ್ಮ ದೊಡ್ಡ ಪತ್ರಿಕೆಗಳ, ಹುಚ್ಚು ಕಮ್ಯುನಿಸ್ಟ್ ವಿರೋಧಿಗಳ ಹಾಹಾಕಾರವನ್ನು ನಾವು ಅರ್ಥಮಾಡಿಕೊಳ್ಳಬಹುದು. ಇವರ "ಪ್ರಜಾಪ್ರಭುತ್ವ ಪ್ರೇಮ"ದ ನಿಜ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು.

ಬೈಜಿಂಗ್ ಸಮಿತಿ ಹೇಳಿಕೆ:-

ಮೇ 20 ಲಷ್ಕರಿ ಶಾಸನದ ಆಜ್ಞೆ ಹೊರಡಿಸಲಾಯಿತು. ರಾಜಧಾನಿಯ ಕೆಲವು ಭಾಗಗಳಲ್ಲಿ ಇದನ್ನು ಜಾರಿಗೊಳಿಸಬೇಕೆಂಬ ಸರಕಾರೀ ಮಂಡಳಿಯ ಆಜ್ಞೆಯ ಪ್ರಕಾರ ಸೇನಾ ತುಕಡಿಗಳು ಒಂದು ನಿರ್ದಿಷ್ಟ ಯೋಜನೆಯ ಅನುಸಾರ ವಿಭಿನ್ನ ಮಾರ್ಗಗಳಲ್ಲಿ ಮುಂದುವರೆದು ಪ್ರತಿದಿನ ನಿರ್ದಿಷ್ಟ ಸ್ಥಾನಗಳಲ್ಲಿ ಇರುತ್ತಿದ್ದವು. ಸೇನೆಯ ಜಾಗರೂಕ ಚಾಲನೆ ಹಾಗೂ ವಿವಿಧ ಜವಾಬ್ದಾರಿ ಸಂಸ್ಥೆಗಳ ಪ್ರಯತ್ನಗಳಿಂದಾಗಿ ಸುಮಾರು ಎರಡು ತಿಂಗಳಿಂದ ನಡೆಯುತ್ತಿದ್ದ ಗಲಭೆ ತಣ್ಣಗಾಗತೊಡಗಿತ್ತು. ಆದರೆ ಒಂದು ಸಣ್ಣ ವಿಭಾಗ ಮಾತ್ರ ಗಲಭೆ ಸೃಷ್ಟಿಸುವ ತನ್ನ ಪ್ರಯತ್ನವನ್ನು ಒಂದು ದಿನವೂ ಸ್ವಲ್ಪವೂ ನಿಲ್ಲಿಸಿರಲಿಲ್ಲ.

ಈ ಗುಂಪು ಚೀಣಾ ಕಮ್ಯುನಿಸ್ಟ್ ಪಕ್ಷದ ನಾಯಕತ್ವವನ್ನು ಕಿತ್ತು ಒಂದು ಹೊಸ ಸರ್ಕಾರ ತರಬೇಕು. ಅದರ ಸದಸ್ಯರ ನೇಮಕದ ಬಗ್ಗೆಯೂ ತಾವು ನಿರ್ಧರಿಸಿರುವುದಾಗಿ ಹೇಳಿಕೊಳ್ಳುತ್ತಿದ್ದರು. ಕಿತ್ತೆಸೆಯಬೇಕಾದ ಅಧಿಕಾರಿಗಳ ಪಟ್ಟಿಯನ್ನೂ ತಯಾರಿಸಿರುವುದಾಗಿ ಹೇಳಿಕೊಳ್ಳುತ್ತಾ ತಿಯಾನ್‌ಮೆನ್ ಚೌಕದಲ್ಲಿ ಕುಳಿತು ಗಲಭೆ ಎಬ್ಬಿಸುವುದನ್ನು ಮುಂದುವರಿಸಿದರು.

"ಸ್ವಯಂ ಸೇವಕರ ಹುಲಿ ತುಕಡಿಸೇನೆ"

"ಸಾವಿನ ಧೈರ್ಯದ ಪಡೆ" ಮುಂತಾದ ಇವರು ರಚಿಸಿದ ಗ್ಯಾಂಗುಗಳ ಸ್ಥಳೀಯ ಪೋಲಿಗಳು ಹಾಗೂ ಗೂಂಡಾಗಳನ್ನು, ಕಮ್ಯುನಿಸ್ಟ್ ಪಕ್ಷ ಹಾಗೂ ಸಮಾಜವಾದದ ಬಗ್ಗೆ ಆಳವಾದ ದ್ವೇಷ ಹೊಂದಿದವರನ್ನೆಲ್ಲಾ ಒಂಡೆಡೆ ಸೆಳೆದು ರಚಿಸಿದವುಗಳು. ಪಕ್ಷದ ಹಾಗೂ ಸರಕಾರದ ಮುಖಂಡರುಗಳನ್ನು ಬಂಧಿಸುವ ಯೋಜನೆ ಅವರು ರೂಪಿಸಿದ್ದರು.

'ವಿದೇಶಿ ಪ್ರತಿಗಾಮೀ ರಾಜಕೀಯ ಶಕ್ತಿಗಳು ಒದಗಿಸಿದ ಹಣ ಮತ್ತು ಸಾಮಗ್ರಿಗಳ ಸಹಾಯದಿಂದ ತಿಯಾನ್‌ಮೆನ್ ಚೌಕವನ್ನು ದೀರ್ಘಕಾಲ ಆಕ್ರಮಿಸಿಕೊಂಡಿರುವ ಯೋಜನೆಯನ್ನು ಅವರು ತಯಾರಿಸಿದ್ದರು.

ಚೌಕದಲ್ಲಿ ಸಮಾಜವಾದಿ ಕ್ರಾಂತಿಗಾಗಿ, ಅದರ ರಕ್ಷಣೆಗಾಗಿ ಪ್ರಾಣ ಬಲಿದಾನ ನೀಡಿದ ಜನತಾವೀರರ ಸ್ಮಾರಕದ ಎದುರು ಅವರು ಒಂದು ಪ್ರತಿಮೆ ನಿಲ್ಲಿಸಿದರು. ಮೊದಲು ಅದನ್ನು ಸ್ವಾತಂತ್ರ್ಯ ಪ್ರತಿಮೆಯೆದರು.ನಂತರ ಪ್ರಜಾಪ್ರಭುತ್ವದ ದೇವಿಯೆಂದರು. ಇದು ಅಮೆರಿಕನ್ ಮಾದರಿ ಪ್ರಜಾಪ್ರಭುತ್ವದ ಸ್ವಾತಂತ್ರ್ಯದ ಆರಾಧನೆಯನ್ನು ಪ್ರಚೋದಿಸುವ ಪ್ರಯತ್ನವಾಗಿತ್ತು.

ಚೌಕದಿಂದ ಯುವ ವಿದ್ಯಾರ್ಥಿಗಳು ವಾಪಾಸು ಹೋಗದಂತೆ ಅವರಿಗೆ ಕೊಲೆ ಬೆದರಿಕೆಯವರೆಗೂ ಹಾಕಿತ್ತು ಈ ಗುಂಪು. ಆದರೂ ವಿದ್ಯಾರ್ಥಿಗಳು ಧರಣಿ ಮುಂದುವರಿಸಲಿಕ್ಕಿಲ್ಲ ಎಂಬ ಭಯದಿಂದ ಐದು ಸಾವಿರ ಬುದ್ಧಿ ಜೀವಿಗಳು ಉಪವಾಸ ಮುಷ್ಕರ ಪ್ರಯತ್ನಿಸಿದರು. ಕೇವಲ 48 ರಿಂದ 72 ಗಂಟೆಗಳ ಉಪವಾಸ ಮುಷ್ಕರ ಮಾತ್ರ ಸಂಘಟಿಸಲು ಅವರಿಗೆ ಸಾಧ್ಯವಾಯಿತು. ಇದರಲ್ಲಿ ಭಾಗವಹಿಸಿದವರು ಕೇವಲ ನಾಲ್ಕು ಮಂದಿ.

ಅವರು ಹಂಚಿದ ಕರಪತ್ರಗಳು ಕ್ರಾಂತಿ-ವಿರೋಧಿ ಸಶಸ್ತ್ರ ದಂಗೆಯನ್ನೇ ಉಪದೇಶಿಸುತ್ತಿದ್ದವು. ತೈವಾನ್‌ನ ಕ್ಯುಮಿಂಟಾಂಗ್ ಜತೆ ಕೂಡಾ ಸೇರಲು ತಾವು ಸಿದ್ಧ ಎಂದು ಅವರ ಕರಪತ್ರಗಳು ಸಾರಿದವು. ಒಂದು ಸಣ್ಣ ಗುಂಪು ಎಬ್ಬಿಸಿದ ಗಲಭೆ ಎಂಬುದನ್ನು ಇದು ತೋರಿಸಿಕೊಟ್ಟಿರು. ಅವರು ಒಂದು ಸುಯೋಜಿತ ರೀತಿಯಲ್ಲಿ, ಪಿತೂರಿಯಲ್ಲಿ ತೊಡಗಿದ್ದರೆಂದು ಸ್ಪಷ್ಟವಾಗಿತ್ತು. ಲಷ್ಕರಿ ಶಾಸನ ಅನುಷ್ಠಾನ ಪಡೆಗಳು ಬೈಜಿಂಗ್ ಕೇಂದ್ರದಲ್ಲಿ ಬಂದು ನಿಂತರೆ ವಿಶಾಲ ಜನ ಸಮೂಹಗಳಿಗೆ ನಿಜಸಂಗತಿ ತಿಳಿಯುತ್ತದೆ, ಅವರನ್ನು ಪ್ರಚೋದಿಸಲು ಸಾಧ್ಯವಿಲ್ಲವೆಂದರಿತ ಈ ಗುಂಪು ಗಲಭೆಗೊಂದಲ ತೀವ್ರಗೊಳಿಸಲು ಪ್ರಯತ್ನಿಸಿತು.

ಜೂನ್ 1 :- "ಕಾರ್ಮಿಕರ ಸ್ವತಂತ್ರಸಂಘ" ವೆಂಬ ಕಾನೂನು ಬಾಹಿರ ಸಂಘಟನೆಯ ಕೆಲವು ಕೂಟ ನಾಯಕರನ್ನು ಸಾರ್ವಜನಿಕ ಭದ್ರತಾ ಕಛೇರಿ ಬಂಧಿಸಿತು. ಇದನ್ನು ಬಳಸಿಕೊಂಡು ಬೈಜಿಂಗ್ ಮುನಿಸಿಪಲ್ ಸಾರ್ವಜನಿಕ ಭದ್ರತಾ ಕಛೇರಿಯನ್ನು ಹಾಗೂ ಕಮ್ಯುನಿಸ್ಟ್ ಪಕ್ಷದ, ಸರಕಾರೀ ಇಲಾಖೆಯ ಕಛೇರಿಯನ್ನು ಸುತ್ತುವರಿಯುವಂತೆ ಜನರನ್ನು ಪ್ರಚೋದಿಸಲಾಯಿತು.

ಜೂನ್2 :- ಕೇಂದ್ರಿಯ ಟಿ.ವಿ. ಹತ್ತು ತಿಂಗಳ ಹಿಂದೆ ಬಾಡಿಗೆ ಪಡೆದಿದ್ದ ಪೋಲಿಸ್ ಜೀಪ್ ರಸ್ತೆ ಅಪಘಾತಕೊಳ್ಳಗಾಗಿ ಮೂವರು ಜನ ಸತ್ತರು. ಇದರಲ್ಲಿ ವಿದ್ಯಾರ್ಥಿಗಳು ಯಾರೂ ಇರಲಿಲ್ಲ. ಇದನ್ನು ಉದ್ದೇಶಪೂರ್ವಕವಾಗಿ ವಿಕೃತಗೊಳಿಸಿ ಇದು ಲಷ್ಕರೀ ಶಾಸನದ ಪ್ರಚೋದನೆ ಎಂದು ಸುಳ್ಳು ವದಂತಿ ಹರಡಿ ಪ್ರಚೋದಿಸಲಾರಂಭಿಸಿದರು. ಅಪಘಾತದಲ್ಲಿ ಮಡಿದವರು ಹೆಣಗಳನ್ನು ಕಿತ್ತುಕೊಂಡು ಪ್ರದರ್ಶಿಸಲು ಯತ್ನಿಸಿದರು. ಗಲಭೆ-ಗೊಂದಲ ಹರಡಿ ದಂಗೆಯ ಬೆಂಕಿ ಹಚ್ಚಿದರು.

ಜೂನ್ 3 : ಮಧ್ಯರಾತ್ರಿ ನಂತರ ಲಷ್ಕರಿ ಶಾಸನ ಜಾರಿಗೊಳಿಸುವ ಪಡಿಗಳು ತಮಗೆ ನಿರ್ದಿಷ್ಟಪಡಿಸಿದ ಜಾಗಗಳತ್ತ ಚಲಿಸಲಾರಂಭಿಸಿದವು.

ಬೈಜಿಂಗ್ ತಂತಿ ಕಛೇರಿಯ ಮುಂದೆ ನಿಲ್ಲಿಸಿದ್ದ ಮಿಲಿಟರಿ ವಾಹನಗಳ ಟೈರುಗಳನ್ನು ಕೊಚ್ಚಿಹಾಕಿದರು. ಸೈನಿಕರನ್ನು ತಡೆದು ತಪಾಸಣೆ ನಡೆಸಿದರು. ರಸ್ತೆ ತಡೆಗಳನ್ನು ನಿರ್ಮಿಸಿದರು. ಮುಂಜಾವಿನ ವೇಳೆಗೆ ಒಂದು ಸೇತುವೆಯ ಮೇಲಿದ್ದ ಮಿಲಿಟರಿ ವಾಹನಗಳನ್ನು ತಲೆಕೆಳಗಾಗಿಸಿದರು. ಇನ್ನೊಂದು ಟ್ರಕ್ಕಿನ ಟೈರುಗಳನ್ನು ನಾಶಮಾಡಿ 400 ಸೈನಿಕರ ಮೇಲೆ ಕಲ್ಲು ತೂರಿದರು.

ಬೆಳಿಗ್ಗೆ ಏಳುಗಂಟೆ ಹೊತ್ತಿಗೆ ಕೆಲವು

ಇವರು ಅಹಿಂಸಾವಾದಿಗಳು!

ಚೀಣಾದ "ಪ್ರಜಾಪ್ರಭುತ್ವ ಪರ" ವಿದ್ಯಾರ್ಥಿಗಳು ಭಾರತದ ಮಹಾತ್ಮಗಾಂಧಿಯವರ ಹೆಸರು ಹೇಳಿಕೊಂಡು ಅಹಿಂಸಾತ್ಮಕ ಚಳುವಳಿ ನಡೆಸುತ್ತಿದ್ದರು ಎಂದು ನಮ್ಮ ಬಂಡವಾಳಶಾಹೀ ಸಂಪಾದಕರು, ಬುದ್ಧಿಜೀವಿಗಳು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದಾರೆ. ಈ ಅಹಿಂಸಾತ್ಮಕ ಚಳುವಳಿಯ ಚಿತ್ರಗಳು ಇಲ್ಲಿಗಿವೆ:

★ ಜೂನ್ 3ರ ರಾತ್ರಿ ಮಿಲಿಟರಿ ವಾಹನಕ್ಕೆ ಬೆಂಕಿ ಹಚ್ಚಿದಾಗ ಒಬ್ಬ ಸಶಸ್ತ್ರ ಪೋಲಿಸ್ ಲಿಗುಯೋಝು ತನ್ನ ಸಹಯೋಗಿಗಳಿಂದ ಬೇರ್ಪಟ್ಟ. ಜೂನ್ 4ರ ಬೆಳಿಗ್ಗೆ 4 ಗಂಟೆಗೆ ಒಂದು ರಸ್ತೆ ಸೇತುವೆ ದಾಟುತ್ತಿದ್ದಾಗ ದಂಗೆಕೋರರ ಗುಂಪೊಂದು ಅವನನ್ನು ಹಿಡಿದುಕೊಂಡಿತು. ಲಿಯ ತಲೆಬುರುಡೆ ಹಾಗೂ ಎಡಗಾಲನ್ನು ಹಾರೆಯಿಂದ ಕೊಚ್ಚಿಹಾಕಿ ಸೇತುವೆಯ ಕಂಬಿಯಿಂದ ನೇತುಹಾಕಲಾಯಿತು. ನಂತರ ಒಂದು ಬಸ್ ನಿಲ್ದಾಣಕ್ಕೊಯ್ದು ಆತನಿಗೆ ಬೆಂಕಿ ಹಚ್ಚಿ ಸುಡಲಾಯಿತು.

★ ಸುನ್ ಚಾಂಗ್‌ಹಂಗ್ ಮತ್ತು ಆತನ ಹತ್ತು ಸಹಯೋಗಿಗಳು ಇನ್ನೊಂದು ಸೇತುವೆಯತ್ತ ಸಾಗುತ್ತಿರುವಾಗ ಒಂದು ಗುಂಪು ಮೂವರು ಹಿರಿಯ ಮಹಿಳೆಯರನ್ನು ಈ ಸೈನಿಕರತ್ತ ತಳ್ಳಿತು."ಮಕ್ಕಳೇ ಗುಂಡು ಹಾರಿಸಬೇಡಿ" ಎಂದು ಅವರು ಗೋಗರೆಯುತ್ತಿದ್ದರು. ಕಾಲಿಗೆ ಬಿದ್ದರು. ಸೈನಿಕರು ಅವರನ್ನೆತ್ತಿ ನಿಲ್ಲಿಸಿ "ನೀವು ನಮಗೆ ನಮ್ಮ ತಾಯಂದಿರಷ್ಟೇ ಪ್ರಿಯರು. ನಾವೇಕೆ ನಿಮ್ಮ ಮೇಲೆ ಗುಂಡು ಹಾರಿಸುತ್ತೇವೆ. ನಿಮ್ಮ ಮನೆಗಳಿಗೆ ಹೋಗಿ ತಪ್ಪಣಿ" ಎಂದರು. ಇದನ್ನು ಕೇಳಿದ ಗುಂಪಿನ ಮಂದಿ ದೊಣ್ಣೆಯಿಂದಸೈನಿಕರ ಮೇಲೆ ಪ್ರಹಾರ ಮಾಡಿದರು. ಒಬ್ಬ ಸೈನಿಕ ಕ್ಸು ಗುಯೋಝುನ್ ಪ್ರಜ್ಞೆ ತಪ್ಪಿದ. ಆತನನ್ನು ದಂಗೆಕೋರರು ಎಳೆದೊಯ್ದರು. ಸೇತುವೆ ಮೇಲಿಂದ ಕೆಳಕ್ಕೆಸೆದು ಆತನ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದರು. ಸುಟ್ಟು ಹೋದ ಆತನ ಶವನನ್ನು ಸೇತುವೆಗೆ ನೇತುಹಾಕಿದರು! ಇವು ಕೇವಲ ಎರಡು ಉದಾಹರಣೆಗಳು. ಜೂನ್3 ಹಾಗೂ4 ರಂದು ನಡೆದ ಇಂತಹ ದುಷ್ಟ ಚಟುವಟಿಕೆಗಳು ಹಲವಾರು.

"ನೀವು ಸುಳ್ಳು ಹೇಳುತ್ತಿದ್ದರೆ ಸಣ್ಣ ಸುಳ್ಳೊಂದನ್ನು ಹೇಳಿ. ನಂತರ ಕ್ಷಮೆ ಕೇಳಿ. ಆಗ ನೀವು . ವಿಶ್ವಾಸಾರ್ಹರಾಗುತ್ತೀರಿ. ನಿಮ್ಮ ದೊಡ್ಡ ಸುಳ್ಳುಗಳ ಬಗ್ಗೆ ಜನಕ್ಕೆ ಪೂರ್ಣ ವಿಶ್ವಾಸ ಮೂಡುತ್ತದೆ" ಇದು ಇದೀಗ ವಿಶ್ವದ ಬಹುತೇಕ ಎಲ್ಲಾ ಸರಮಾಲೆಯನ್ನೇ ಉಣಬಡಿಸುತ್ತಿಯುವ ವಾರ್ತಾಸಂಸ್ಥೆಗಳಾದ ಎ.ಪಿ. ಹಾಗೂ ರೈಟರ್‌ನ ಮೂಲಮಂತ್ರ.

ಈ ಎಲ್ಲಾ ಸುಳ್ಳುಗಳ ಬಗೆಗೆ ಸದಾ ತೆರೆದ ಕಣ್ಣು ಹೊಂದಿರುವುದರಿಂದಲೇ 'ಚೀನಾ ವಿರುದ್ಧ ಅಪಪ್ರಚಾರ ಮಾಡುತ್ತಿರುವವರನ್ನು ಬಯಲಿಗೆಳೆಯಿರಿ' ಎಂದು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸ್ಪಷ್ಟ ಕರೆ ನೀಡಿದೆ. ಚೀನಾದ ಬೆಳವಣಿಗೆಗಳ ಬಗ್ಗೆ ಹೇಳಿಕೆ ನೀಡಲು ಹಿಂಜರಿಯುತ್ತಿರುವ ಪಕ್ಷಗಳ ಮಧ್ಯೆ ಸಿ.ಪಿ.ಐ.(ಎಂ) ತನ್ನ ಸ್ಪಷ್ಟ ನಿಲುವು ಉಚ್ಚರಿಸಿದೆ.

ಪತ್ರಿಕೆಗಳು ಸತ್ಯವನ್ನು ಮರೆಮಾಚಿ ಪುಂಖಾನುಪುಂಖವಾಗಿ ಚೀನಿ ಸೇನೆಯ ಕ್ರಮವನ್ನು ಖಂಡಿಸಿವೆ. ಡೆಂಗ್ ಕ್ಸಿಯೋಪಿಂಗ್ ಅತ್ಯಂತ ದುಷ್ಟ ಎನ್ನುವ ಹಣೆಪಟ್ಟಿ ನೀಡಿವೆ. ಪ್ರತಿದಿನ ಚೀನಾ ಬಗ್ಗೆ ಸುಳ್ಳು ಹೇಳುವ ಸುದ್ದಿಗಳಿಗೆ ಮುಖಪುಟದಲ್ಲಿ ಪ್ರಮುಖ ಸ್ಥಾನ ಜೊತೆಜೊತೆಗೇ ಸಂಪಾದಕೀಯಗಳ ಸುರಿಮಳೆ.

ಭಾರತಕ್ಕೆ ವಿದೇಶಗಳ ಅಂತರಾಷ್ಟ್ರೀಯ ಸುದ್ದಿಗಳನ್ನು ಸರಬರಾಜು ಮಾಡುವುದರಲ್ಲಿ ಅಮೇರಿಕಾದ ಎ.ಪಿ. ಹಾಗೂ ಇಂಗ್ಲೆಂಡಿನ ರ್‍ಯಾಟರ್ ಸಂಸ್ಥೆಗಳದ್ದೇ ಆಗ್ರಪಾಲು. ಈ ಸುದ್ದಿ ಸಂಸ್ಥೆಗಳು ಬಡಿಸುವ ಹಳಸಿದನ್ನ ನಮ್ಮ ಪತ್ರಿಕೆಗಳಿಗೆ ಪರಮಾನ್ನ. ಇದಕ್ಕೆ ಮುಖ್ಯ ಕಾರಣ ಪತ್ರಿಕೋದ್ಯಮದ ನೋಡುವ ಕಣ್ಣುಗಳಿಗೆ ಬಡಿದಿರುವ ಕಾಮಾಲೆ. ಬ್ರಿಟಿಷರ ಅಡಿಯಾಳಾಗಿದ್ದಾಗಿನಿಂದ ಬಂದಿರುವ ಬೌದ್ಧಿಕ ಗುಲಾಮಿಕೆ.

ಈ ಹಿನ್ನಲೆಯಲ್ಲಿಯೇ ನಮ್ಮ ಪಕ್ಷ ಪತ್ರಿಕೆಗಳ ಈ ಕಾಮಾಲೆತನದ ವಿರುದ್ಧ ಸ್ಪಷ್ಟ ನಿಲುವು ಉಚ್ಚರಿಸಿದೆಯಲ್ಲದೆ. ಪತ್ರಿಕೆಗಳ ಹೂರಣವನ್ನು ಬಯಲಿಗೆಳೆಯಲು ಕರೆ ನೀಡಿದೆ. ಪತ್ರಿಕೆಗಳು

> ಸತ್ಯ ಹೇಳಬೇಕೆಂದರೆ ಯಾವ ವಾರ್ತಾಸಂಸ್ಥೆಯೂ ಸತ್ಯ ಹೇಳುವುದಿಲ್ಲ.
>
> -ಎಂ.ವಿ.ಕಾಮತ್.

ಚೀನಾ ಪ್ರಕರಣ: ಪತ್ರಿಕೆಗಳು

'ಇದು ಅಮೇರಿಕಾ ವಾಣಿ'

ಬಡಬಡಿಸುವ ಸುಳ್ಳುಗಳತ್ತ ಸಿಪಿಐ(ಎಂ) ಕ್ಷ-ಕಿರಣ ಬೀರಿ ಹಲವು ಸುಳ್ಳುಗಳನ್ನು ಬಗೆದಿಟ್ಟಿದೆ.

ಜೂನ್ 20 ರಂದು ಅಸೋಸಿಯೇಟೆಡ್ ಪ್ರೆಸ್ (ಎ.ಪಿ) ವಾರ್ತಾಸಂಸ್ಥೆ ಶಾಂಘ್ಯಾನಲ್ಲಿ ಮೂವರನ್ನು ಸಾರ್ವಜನಿಕವಾಗಿ ಮರಣದಂಡನೆಗೆ ಗುರಿಪಡಿಸಲಾಯಿತು ಎಂಬ ಸುದ್ದಿ ಬಿತ್ತರಿಸಿತು. ಮರುದಿನವೇ ಪುನಃ ಈ ಸಂಸ್ಥೆ ತಾನು ಬಿತ್ತರಿಸಿದ ಸುದ್ದಿ ತಪ್ಪು ಎಂದು ತಪ್ಪೊಪ್ಪಿಗೆ ಪ್ರಕಟಿಸಿತು. ಆದರೆ ಆ ವೇಳೆಗೆ ಭಾರತದ ಎಲ್ಲಾ ಪತ್ರಿಕೆಗಳು ಸುದ್ದಿಯನ್ನು ಮುಖಪುಟದಲ್ಲಿ ಪ್ರಕಟಿಸಿದವು. 'ಟೈಂಸ್ ಆಫ್ ಇಂಡಿಯಾ' ಪತ್ರಿಕೆ ಮರಣದಂಡನೆ ಖಂಡಿಸಿ ಅತ್ಯಂತ ಖಾರವಾದ ಸಂಪಾದಕೀಯ ಬರೆಯಿತು. ಆದರೆ ಪಾಪ ಅದರ ಮುಖಪುಟದಲ್ಲಿಯೇ ಈ ಸುದ್ದಿ ತಪ್ಪೆಂಬ ಪ್ರಕಟಣೆಯೂ ಪ್ರಕಟವಾಗಿತ್ತು. ಭಾರತದ ಪತ್ರಿಕೆಗಳ 'ಎಚ್ಚರದ ವರದಿ' ಗಳಿಗೆ ಇದೊಂದು ಉದಾಹರಣೆ.

> **ಗೂಢಚಾರೀ ಪತ್ರಕರ್ತರು**
>
> ಸರ್ಕಾರದ ಹೇಳಿಕೆ ಪ್ರಕಾರ ಅನೇಕ ಗೂಢಚಾರರು 'ಪತ್ರಕರ್ತರು' ಮತ್ತು ಸಂಶೋಧಕಾರರು ಎಂದು ಹೇಳಿಕೊಂಡು ಬರುತ್ತಾರೆ. ಸಂಶೋಧಕರ ಹೆಸರಿನಲ್ಲಿ ಬರುವವರನ್ನು ಸೂಕ್ಷ್ಮಪ್ರದೇಶಗಳಲ್ಲಿ ಬಿಡದೆ ನಿಗ್ರಹಿಸಬಹುದಾದರೂ ಪರ್ತಕರ್ತರ ಸೋಗಿನಲ್ಲಿ ಬರುವವರ ಬಗ್ಗೆ ಕ್ರಮಕೈಗೊಳ್ಳಲು ಸರ್ಕಾರ ಅಸಹಾಯಕವಾಗಿದೆ.
>
> ಕುಲದೀಪ್ ನಯ್ಯಾರ್

ಜನತಾ ವಿಮೋಚನಾ ಸೇನೆಯ 5000 ಸೈನಿಕರು ಮತ್ತು ಅಧಿಕಾರಿಗಳು ಗಾಯಗೊಂಡಿದ್ದಾರೆ ಎಂಬ ಕ್ಸಿನ್‌ಹುವಾ ಸುದ್ದಿಯನ್ನು ನಮ್ಮ ಯಾವ ಬೂರ್ಜ್ವಾ ಪತ್ರಿಕೆಗಳೂ ಪ್ರಕಟಿಸಲಿಲ್ಲ. ಎಷ್ಟು ಟ್ಯಾಂಕುಗಳು, ಸೇನಾ ವಾಹನಗಳು ನಾಶವಾದವು ಎಂಬುದನ್ನು ನಮ್ಮ ಯಾವ "ವಸ್ತುನಿಷ್ಠ" ಪತ್ರಕರ್ತರೂ ಲೆಕ್ಕಹಾಕಬಯಸಿಲ್ಲ. ...

ಪ್ರಜಾಪ್ರಭುತ್ವ ಬೇಕೆಂಬ 'ಮುಗ್ಧ' ಬೇಡಿಕೆಯು ಅಂಗಮಾತ್ರವೆ ಅಥವಾ ಸಮಾಜವಾದೀ ಚೀಣೀ ಪ್ರಭುತ್ವದ ವಿರುದ್ಧ ಕ್ರಾಂತಿ-ವಿರೋಧಿ ಆಕ್ರಮಣವಾಗಿರಲಿಕ್ಕಿಲ್ಲವೇ ಎಂಬ ಪ್ರಶ್ನೆ ನಮ್ಮ ಯಾವ ಬೂರ್ಜ್ವಾ ವಿಶ್ಲೇಷಕರಲ್ಲೂ ಮೂಡುವುದೇ ಇಲ್ಲ.

ಜೂನ್ 4 ರ ಸೇನಾ ಕಾರ್ಯಾಚರಣೆಯಲ್ಲಿ ಕೊಲೆಯಾದವರೆನ್ನಲಾದ ಇಬ್ಬರು ವಿದ್ಯಾರ್ಥಿಗಳು ಅವರ ಸ್ಮಾರಕಾರ್ಥ "ಪ್ರಜಾಪ್ರಭುತ್ವ-ಪರ ವಿದ್ಯಾರ್ಥಿಗಳು" ಪ್ರಾರ್ಥನೆ ಸಲ್ಲಿಸಿದ ಕೆಲವೇ ಸಮಯದ ನಂತರ ತಮ್ಮ ಸ್ವಂತ ಊರು ಯಿಂಚುವಾನ್‌ಗೆ ಮರಳಿದರೆಂದು ಇವೇ ಪತ್ರಿಕೆಗಳು ಇತ್ತೀಚೆಗೆ ಪ್ರಕಟಿಸಿವೆ.

ಇದೇ ರೀತಿ ವಿಮೋಚನಾ ಸೇನೆಯ ಎರಡು ಗುಂಪುಗಳ ನಡುವೆ ಸೆಣಸಾಟದ ಸುದ್ದಿಗಳೂ ಕೇವಲ ಊಹಾಪೋಹವೆಂದು ಗೊತ್ತಾಗಿದೆ. ಸ್ವತಃ ಸಾಮ್ರಾಜ್ಯಶಾಹಿಗಳ ನಾಟೋ ಮಿಲಿಟರಿ ಕೂಟ ಕೂಡಾ ಈ ಆಂತರಿಕ ಸೆಣಸಾಟವನ್ನು ನಾವು "ವಿಪರೀತವಾಗಿ ಹಿಗ್ಗಿಸಿ ನೋಡಿದ್ದೇವೆ" ಎಂದು ಸಾರ್ವಜನಿಕವಾಗಿ ಒಪ್ಪಿಕೊಂಡಿತು.

ಜೂನ್ 8 ರಂದು ನಮ್ಮ ಎಲ್ಲಾ ಪತ್ರಿಕೆಗಳು ವಿಮೋಚನಾ ಸೇನೆಯನ್ನು ನಾಗರೀಕರು ಸ್ವಾಗತಿಸುವ ಚಿತ್ರ ಪ್ರಕಟಿಸಿದ್ದವು. ಆದರೆ ಅದಕ್ಕೆ ಕೊಟ್ಟ ವಿವರಣೆ

> ಅತ್ಯುತ್ತಮ ಮುದ್ರಣಾಲಯಗಳು ಮತ್ತು ಅಗಾಧ ಪ್ರಮಾಣದ ಕಾಗದದ ಸಗ್ರಹ ಬಂಡವಾಳಶಾಹಿಗಳ ಮುಷ್ಟಿಯಲ್ಲಿರುವಾಗ 'ಪತ್ರಿಕಾ ಸ್ವಾತಂತ್ರ್ಯ' ಎಂಬುದೊಂದು ಮೋಸ. ಬಂಡವಾಳಶಾಹಿಗಳ ಸಮಾಜದಲ್ಲಿ ಪತ್ರಿಕಾಸ್ವಾತಂತ್ರ್ಯದ ಅರ್ಥ ಪತ್ರಿಕೆಗಳಿಗೆ ಲಂಚ ತಿನ್ನಿಸುವ ಬಂಡವಾಳಶಾಹಿಗಳ ಸ್ವಾತಂತ್ರ್ಯ, ನಮ್ಮ ಸಂಪತ್ತನ್ನು ಸಾರ್ವಜನಿಕಭಿಪ್ರಾಯವನ್ನು ತಮಗೆ ಬೇಕಾದ ರೀತಿಯಲ್ಲಿ ರೂಪಿಸಲು ಬಳಸುವ ಸ್ವಾತಂತ್ರ್ಯ..



"ರಾಜಧಾನಿಯನ್ನು, ನಾಗರೀಕರನ್ನು, ವಿದ್ಯಾರ್ಥಿಗಳನ್ನು ಪ್ರೀತಿಸಿ"

ಬೈಜಿಂಗ್‌ನಲ್ಲಿ ಲಷ್ಕರಿ ಶಾಸನ ಅನುಷ್ಠಾನ ಗೊಳಿಸುವ ಆಜ್ಞೆ ಪಡೆದಿದ್ದ ಜನತಾವಿಮೋಚನಾ ಸೇನೆಯ ಸೈನಿಕರು ಮತ್ತು ಅಧಿಕಾರಿಗಳು ಬಹಳ ದಿನ ನಗರದ ಹೊರವಲಯದಲ್ಲಿಯೇ ಇದ್ದರು. "ರಾಜಧಾನಿಯನ್ನು, ನಾಗರೀಕರನ್ನು ಮತ್ತು ವಿದ್ಯಾರ್ಥಿಗಳನ್ನು ಪ್ರೀತಿಸುವ" ಧೋರಣೆ ಬಗ್ಗೆ ಅವರಿಗೆ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗುತ್ತಿತ್ತು. ಮೇಲಿನ ಚಿತ್ರದಲ್ಲಿ ಈ ಬಗ್ಗೆ ರಾಜಕೀಯ ತರಗತಿಯಲ್ಲಿ ಅವರು ಭಾಗವಹಿಸುತ್ತಿರುವುದನ್ನು ಕಾಣಬಹುದು. ಇದರಿಂದಾಗಿಯೇ ಜೂನ್ 3-4 ರ ಘಟನೆಗಳಲ್ಲಿ ಅತೀ ಹೆಚ್ಚು ಸಾವು-ನೋವು ಉಂಡವರು ಸಶಸ್ತ್ರ ಜನತಾ ಸೈನಿಕರು. ನಿರಾಯುಧ ಮತಪ್ರದರ್ಶನಗಾರರಲ್ಲ.

ದಂಗೆಕೋರರು ಮಿಲಿಟರಿ ವಾಹನಗಳನ್ನು ಮುತ್ತಿಕೊಂಡು ಮೆಶಿನ್‌ಗನ್‌ಗಳನ್ನು, ಮದ್ದುಗುಂಡುಗಳನ್ನು ಕಿತ್ತುಕೊಂಡರು. ಸೈನಿಕರನ್ನು ಸುತ್ತವರಿದು ಥಳಿಸಲಾಯಿತು. ಇನ್ನೊಂದೆಡೆ ಸೈನಿಕರನ್ನು ಬೆತ್ತಲೆ ಮಾಡಿ ಹೊಡೆಯಲಾಯಿತು. ಮತ್ತೊಂದೆಡೆ ಸೈನಿಕರನ್ನು ಕುರುಡು ಗೊಳಿಸಿದರು. ಸೈನಿಕರನ್ನು ಮುತ್ತಿಕೊಂಡು ಥಳಿಸುವ ಕೃತ್ಯ ವ್ಯಾಪಕವಾಗಿ ನಡೆಯಿತು. ಕೆಲವೆಡೆ ನಿರ್ವಾಹವಿಲ್ಲದೆ ಸೈನಿಕರು ಅಶ್ರುವಾಯು ಬಳಸಬೇಕಾಗಿಬಂತು.

ಇದೇ ವೇಳೆಗೆ ಸರಕಾರದ ಹಾಗೂ ಪಕ್ಷದ ಕಛೇರಿಗಳನ್ನು ಜನಜಂಗುಳಿ ಸುತ್ತುವರಿಯಲಾರಂಭಿಸಿತು. ಇದರಲ್ಲಿ ಹಲವಾರು ಪೋಲಿಸು, ರಕ್ಷಣಾ ಗಾರ್ಡ್‌ಗಳು ಗಾಯಗೊಂಡರು.

ಪರಿಸ್ಥಿತಿ ತ್ವರಿತವಾಗಿ ಹದಗೆಡಲಾರಂಭಿಸಿದಂತೆ ದಂಗೆಯಪ್ರಚೋದಕರು ಇನ್ನಷ್ಟು ದುಷ್ಟತನದಿಂದ ವರ್ತಿಸಲಾರಂಭಿಸಿದರು. ಸಂಜೆಯಾಗುತ್ತಿದ್ದಂತೆ ಬೈಜಿಂಗ್ ವಿಶ್ವವಿದ್ಯಾಲಯಗಳ ಸ್ವಾಯುತ್ತ ವಿದ್ಯಾರ್ಥಿಸಂಘ, ಸ್ವಾಯುತ್ತ ಕಾರ್ಮಿಕ ಸಂಘ ಎಂಬಿತ್ಯಾದಿ ಹೆಸರಿನ ಕಾನೂನು ಬಾಹಿರ ಸಂಘಟನೆಗಳ ಕೂಟನಾಯಕರು ಚಾಕು, ಕಬ್ಬಿಣದ ಸಲಾಕೆ, ಹರಿತವಾದ ಬಿದಿರುದೊಣ್ಣೆಗಳನ್ನು ಹಂಚಿ ರಕ್ಷಣಾಪಡೆಗಳು ಸೈನಿಕರನ್ನು ಕೊಲ್ಲುವಂತೆ ತಿಯಾನ್‌ಮನ್ ಚೌಕದಲ್ಲಿ ಧ್ವನಿವರ್ಧಕಗಳ ಮೂಲಕ ಕೂಗಿಕೊಳ್ಳಲಾರಂಭಿಸಿದರು. ಸಾವಿರ ಜನರಿದ್ದ 6 ನೇ ಪುಟಕ್ಕೆ

ವಾಯ್ಸ್ ಆಫ್ ಅಮೆರಿಕಾ

1987ರಂದು ಚೀನಾ ವಿದ್ಯಾರ್ಥಿಗಳು ಮೊದಲ ಬಾರಿಗೆ ಮೆರವಣಿಗೆ ನಡೆಸಿದಾಗ ಎಲ್ಲಾ ಪತ್ರಿಕೆಗಳೂ ಇದನ್ನು 1947 ರ ನಂತರದ ಅತ್ಯಂತ ಮಹತ್ವದ ಮೆರವಣಿಗೆ ಎಂದು ಬಣ್ಣಿಸಿದವು.

ಚೀನಾದ ಬೃಹತ್ ಮುಷ್ಕರದಲ್ಲಿ ಭಾಗವಹಿಸಿ ನಾಯಕರ ಭಾಷಣಗಳಿರುವ ಪತ್ರಿಕೆಗಳನ್ನು ಸುಟ್ಟುಹಾಕಿ' ಎಂದು ಬೀಜಿಂಗ್ ವಿಶ್ವವಿದ್ಯಾಲಯದ ಮುಂದೆ ಇರುವ ಭಿತ್ತಿಪತ್ರಗಳು ಕರೆಕೊಟ್ಟವು. ಆದರೆ ಈ ಭಿತ್ತಿಪತ್ರಿಕೆಗಳಲ್ಲವೂ ವಾಯ್ಸ್ ಆಫ್ ಅಮೇರಿಕಾ' ದ ವಾರ್ತೆಗಳನ್ನು ಅಲ್ಲಿ ಉದ್ಧರಿಸಿದ್ದವು.

ಚೀನಾದ ವಿದ್ಯಾರ್ಥಿಗಳಿಗೆ ಇಂತಹದೊಂದು ಮೆರವಣಿಗೆ ಚೀನಾದಲ್ಲಿ ನಡೆಯುತ್ತಿದೆ ಎಂದು ಗೊತ್ತಾದದ್ದು "ವಾಯ್ಸ್ ಆಫ್ ಅಮೆರಿಕಾ'ದ ಮೂಲಕ. ನನ್ನೊಡನೆ ಇರುವ ನನ್ನ ಹೆಂಡತಿ ಸತ್ತರೆ ಅದು ಗೊತ್ತಾಗಬೇಕಾದದ್ದು ವಿದೇಶದಲ್ಲಿರುವ ಗೆಳೆಯನ ಮೂಲಕ ಎಂಬಂತೆ.

ಐಕ್ಯರಂಗ
ಜುಲೈ19, 1987

"ವಿದ್ಯಾರ್ಥಿಗಳ ಪರವಾಗಿದ್ದ ವಿಭಾಗಕ್ಕೆ ಜನರ ಸ್ವಾಗತ" ಎಂದು! ಇದು ಕೇವಲ ವದಂತಿ, ನಿಜ ಸುದ್ದಿಯಲ್ಲ ಎಂದು ಈ ಪತ್ರಿಕೆಗಳು ಇದುವರೆಗೆ "ತಿದ್ದುಪಡಿ" ಪ್ರಕಟಿಸಿಲ್ಲ. ಪ್ರಕಟಿಸುವುದೂ ಇಲ್ಲ. ಏಕೆಂದರೆ ಆಗ ನಾಗರೀಕರು ವಿಮೋಚನಾ ಸೇನೆಯ ಒಂದು ವಿಭಾಗಕ್ಕಲ್ಲ ಇಡೀ ಸೇನೆಗೆ ಸ್ವಾಗತ ನೀಡಿದರೆಂದಾಗುತ್ತದೆ. ಅಂದರೆ " ಈ ಸೇನೆ ನಿರಾಯುಧ ಮುಗ್ಧ ವಿದ್ಯಾರ್ಥಿಗಳನ್ನು ಚಚ್ಚಿಹಾಕಿತು ಎಂಬ ಪಾಶ್ಚಿಮಾತ್ಯ ಮೂಲದ ಸುದ್ದಿಗಳ ಪರಮ ಸತ್ಯತೆಯ ಗತಿಯೇನು?

ಸ್ವಲ್ಪವಾದರೂ ಜ್ಞಾನವಿರುವ ಯಾವುದೇ ಭಾರತೀಯನಿಗೆ ಗೊತ್ತು-ಈ ಪಾಶ್ಚಿಮಾತ್ಯ ಮೂಲದ ಸುದ್ದಿಗಳು ವಿಶೇಷವಾಗಿ ಮೂರನೇ ಜಗತ್ತಿನ ಸಮಾಜವಾದೀ ದೇಶಗಳ ಬಗ್ಗೆ ಎಷ್ಟು ಸತ್ಯ ಎಂಬುದು. ಸುದ್ದಿ ಉಪಗ್ರಹಗಳ 98% ಪಾಲು ಎ.ಪಿ. ರಾಯಟರ್ ಮೊದಲಾದ ನಾಲ್ಕು ಕುಖ್ಯಾತ ಸುದ್ದಿ ಸಂಸ್ಥೆಗಳ ಒಡೆತನದಲ್ಲಿವೆ ಎಂಬುದೂ ಈ ಪತ್ರಿಕೆಗಳ ದೊಡ್ಡ ಸಂಪಾದಕರುಗಳಿಗೆ ತಿಳಿಯದ ಸಂಗತಿಯೇನಲ್ಲ. ಚೀನಾದ ಬಗ್ಗೆ ಸುದ್ದಿಗಳನ್ನು ಒದಗಿಸಲು ಕೆಲವು ಪತ್ರಿಕೆಗಳಿದ್ದುದು ಸ್ವಾಭಾವಿಕ.

ಈ ಘಟನೆಗಳ ಮೊದಲು ಯಾವುದೇ ವಿದೇಶಿ ಪತ್ರಕರ್ತನನ್ನು ಬೈಜಿಂಗ್‌ನಿಂದ ಹೊರಕಳಿಸಿರಲಿಲ್ಲ. ಹಾಗಿದ್ದರೆ ಅವರು ತೆಗೆದ ಮೈಲುಗಟ್ಟಲೆ ವೀಡಿಯೋ ಚಿತ್ರಣದಲ್ಲಿ ಮಿಲಿಟರಿ ಟ್ಯಾಂಕಿನಡಿ ವಿದ್ಯಾರ್ಥಿ ಅಥವಾ ಜನ ಜಜ್ಜಿಹೋದ ಒಂದಾದರೂ ಚಿತ್ರ ಏಕೆ ಸಿಕ್ಕಿಲ್ಲ? 'ಸಾಮೂಹಿಕ ಶವಸಂಸ್ಕಾರ" ದ ಹಲವಾರು ಸುದ್ದಿಗಳನ್ನು ಪ್ರಕಟಿಸಿದರೂ ಒಂದಾದರೂ ಫೋಟೋ ಏಕೆ ಇದುವರೆಗೆ ಸಿಕ್ಕಿಲ್ಲ? ಬ್ರಿಟನ್ನಿನ ಪ್ರತಿಗಾಮೀ ಪತ್ರಿಕೆ ಫೈನಾನ್ಶಿಯಲ್ ಟೈಮ್ಸ್‌ನ ಬೈಜಿಂಗ್ ವರದಿಗಾರ ರಾಬರ್ಟ್ ಥಾಮ್ಸನ್" ವಿದ್ಯಾರ್ಥಿಗಳನ್ನು ಚೌಕದಿಂದ ಬಲವಂತವಾಗಿ ಹೊರದಬ್ಬಿದಾಗ ಇದ್ದ ಕೆಲವರಲ್ಲಿ ನಾನೂ ಒಬ್ಬ. ಸೈನಿಕರು ಕೆಲವೊಮ್ಮೆ ಗಾಳಿಯಲ್ಲಿ ಗುಂಡುಹಾರಿಸುತ್ತಿದ್ದರು. ಕೆಲವೊಮ್ಮೆ ಗುಂಡನ್ನೇ ಹಾರಿಸುತ್ತಿರಲಿಲ್ಲ. ಚೌಕದಲ್ಲಿ ಕೆಲವು ಪ್ರತಿಭಟನಾಕಾರರು ಸತ್ತರು. ಆದರೆ ಅವರ ಸಂಖ್ಯೆ ಬಹಳ ಕಮ್ಮಿ ಎಂದೇಕೆ ಬರೆಯಬೇಕಾಗಿ ಬಂತು?

ತಮ್ಮ ಪ್ರಜ್ಞೆಯನ್ನು, ಸ್ವಂತಿಕೆಯನ್ನು ಸಾಮ್ರಾಜ್ಯಶಾಹಿಗಳ ಮನುಷ್ಯದ್ವೇಷೀ ಲೆಕ್ಕಾಚಾರಕ್ಕೆ ಮಾರಿಕೊಂಡವರಿಗೆ ಮಾತ್ರವೇ ಈ ಪ್ರಶ್ನೆಗಳು ಏಳಲಿಕ್ಕಿಲ್ಲ. ವಾಸ್ತವವಾಗಿ ಇವರೂ ಕೂಡಾ ಬಂಡವಾಳಶಾಹೀಯಿಂದ ಸಮಾಜವಾದದತ್ತ ಮಾನವ ಕುಲದ ಮುನ್ನಡೆಯನ್ನು ತಡೆಯಬೇಕೆಂಬ ಅಪೇಕ್ಷೆ ತುಂಬಿದವರು. ಆದ್ದರಿಂದಲೇ ತಮ್ಮ ಬುದ್ಧಿಯನ್ನು ಸ್ವಲ್ಪವೂ ಉಪಯೋಗಿಸದೆ ಸಾಮ್ರಾಜ್ಯಶಾಹೀ ಸುದ್ದಿ ಮಾಧ್ಯಮಗಳ ತೀರ್ಪುಗಳನ್ನು ಇವರು ಶಿರಸಾವಹಿಸುತ್ತಾರೆ. ಚೀನಾದ ಘಟನೆಗಳ ವರದಿಗಳಲ್ಲಿ, ಸಂಪಾದಕೀಯಗಳಲ್ಲಿ ಅವರ ಈ ಸ್ವರೂಪವೇ ನಮಗೆ ಈಗ ಕಂಡುಬರುತ್ತಿರುವುದು.

ಅಂತರಾಷ್ಟ್ರೀಯ ಸುದ್ದಿಗಳಲ್ಲಿ ವಿವಿಧ ಮೂಲಗಳು

ಪತ್ರಿಕೆಗಳು	ಅಮೆರಿಕಾ ಮೂಲದಿಂದ	ಲಂಡನ್ ವಿಭಾಗದಿಂದ	ಮಾಸ್ಕೋ ಮೂಲದಿಂದ
ಟೈಮ್ಸ್ ಆಫ್ ಇಂಡಿಯಾ	ಶೇ52	ಶೇ38	ಶೇ6.4
ಹಿಂದೂ	ಶೇ60	ಶೇ25	ಶೇ8.4
ಇಂಡಿಯನ್ ಎಕ್ಸ್‌ಪ್ರೆಸ್	ಶೇ32	ಶೇ51	ಶೇ16
ಟೆಲಿಗ್ರಾಫ್	ಶೇ48	ಶೇ41	ಶೇ5.8
ಸ್ಟೇಟ್ಸ್‌ಮನ್	ಶೇ41	ಶೇ49	ಶೇ3.9

ಪಾಲಿಟ್‌ಬ್ಯೂರೋ ಹೇಳಿಕೆ.

ಸಿ.ಪಿ.ಐ. (ಎಂ) ನ ವಿಶ್ವಾಸ

1 ನೇ ಪುಟದಿಂದ

"ಈ ಘಟನೆ ಭವಿಷ್ಯದ ಹಾಗೂ ಇತಿಹಾಸದ ಬಗ್ಗೆ ಹೆಚ್ಚು ಸಮುಚಿತ್ತದಿಂದ ನಾವು ಯೋಚಿಸುವಂತೆ ಪ್ರಚೋದಿಸಿದೆ. ಇದು ನಮ್ಮ ಗುರಿ ಸಾಧನೆಯನ್ನು ಹೆಚ್ಚು ಧೃಡವಾಗಿ, ಉತ್ತಮ ರೀತಿಯಲ್ಲಿ ಇನ್ನೂ ತ್ವರಿತ ಗತಿಯಲ್ಲಿ ಮುಂದೊಯ್ಯಲು ನಮ್ಮ ತಪ್ಪುಗಳನ್ನು ಹೆಚ್ಚು ತ್ವರಿತವಾಗಿ ಸರಿಪಡಿಸಿಕೊಳ್ಳಲು ಶಕ್ತಿಕಾರಕ ಅಂಶಗಳನ್ನು ಮುಂದೊಯ್ಯಲು ಅನುವು ಮಾಡಿಕೊಡುವುದು. ನಮ್ಮ ಈ ಅನುಭವದ ಸಾರವನ್ನು ಗ್ರಹಿಸಬೇಕು. ಸರಿಯಾಗಿರುವುದನ್ನು ಮುಂದುವರೆಸಬೇಕು. ತಪ್ಪುಗಳನ್ನು ಸರಿಪಡಿಸಬೇಕು ಹಾಗೂ ಅತೃಪ್ತಿಕರವಾಗಿರುವ ಅಂಶಗಳನ್ನು ಸುಧಾರಿಸಬೇಕು" ಎಂದು ಜೂನ್ 9ರಂದು ಡೆಂಗ್ ಕ್ಸಿಯಾವೋ ಪಿಂಗ್ ಹೇಳಿದರು. ಇದಕ್ಕೆ ಮೊದಲು ಮೇ 25ರಂದು ಪಕ್ಷದ ಕೇಂದ್ರೀಯ ಸಲಹಾಸಮಿತಿಯ

(ಪುಟ ಒಂದರಿಂದ)

ಅಧ್ಯಕ್ಷರು "ಈ ಅನ್ನವಸ್ಥೆ ಆಕಸ್ಮಿಕವಾಗಿಯೇನು ನಡೆಯಲಿಲ್ಲ, ಇದಕ್ಕೆ ಒಂದು ಕಾರಣ ನಾವು ಒಂದು ಅವಧಿಯಲ್ಲಿ ಮಾರ್ಕ್ಸ್‌ವಾದೀ ಲೆನಿನ್‌ವಾದೀ ಶಿಕ್ಷಣವನ್ನು ಸಡಿಲಗೊಳಿಸಿದೆವು. ಪಕ್ಷದ ಸೈದ್ಧಾಂತಿಕ ಕೆಲಸವನ್ನು ದುರ್ಬಲಗೊಳಿಸಿದೆವು" ಎಂದಿದ್ದರು.

ಈ ಹೇಳಿಕೆಯನ್ನು ಗಮನಿಸುತ್ತಾ ಪಾಲಿಟ್‌ಬ್ಯೂರೋ ಭವ್ಯ ಕ್ರಾಂತಿಕಾರೀ ಪರಂಪರೆಯುಳ್ಳ ಚೀನಾ ಕಮ್ಯುನಿಸ್ಟ್ ಪಕ್ಷ, ಚೀನಾ ಜನತಾ ಗಣತಂತ್ರದ ಸರಕಾರ ಹಾಗೂ ಜನತೆ ಅವಶ್ಯಕ ಪಾಠ ಕಲಿಯುತ್ತಾರೆ, ಸಮಾಜವಾದವನ್ನು, ಸಮಾಜವಾದೀ ಪ್ರಜಾಪ್ರಭುತ್ವವನ್ನು ಬಲಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂಬ ಸಿ.ಪಿ.ಐ. (ಎಂ)ನ ವಿಶ್ವಾಸವನ್ನು ಅಭಿವ್ಯಕ್ತಗೊಳಿಸಿದೆ.

"ವಿದ್ಯಾರ್ಥಿ ಚಳುವಳಿ" ಎಷ್ಟು "ಮುಗ್ಧ"ವಾಗಿತ್ತು?

ನಮ್ಮ ಬೂರ್ಜ್ವಾ ಪತ್ರಿಕೆಗಳು ಚೀನಾದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಪಕ್ಷಪಾತಪೂರ್ಣ ಮೂಲಗಳನ್ನೇ ಆಶ್ರಯಿಸಿದ್ದವು ಎಂಬುದು ಇವೇ ಪತ್ರಿಕೆಗಳಲ್ಲಿ ಆ ನಂತರ ಆಗಾಗ ಪ್ರಕಟವಾದ ಸುದ್ದಿಗಳಿಂದ, ಲೇಖನಗಳಿಂದ ಸ್ಪಷ್ಟಗೊಳ್ಳುತ್ತದೆ. ಜೂನ್ 25 ರ 'ಇಂಡಿಯನ್ ಎಕ್ಸ್‌ಪ್ರೆಸ್' ಪ್ರಕಟವಾದ ಲೇಖನ ಇದಕ್ಕೊಂದು ಉದಾಹರಣೆ. ಇದರ ಲೇಖಕ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಚೀಣೀ ಭಾಷೆಯ ಪ್ರಾಧ್ಯಾಪಕ ತಾನ್‌ಚುಂಗ್ ಒಟ್ಟಾರೆಯಾಗಿ ಯಾವ ರೀತಿಯಲ್ಲೂ ಚೀಣೀ ಸರಕಾರದ ಪರ ಎನ್ನಲಾಗದ ದನಿಯಿರುವ ಈ ಲೇಖನದಲ್ಲೂ ಅಲ್ಲಲ್ಲಿ ಬರುವ ಅಂಶಗಳಿಗೂ ಚೀಣೀ ಕಮ್ಯುನಿಸ್ಟ್ ಪಕ್ಷದ ಬೈಜಿಂಗ್ ಮುನಿಸಿಪಲ್ ಸಮಿತಿ ನೀಡಿದ ವಿವರಗಳಿಗೂ ಬಹಳ ಸಾಮ್ಯ ಕಾಣಬರುತ್ತದೆ. ಅಂತಹ ಕೆಲವು ಅಂಶಗಳು ಇಲ್ಲಿವೆ.

ಸರಕಾರದ ಆರಂಭದ ಪ್ರತಿಕ್ರಿಯೆಯ ನಂತರ ವಿದ್ಯಾರ್ಥಿ ಮತಪ್ರದರ್ಶಕರು ಮತಭೇಧ ಬಂದಂತೆ ಕಾಣುತ್ತದೆ. ಒದು ವಿಭಾಗ ಮತಪ್ರದರ್ಶನವನ್ನು ವಾಪಾಸು ಪಡೆದು ಚಳುವಳಿಗೆ ಗೆಲುವು ದೊರೆತಿದೆ ಎಂದು ಹೇಳಬಯಸಿದ್ದರು. ಹಾಗೆ ಅವಳು ಮಾಡದಿರಲು ಕಾರಣವೇನೋ ನನಗೆ ತಿಳಿಯದು.

ತಿಯಾನ್‌ಮೆನ್ ಚೌಕದಲ್ಲಿ ಬಹಳ ದನಿಗಳಿದ್ದವು. ಏರುಖಂಡರಾಗಬಯಸುವ ವ್ಯಕ್ತಿಗಳು ಬಹಳ ಜಾಸ್ತಿಯಾಗಿದ್ದರು. ದೊಡ್ಡ ವಿಭಾಗ ಹೊರಗಿಂದ ಬಂದಿತ್ತು. ಹುಸಿ ವಿದ್ಯಾರ್ಥಿಗಳು ಹಲವರಿದ್ದರು. ....

....., ಮೇ ರಂದು ಅಡಿಯೊತ್ತರದ ಸ್ವಾತಂತ್ರ್ಯದೇವಿಯ ಪ್ರತಿಮೆಯನ್ನು ನಿಲ್ಲಿಸಿದ್ದುಕೂಮೂ ತಂತ್ರಹೀನವಾದ ಪ್ರಯತ್ನ. ಅವಸರವಸಾರವಾಗಿ ನಿರ್ಮಿಸಿದ ಅರೆ-ಅಮೂರ್ತ ಶಿಲ್ಪ, ಅವರ ಬಂಡವಾಳ ಶಾಹೀ ಪ್ರತಿಮೆ, ಬಂಡವಾಳಶಾಹೀ ಜಗತ್ತನ್ನು ಕಿತ್ತೆಸೆಯಲು ಕರೆನೀಡುವ " ಇಂಟರ್‌ನ್ಯಾಷನಲ್" ಹಾಡಿನೊಂದಿಗೆ ಅದರ ಉದ್ಘಾಟನೆ ಒಂದು ಸಂಗತಿಯಾಗಿತ್ತು. ಇದು ಚಳುವಳಿಯ ರಾಜಕೀಯ ಮಹತ್ವಕ್ಕೆ ಮಾರಕವಾಯಿತು. ಇದು ಚೀಣೀ ಮುಖಂಡರಿಗೆ ಅಪಮಾನ ಮಾಡಲೆಂದೇ, ಅವರು ಸೇನೆ ಬಳಸಲೆಂದೇ ಮಾಡಿದ ಕೆಲಸ ಎಂದು ಒಬ್ಬ ವಿದ್ಯಾರ್ಥಿನಾಯಕ ಧ್ವನಿವರ್ಧಕದ ಮೂಲಕ ಕೂಗಿ ಹೇಳಿದರು ಕೂಡಾ.

.... ಬಹಳಷ್ಟು ಕಿಡಿಗೇಡಿ, ಶಿಸ್ತುಹೀನ, ವಿದ್ಯಾರ್ಥಿಗಳಲ್ಲದ ವ್ಯಕ್ತಿಗಳು ಮಧ್ಯೆ ನುಸುಳಿಕೊಂಡದ್ದು ಇನ್ನೊಂದು ಮುಖ್ಯ ಸಮಸ್ಯೆ. ಇವರೆಲ್ಲಾ, ಕ್ರಿಮಿನಲ್ ದಾಖಲೆ ಹೊಂದಿದ ವ್ಯಕ್ತಿಗಳಾಗಿದ್ದರು. ಜಾಗದಲ್ಲಿ "ಕೊನೆಯವರೆಗೂ ಹೋರಾಟ" ದ ಚೀರುದನಿಗಳಿಗೆ ಇವರದೇ ಕೊಡುಗೆ.

ವಿದ್ಯಾರ್ಥಿ ಮುಖಂಡರು ಪ್ರತಿಯೊಂದು ಪ್ರಶ್ನೆಯನ್ನು ಸಮೂಹದ ದಸಿಮತಕ್ಕೆ ಒಯ್ಯುತ್ತಿದ್ದುದರಿಂದ ಈ ವ್ಯಕ್ತಿಗಳು ಚಳುವಳಿಯನ್ನು ಹಿಂದಿರುಗಿನೋಡಲಾಗದ ಮಹತ್ವದ ವರೆಗೂ ತಳ್ಳುತ್ತಾ ಬಂದರು.

.... ಚಳುವಳಿ ಕಾರರ ಅತೀ ದೊಡ್ಡ ತಪ್ಪೆಂದರೆ ಜನತಾ ವಿಮೋಚನಾ ಸೇನೆಯ ಸಿಬ್ಬಂದಿಯ ಮೇಲೆ ಹಿಂಸಾಚಾರದ ಬಳಕೆ. ಅಧಿಕೃತ ವಿವರಣೆ ಪ್ರಕಾರ ಜನಸಮೂಹಗಳ ಮೇಲೆ ಗುಂಡುಹಾರಿಸಬಾರದು ಎಂದು ಕಟ್ಟುನಿಟ್ಟಾದ ನಿರ್ದೇಶನಗಳನ್ನು ಸೈನ್ಯಕ್ಕೆ ನೀಡಲಾಗಿತ್ತು. ಜೂನ್ 3-4ರಂದು ಸೇನಾ ವಾಹನಗಳು ಹಾಗೂ ಸಿಬ್ಬಂದಿಯನ್ನು ಜನಜಂಗುಳಿ ಮತ್ತು, ಹಲ್ಲೆಗಳನ್ನು ನಡೆಸಿದ ನಂತರವೇ ಗುಂಡುಹಾರಿಸುವ ಆಜ್ಞೆನೀಡಲಾಯಿತು. ಈ ಹೇಳಿಕೆಯಲ್ಲಿ ಸತ್ಯಾಂಶವಿದೆ ಎಂದು ನನಗನಿಸುತ್ತದೆ...

ಪಶ್ಚಿಮದ ಸೊಳ್ಳೆಗಳು

ನಮ್ಮ ಮನೆಯ ಕಿಟಕಿ ಬಾಗಿಲು ತೆಗೆದು ಬಿಡುತ್ತೇವೆ ತಂಗಾಳಿ ನಮಗೆ ಬೇಕು.
ಜೊತೆಗೆ ಸೊಳ್ಳೆಗಳು ನುಸುಳುತ್ತವೆ ಎಂದು ಗೊತ್ತು. ತಂಗಾಳಿಗಾಗಿ
ಸೊಳ್ಳೆಗಳನ್ನೂ ಸಹಿಸಿಕೊಳ್ಳುತ್ತೇವೆ.
ಡೆಂಗ್ ಕ್ಸಿಯೋಪಿಂಗ್

ಟಿಯಾನ್‌ಮನ್ ಚೌಕದಲ್ಲಿ
ಸ್ವಾತಂತ್ರ್ಯ ದೇವಿಯ ವಿಗ್ರಹ
ವಿಗ್ರಹದ ಮುಂದೆ ವಿದ್ಯಾರ್ಥಿಗಳು
ಪಶ್ಚಿಮದಿಂದ ಬಂದ ಸೊಳ್ಳೆಗಳು
ಹಾಡಿದವು ಗೀತೆಯನ್ನು
"ನಾವು ಪ್ರತಿ ದಿನ ಹಾಡುವೆವು, ಅಲ್ಲಿ
ಪಬ್‌ಗಳಲ್ಲಿ, ಕೊಳೆಗೇರಿಗಳಲ್ಲಿ."
ದೂರದ ನಾಯಿಗಳ ಕೂಗು
ಬೊಗಳಲು ಸ್ವಾತಂತ್ರ್ಯ ಕೇಳಿ
ನಂತರ ಕಚ್ಚಲು ನೋಡಿ

ಅಫೀಮು, ಗಾಂಜಾ, ಚರಸ್ ದೊರೆಗಳು ಹೇಳಿದರು
'ನೋಡಿ ಸ್ವರ್ಗವಿದೆ ಇಲ್ಲಿ'
ಸುಖ ಎನ್ನುವುದು ದುಡಿದು ಉಣ್ಣುವುದು
ಕುಳಿತು ಉಣ್ಣುವುದಿಲ್ಲ,
ಚೀನಿ ಅಜ್ಜನ ಕತೆ ಮರೆತುಹೋಗಿದ್ದು
ವಿಗ್ರಹ ಮುಂದೆ ಕುಳಿತಿದ್ದವರಿಗೆ

ಪರಶುರಾಮ ಕಲಾಲ್
[illegible]

ನಾಲ್ಕು ಪ್ರಮುಖ ಕರ್ತವ್ಯಗಳಿಗೆ ವಿಶೇಷಗಮನ ಚೀಣಾ ಕಮ್ಯೂನಿಸ್ಟ್ ಪಕ್ಷದ ನಿರ್ಣಯ

ಚೀಣಾ ಕಮ್ಯೂನಿಸ್ಟ್ ಪಕ್ಷದ 13ನೇಕೇಂದ್ರ ಸಮಿತಿಯ ನಾಲ್ಕನೇ ಪ್ಲಿನರಿ ಅಧಿವೇಶನ ಜೂನ್23 ಹಾಗೂ 24ರಂದು ಬೈಜಿಂಗ್‌ನಲ್ಲಿ ನಡೆಯಿತು. ಕೇಂದ್ರ ಸಮಿತಿ ಸಲಹಾ ಸಮಿತಿಯ 170ಸದಸ್ಯರು, 106ಪರ್ಯಾಯ ಸದಸ್ಯರು, ಶಿಸ್ತು ತಪಾಸಣೆ ಕೇಂದ್ರ ಕಮಿಷನ್‌ನ 68ಸದಸ್ಯರು ಹಾಗೂ ವಿವಿಧ ವಿಭಾಗಗಳ 29ಪ್ರಮುಖ ಸಂಗಾತಿಗಳು ಇದರಲ್ಲಿ ಭಾಗವಹಿಸಿದರು. ಇದಕ್ಕೆ ಮೊದಲು ಪಾಲಿಟ್ ಬ್ಯೂರೋ ವಿಸ್ತೃತ ಸಭೆ ಜೂನ್ 19ರಿಂದ 21ರವರೆಗೆ ನಡೆಯಿತು.

ಕಳೆದ ಎರಡು ತಿಂಗಳುಗಳಲ್ಲಿ ದೇಶದ ರಾಜಕೀಯ ಸನ್ನಿವೇಶವನ್ನು ವಿಶ್ಲೇಷಿಸಿದ ಈ ಸಭೆ ವಿದ್ಯಾರ್ಥಿಗಳ ಅಸಂತೋಷದ ಲಾಭ ಪಡೆದು ನಡೆದ ಸಂಘಟಿತ ಯೋಜಿತ ರಾಜಕೀಯ ಅಲ್ಲೋಲಕಲ್ಲೋಲ ಬೈಜಿಂಗ್‌ನಲ್ಲಿ ಕ್ರಾಂತಿವಿರೋಧಿ ದಂಗೆಯಾಗಿ ಬೆಳೆಯಿತು ಎಂದಿತು. ಈ ಗಂಭೀರ ರಾಜಕೀಯ ಹೋರಾಟದಲ್ಲಿ ಪಕ್ಷದ ಕೇಂದ್ರ ಸಮಿತಿ ಅವಶ್ಯಕವಾದ ಸರಿಯಾದ ಕ್ರಮಗಳನ್ನು ಕೈಗೊಂಡಿತು ಎಂದು ಗುರುತಿಸಿದ ಸಭೆ ಈ ಹೋರಾಟದಲ್ಲಿ ಡೆಂಗ್ ಕ್ಸಿಯಾವೋ ಪಿಂಗ್ ಹಾಗೂ ಮತ್ತಿತರ ಹಿರಿಯ ಅನುಭವೀ ಕಾರ್ಮಿಕ ವರ್ಗದ ಕ್ರಾಂತಿಕಾರಿಗಳ ಮಹತ್ವದ ಪಾತ್ರವನ್ನು ಜನತಾ ವಿಮೋಚನಾ ಸೇನೆಯ ಮಹಾನ್ ಕೊಡುಗೆಯನ್ನು ಸ್ಮರಿಸಿತು.

ನಾಲ್ಕು ಮೂಲಾಧಾರ ನೀತಿಗಳಿಗೆ ಅವಿಚಲ ಬದ್ಧತೆ ಮುಂದುವರೆಯಬೇಕು. ಸುಧಾರಣೆಯ ಹಾಗೂ ಹೊರ ಜಗತ್ತಿಗೆ ತೆರೆದುಕೊಳ್ಳುವ ನೀತಿ ದೇಶವನ್ನು ಶಕ್ತಿಹಾಗೂ ಸಮೃದ್ಧಿಯತ್ತ ಒಯ್ಯುವ ಮಾರ್ಗ-ಇದನ್ನು ದೃಢಚಿತ್ತದಿಂದ ಮುಂದುವರಿಸಬೇಕು ಎಂದು ಹೇಳಿರುವ ಕೇಂದ್ರ ಸಮಿತಿಯ ಹೇಳಿಕೆ ಚೀಣಾ ಮತ್ತೆ ಹಳೆಯ ಬಾಗಿಲು ಮುಚ್ಚಿಕೊಳ್ಳುವ ದಾರಿಗೆ ತೆರಳಬಾರದು ಎಂದು ಒತ್ತಿ ಹೇಳಿದೆ. ಸದ್ಯ ನಾಲ್ಕು ಪ್ರಮುಖ ಕರ್ತವ್ಯಗಳನ್ನು ನಿರ್ವಹಿಸಲು ವಿಶೇಷ ಗಮನ ನೀಡಬೇಕೆಂದು ಚೀಣಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ 4ನೇ ಪ್ಲಿನರಿ ಅಧಿವೇಶನ ಕರೆ ನೀಡಿದೆ.

1. ಅಲ್ಲೋಲಕಲ್ಲೋಲವನ್ನು ದೃಢವಾಗಿ ನಿಲ್ಲಿಸಿ, ಕ್ರಾಂತಿ-ವಿರೋಧಿ ದಂಗೆಯನ್ನು ಅಡಗಿಸಬೇಕು. ಇದರಲ್ಲಿ ಎರಡು ಭಿನ್ನ ರೀತಿಯ ವೈರುಧ್ಯಗಳನ್ನು ಕಟ್ಟುನಿಟ್ಟಾಗಿ ಗುರುತಿಸಬೇಕು. ಇಡೀ ದೇಶದಲ್ಲಿ ಸನ್ನಿವೇಶವನ್ನು ಸ್ಥಿರಗೊಳಿಸಬೇಕು.

2. ಆರ್ಥಿಕ ಪರಿಸರವನ್ನು ಸುಧಾರಿಸುವ, ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸು ನೀತಿಯ ಅನುಷ್ಠಾನವನ್ನು ಮುಂದುವರೆಸಿ ಸುಧಾರಣೆ ಮತ್ತು ಹೊರ ಜಗತ್ತಿಗೆ ತೆರೆದುಕೊಳ್ಳುವ ಧೋರಣೆಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಜಾರಿಗೊಳಿಸಿ ಆರ್ಥಿಕವನ್ನು ಎಡೆಬಿಡದೆ, ಸ್ಥಿರ ಹಾಗೂ ಸಂಯೋಜಿತ ರೀತಿಯಲ್ಲಿ ಬೆಳೆಸಬೇಕು.

3. ಸೈದ್ಧಾಂತಿಕ, ರಾಜಕೀಯ ಕೆಲಸವನ್ನು ಶ್ರದ್ಧೆಯಿಂದ ಅಧಿಕಗೊಳಿಸಿ ದೇಶಪ್ರೇಮ, ಸಮಾಜವಾದ, ಸ್ವಾತಂತ್ರ್ಯ, ಸ್ವಾವಲಂಬನೆ, ಸರಳ ಜೀವನ ಮತ್ತು ಕಠಿಣ ದುಡಿಮೆಯ ಶಿಕ್ಷಣ ನೀಡಲು, ಬೂರ್ಜ್ವಾ ಉದಾರೀಕರಣವನ್ನು ಮನಃಪೂರ್ವಕವಾಗಿ ವಿರೋಧಿಸುವ ಹೆಚ್ಚಿನ ಪ್ರಯತ್ನ ನಡೆಯಬೇಕು.

4. ಪಕ್ಷ ಪ್ರಜಾಪ್ರಭುತ್ವ ಮತ್ತು ಕಾನೂನುವ್ಯವಸ್ಥೆ ಕಟ್ಟುವ ಕೆಲಸವನ್ನು ಅಧಿಕ ಪ್ರಮಾಣದಲ್ಲಿ ಹೆಚ್ಚಿಸಬೇಕು. ಭ್ರಷ್ಟಾಚಾರವನ್ನು ದಂಡಿಸಬೇಕು. ಪಕ್ಷದಿಂದ ಜನತೆ ನಿರೀಕ್ಷೆಯಿಟ್ಟು ಕೊಂಡಿರುವುದನ್ನು ಸಾರ್ಥಕ ಪಡಿಸಲು ಜನತೆಯ ಅಗತ್ಯತೆಗಳ ಸಾಧನೆ.

ಚೀಣಾದ ಶಾಂತಿಯ ಸ್ವತಂತ್ರ ವಿದೇಶಧೋರಣೆ ಮುಂದುವರೆಯುತ್ತದೆ. ಶಾಂತಿಯುತ ಸಹ ಅಸ್ತಿತ್ವದ ಐದು ಸೂತ್ರಗಳ ಆಧಾರದ ಮೇಲೆ ಎಲ್ಲಾ ದೇಶಗಳೊಂದಿಗೆ ಗೆಳೆತನ ಸಂಬಂಧ ಬೆಳೆಸುವುದನ್ನು ಮುಂದುವರೆಸುತ್ತದೆ ಎಂದೂ ಕೇಂದ್ರ ಸಮಿತಿ ಹೇಳಿಕೆ ತಿಳಿಸಿದೆ. ಕ್ರಾಂತಿ ವಿರೋಧಿ ದಂಗೆಯನ್ನು ಅಡಗಿಸುವ ಚೀಣಾದ ನ್ಯಾಯಬದ್ಧ ಹೋರಾಟವನ್ನು ಎಲ್ಲಾ ದೇಶಗಳ ಜನತೆ ಅರ್ಥಮಾಡಿಕೊಳ್ಳುತ್ತಾರೆ, ಮಿತ್ರತ್ವ ಪೂರ್ಣ ಸಂಬಂಧಗಳು ಬೆಳೆಯುತ್ತಾ ಹೋಗುತ್ತವೆ ಎಂದೂ ಹೇಳಿ ತನ್ನ ನಂಬಿಕೆ ವ್ಯಕ್ತಪಡಿಸಿದೆ.

"ಸಮಸ್ತ ಪಕ್ಷ ಮತ್ತು ದೇಶದ ಎಲ್ಲಾ ದೇಸೀ ಜನಾಂಗಗಳ ಜನತೆ ಪಕ್ಷದ ಕೇಂದ್ರಸಮಿತಿಯ ಸುತ್ತ ಇನ್ನೂ ನಿಕಟವಾಗಿ ಒಂದಾಗಬೇಕು. ಒಂದೇ ಮನಸ್ಸು, ಹೃದಯವಂತರಾಗಿ ಎಲ್ಲಾ ತೊಂದರೆಗಳನ್ನು ಮೀರಿನಿಲ್ಲಲು ಕಠಿಣ ಶ್ರಮ ಪಡಬೇಕು. ದೇಶದ ಸಮಾಜವಾದೀ ಆಧುನೀಕರಣವನ್ನು ಮುಂದೊತ್ತಬೇಕು. ಸುಧಾರಣೆಯ, ಹೊರಜಗತ್ತಿಗೆ ತೆರೆದುಕೊಳ್ಳುವ ಗುರಿ ಸಾಧಿಸಬೇಕು" ಎಂದು 13 ನೇ ಸಿ.ಪಿ.ಸಿ. ಕೇಂದ್ರ ಸಮಿತಿಯು 4ನೇ ಪ್ಲಿನರಿ ಅಧಿವೇಶನ ಕರೆ ನೀಡಿದೆ.

ಈ ಅಧಿವೇಶನ ಹಿಂದಿನ ಕಾರ್ಯದರ್ಶಿ ಝುವೋ ಝಿಯಾಂಗ್ ಪಕ್ಷ-ವಿರೋಧಿ, ಸಮಾಜವಾಧೀ ಗಲಭೆಗಳ ಸಮಯದಲ್ಲಿ ಮಾಡಿದ ತಪ್ಪುಗಳ ವರದಿಯನ್ನು ಪರಿಶೀಲಿಸಿ ಅದಕ್ಕೆ ಅಂಗೀಕಾರ ನೀಡಿತು. ಪಾಲಿಟ್‌ಬ್ಯೂರೋ ಪರವಾಗಿ ಲೀಪೆಂಗ್ ಈ ವರದಿ ಓದಿದರು. ಅವರು ಸುಧಾರಣೆ, ಹೊರಜಗತ್ತಿಗೆ ತೆರೆದ ನೀತಿ ಹಾಗೂ ಆರ್ಥಿಕ ಕೆಲಸಗಳಲ್ಲಿ ಪ್ರಯೋಜನಕಾರಕ ಕೆಲಸ ಮಾಡಿದರೂ ದೇಶದ, ಪಕ್ಷದ ಭವಿಷ್ಯತ್ತಿನ ಗಂಭೀರ ಗಳಿಗೆಯಲ್ಲಿ ಅವರು ಗಲಭೆಗಳನ್ನು ಬೆಂಬಲಿಸುವ ಪಕ್ಷವನ್ನು ಒಡೆಯುವ ತಪ್ಪು ಮಾಡಿದರು. ಗಲಭೆ ತೀಕ್ಷ್ಣಗೊಳ್ಳುವಲ್ಲಿ ಅವರದ್ದು ತಪ್ಪಿಸಿಕೊಳ್ಳಲಾಗದ ಜವಾಬ್ದಾರಿ ಎಂದು ವರದಿ ತಿಳಿಸಿತು. ಕೇಂದ್ರ ಸಮಿತಿಯ ಕೆಲಸ ವಹಿಸಿಕೊಂಡ ಮೇಲೆ ಅವರು ನಾಲ್ಕು ಆಧಾರಭೂತ ನೀತಿಗಳ ಬಗ್ಗೆ ಹಾಗೂ ಬೂರ್ಜ್ವಾ ಉದಾರವಾದದ ವಿರುದ್ಧ ನಿಷ್ಕ್ರಿಯ ನಿಲುವು ತಳೆದರು-ಇದರಿಂದಾಗಿ ಪಕ್ಷದ ಉದ್ದೇಶಕ್ಕೆ ತುಂಬಾ ಹಾನಿಯಾಯಿತು ಎಂದು ವರದಿ ಹೇಳಿತ್ತು.

ಈ ಗಂಭೀರ ತಪ್ಪುಗಳಿಂದಾಗಿ ಅವರನ್ನು ಪ್ರಧಾನ ಕಾರ್ಯದರ್ಶಿ ಪದದಿಂದ, ಪಾಲಿಟ್‌ಬ್ಯೂರೋದ ಸ್ಥಾಯಿ ಸಮಿತಿಯ ಸದಸ್ಯತ್ವದಿಂದ, ಹಾಗೂ ಕೇಂದ್ರ ಸಮಿತಿಯ ಮಿಲಿಟರಿ ಆಯೋಗದ ಪ್ರಥಮ ಉಪಾಧ್ಯಕ್ಷ ಸ್ಥಾನದಿಂದ ತೆಗದು ಹಾಕಲು ಪ್ಲಿನರಿ ಅಧಿವೇಶನ ನಿರ್ಧರಿಸಿತು. ಹುಕ್ವಿಲಿಯವರನ್ನು ಕೂಡಾ ಪಾಲಿಟ್‌ಬ್ಯೂರೋದಿಂದ ತೆಗೆದುಹಾಕಲು ನಿರ್ಧರಿಸಲಾಯಿತು.

ಜಿಯಾಂಗ್ ಝೆಮಿನ್‌ರನ್ನು ಪ್ರಧಾನ ಕಾರ್ಯದರ್ಶಿಯಾಗಿ ಸಾಂಗ್ ಪಿಂಗ್ ಮತ್ತು ಲಿ ಝುಹುವಾನ್‌ರನ್ನು ಪಾಲಿಟ್‌ಬ್ಯೂರೋ ಸ್ಥಾಯೀ ಸಮಿತಿಯ ಸದಸ್ಯ ರನ್ನಾಗಿ ಆರಿಸಲಾಯಿತು.

ಮಾತುಕತೆ ಮುಂದುವರಿಯುತ್ತದೆ

ಮತ ಪ್ರದರ್ಶನಗಳಲ್ಲಿ, ಮೆರವಣಿಗೆಗಳಲ್ಲಿ ಭಾಗವಹಿಸಿದ ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಹಾಗೂ ಅವರೊಡನೆ ಬೆರೆತುಕೊಂಡ ಕೆಲವು ಕ್ರಾಂತಿ-ವಿರೋಧಿ ಗೂಂಡಾಗಳ ನಡುವೆ ಚೀಣಾ ಸರಕಾರ ಮೊದಲಿನಿಂದಲೂ ವ್ಯತ್ಯಾಸ ಕಾಣುತ್ತಾ ಬಂದಿತ್ತು. ವಿದ್ಯಾರ್ಥಿಗಳು ಹಿಡಿದ ದಾರಿ ತಪ್ಪಾಗಿದ್ದರೂ ಅವರ ಬೇಡಿಕೆಗಳ ಬಗ್ಗೆ ಮಾತುಕತೆ ಸದಾ ಸಿದ್ಧವಿತ್ತು. ಇದೇ ನಿಲುವು ಈಗಲೂ ಮುಂದುವರೆಯುತ್ತದೆ ಎಂದು ಸರಕಾರೀ ಮಂಡಳಿಯ ಅಧ್ಯಕ್ಷ ಯುವಾನ್ ಮು ಮತ್ತೆ ಒತ್ತಿ ಹೇಳಿದ್ದಾರೆ. ದಂಗೆಕೋರರ ಬೇಡಿಕೆಗಳಿಗಿಂತ ಸಂಪೂರ್ಣ ಭಿನ್ನವಾಗಿದ್ದವು. ಪರಿಸ್ಥಿತಿ ಮತ್ತೆ ಸಾಮಾನ್ಯಗೊಂಡಾಗ ಸರಕಾರ ವಿದ್ಯಾರ್ಥಿಗಳ ಹಾಗೂ ಇತರರ ಅಭಿಪ್ರಾಯಗಳನ್ನು ಕೇಳುತ್ತದೆ, ಅವರ ಸರಿಯಾದ ಸಲಹೆ ಸೂಚನೆಗಳನ್ನು ಅಂಗೀಕರಿಸುತ್ತದೆ, ಪಕ್ಷದ ಮತ್ತು ಸರಕಾರದ ಕೆಲಸವನ್ನು ಸುಧಾರಿಸುತ್ತದೆ ಎಂದು ಯುವಾನ್ ಮು ತಿಳಿಸಿದರು. ಮತ ಪ್ರದರ್ಶನಗಳ ಸಮಯದಲ್ಲಿ ಎತ್ತಿದ ತರ್ಕಬದ್ಧ ಬೇಡಿಕೆಗಳಿಗೆ ಗಮನ ನೀಡಲಾಗುವುದೆಂದೂ ಅವರು ಹೇಳಿದರು.

ೀ ಪುಟದಿಂದ ಗುಂಪೊಂದು ಸಮೀಪದಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡವೊಂದನ್ನು ಕೆಡವಿ ಇಟ್ಟಿಗೆ ಸಲಾಕೆಗಳಿಂದ ಬೀದಿ ಕಾಳಗಕ್ಕೆ ನಿಂತರು. ಇದು ದೊಂಬಿಯಲ್ಲದೆ ಮತ್ತೇನು?

ಈ ಹಂತದಲ್ಲಿ ಪಕ್ಷದ ಕೇಂದ್ರ ಸಮಿತಿ, ಸರಕಾರೀ ಮಂಡಳಿ ಮತ್ತು ಕೇಂದ್ರಿಯ ಸೈನಿಕ ಆಯೋಗ ಬೈಜಿಂಗ್‌ನ ಕೇಂದ್ರದಲ್ಲಿ ದಂಗೆ ಕೋರರನ್ನು ಅಡಗಿಸಲುಹೊರವಲಯದಲ್ಲಿ ಸಿದ್ಧವಾಗಿ ನಿಂತಿದ್ದ ಸೈನಿಕ ಪಡೆಗಳಿಗೆ ಲಷ್ಕರಿ ಶಾಸನ ಜಾರಿಗೊಳಿಸಲು ಆಜ್ಞೆ ನೀಡಲು ನಿರ್ಧರಿಸಿದವು.

ಜೂನ್ 3 : ಸಾಯಂಕಾಲ 6.30 ಗಂಟೆ: ಲಷ್ಕರೀ ಶಾಸನ ಮುಖ್ಯ ಕಛೇರಿ ಒಂದು ತುರ್ತು ಹೇಳಿಕೆ ಹೊರಡಿಸಿ ತಮ್ಮ ಜಾಗರೂಕತೆ ಹೆಚ್ಚಿಸಿಕೊಂಡು ಯಾರೂ ಬೀದಿಗೆ ಬರಬಾರದೆಂದೂ ತಿಯಾನ್‌ಮೆನ್ ಚೌಕದತ್ತ ಹೋಗಬಾರದೆಂದೂ ಬೈಜಿಂಗ್‌ವಾಸಿಗಳಿಗೆ ಕರೆನೀಡಿತು. ಇದನ್ನು ರೇಡಿಯೋ, ಟಿ.ವಿ.ಗಳಲ್ಲಿ ಮತ್ತೆ ಮತ್ತೆ ಪ್ರಸಾರ ಮಾಡಲಾಯಿತು.

ವಾಸ್ತವವಾಗಿ ಲಷ್ಕರೀ ಶಾಸನ ಪಡಿಗಳು ಅಂದು ರಾತ್ರಿ 10 ಗಂಟೆಗಷ್ಟೇ ನಗರ ಪ್ರವೇಶಿಸಿದವು. ಲಷ್ಕರಿ ಶಾಸನ ಹಿಂದಿನಿಂದ ಡ್ಯೂಟಿಯಲ್ಲಿದ್ದ ಪಡೆಗಳು ನಾಗರಿಕರೊಡನೆ ಘರ್ಷಣೆನಡೆಯದಂತೆ ಗರಿಷ್ಠ ಸಂಯಮದಿಂದ ವರ್ತಿಸಿದ್ದವು. ಇದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ನಗರ ಪ್ರವೇಶಿಸುವಾಗಲೂ ಗಲಭೆ ಕೋರರ ಅತ್ಯಂತಕ್ರೂರ ಹಿಂಸಾಚಾರವನ್ನು ಎದುರಿಸ ಬೇಕಾಗಿ ಬಂದರೂ ಪಡೆಗಳು ಸಂಯಮದಿಂದಲೇ ಮುಂದುವರಿದವು.

ಒಂದು ಗಂಟೆಯೊಳಗೆ ನಗರದ ಮುಖ್ಯ ರಸ್ತೆಯಲ್ಲಿ ಮಿಲಿಟರಿ ವಾಹನಗಳನ್ನು ಗಲಭೆಕೋರರು ಸುಟ್ಟರು. ಸೈನಿಕರ ಮೇಲೆ ಕಲ್ಲು ತೂರಾಟ, ಟ್ರಾಮು ಗಳಿಗೂ ಬೆಂಕಿ. ಬೆಂಕಿ ಆರಿಸಲು ಬಂದ ಅಗ್ನಿ ಶಾಮಕಗಳಿಗೂ ಬೆಂಕಿ. ಮಿಲಿಟರಿ ವಾಹಗಳನ್ನು ಹಾಳುಗೆಡವಬೇಡಿ ಎಂದು ತಿಳಿಹೇಳಲು ಪ್ರಯತ್ನಿಸಿದ ಸೈನಿಕರಿಗೆ ತೀವ್ರ ಏಟು.

ಜೂನ್ 4 : ಮುಂಜಾವಿನ ಹೊತ್ತಿಗೆಹತ್ತಾರು ರಸ್ತೆ ಮೂಲೆಗಳಲ್ಲಿ ನೂರಾರು ವಾಹನಗಳು ಉರಿಯುತ್ತಿದ್ದವು. ಒಂದೆಡೆ ಒಟ್ಟಿಗೆ ಹನ್ನೆರಡು ವಾಹನಗಳು ಉರಿಯುತ್ತಿದ್ದವು. ಕೆಲವು ಸೈನಿಕರನ್ನು ಜೀವಂತ ಸುಡಲಾಯಿತು.

ಈ ಹಂತದಲ್ಲಿ ಒಂದೆಡೆ ಕಬ್ಬಿಣದ ಸಲಾಕೆ, ಕೈಬಾಂಬುಗಳಿಂದ ಸಜ್ಜಿತವಾಗಿ ಆಕ್ರಮಣಕ್ಕೆ ಧಾವಿಸುತ್ತಿದ್ದ ಜನಜಂಗುಳಿಯನ್ನು ಚದುರಿಸಲು ಪಿ.ಎಲ್.ಎ. ಸೈನಿಕರು ಗಾಳಿಯಲ್ಲಿ ಗುಂಡುಹಾರಿಸಿದರು. ಆದರೂ ಉಪಯೋಗವಾಗಲಿಲ್ಲ. ದಂಗೆಕೋರರು ಈಗ ಆಹಾರ ಸಾಗಿಸುತ್ತಿದ್ದ ವಾಹನಗಳ ಲೂಟಿ ಯಾಯಿತು. ತಿಯಾನ್‌ಮೆನ್ ಚೌಕದಲ್ಲಿರುವ ಮಾವೋ ಸ್ಮಾರಕದ ಹಿಂದೆ ಇರುವ ಪೈನ್‌ಮರಗಳು ಹತ್ತಿ ಉರಿಯುತ್ತಿದ್ದವು. ಆಯಾನ್‌ಮೆನ್ ಮಹಾ ದ್ವಾರದಲ್ಲಿ ಒಂದು ಬಸ್ಸನ್ನು ನುಗ್ಗಿಸಿ ಅದನ್ನೂ ಸುಟ್ಟು ಕೆಡಹುವ ಪ್ರಯತ್ನ ನಡೆಯಿತು. ಸೈನಿಕರು ಮೇಲೆ ಆಕ್ರಮಣ, ಚಿತ್ರಹಿಂಸೆ ಎಲ್ಲೆಡೆ ನಡೆಯ ಲಾರಂಭಿಸಿತು. "ನೀವು ಚೀಣೀಯರಾದರೆ ಸೈನಿಕರ ಮೇಲೆ ಆಕ್ರಮಣ ಮಾಡಿ" ಎಂದು ದಂಗೆಕೋರರು ಕೂಗುತ್ತಿದ್ದರು. ಸೈನಿಕ ಅಂಬುಲೆನ್ಸ್‌ನ್ನು ಅಡ್ಡಗಟ್ಟಿದುದರಿಂದ ಗಾಯಗೊಂಡ ಒಬ್ಬ ಸೈನಿಕ ಮೃತನಾದ. ಅದರಿಂದಲೇ ತೃಪ್ತರಾಗದ ದಂಗೆಕೋರರು ಇತರ ಏಳು ಸೈನಿಕರನ್ನು ಕೊಲ್ಲಿ ಎಂದು ಜನ ಜಂಗುಳಿ ಯನ್ನು ಪ್ರಚೋದಿಸಿದರು. ಕ್ಸಿಡಾನ್‌ನಲ್ಲಿ ಸೈನಿಕನನ್ನು ಕೊಂದು ಸುಡಲಾಯಿತು. ಫ್ಯೂಚೆಂಗ್‌ಮೆನ್‌ನಲ್ಲಿ ಸೈನಿಕನೊಬ್ಬನ ಹೆಣವನ್ನು ತೂಗುಹಾಕಲಾಯಿತು. ಚೊಂಗ್‌ವೆನ್‌ಮೆನ್‌ನಲ್ಲಿ ಇನ್ನೊಬ್ಬ ಸೈನಿಕನನ್ನು ಸೇತುವೆಯ ಮೇಲಿಂದ ಕೆಳಗೆಸೆದುಕೊಂದು ನಂತರ ಸುಡಲಾಯಿತು. ಚಾಂಗ್ ಅನ್ ಅವೆನ್ಯೂನಲ್ಲಿ ಒಬ್ಬ ಸೇನಾಧಿಕಾರಿಯನ್ನು ಕೊಂದು ಅವರ ಹೊಟ್ಟೆ ಬಗೆದು ಕಣ್ಣುಗುಡ್ಡೆಗಳನ್ನು ಹೊರಗೆಳೆಯಲಾಯಿತು. ಇನ್ನೊಬ್ಬ ಸೈನಿಕನನ್ನು ಕುರುಡುಗೊಳಿಸಿ ನದಿಗೆ ಎಸೆದರು.

ಆರಂಭದ ಅಂಕಿ ಅಂಶಗಳ ಪ್ರಕಾರವೇ ಸುಮಾರು 180 ಸೈನಿಕ ವಾಹನಗಳು, 40 ಸಶಸ್ತ್ರ ವಾಹನಗಳು, 90 ಪೋಲಿಸ್‌ಕಾರ್‌ಗಳು, 80 ಬಸ್ಸುಗಳು, 40 ಇತರ ವಾಹನಗಳು ಧ್ವಂಸವಾದವು. ಸುಮಾರು ನೂರು ಸೈನಿಕರು, ಪೋಲಿಸರು ಕೊಲಲ್ಪಟ್ಟರು. ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಇಷ್ಟೊಂದು ಸಂಖ್ಯೆಯಲ್ಲಿ ಸೈನಿಕರ, ಪೋಲಿಸರ ಹಾಗೂ ಅವರ ವಾಹನಗಳ ನಾಶವೇ ಅವರು ಎಷ್ಟೊಂದು ಸಂಯ ಮದಿಂದ ತಾಳ್ಮೆಯಿಂದ ವರ್ತಿಸಿದರು ಎನ್ನುವುದಕ್ಕೆ ಸಾಕ್ಷಿ. ಜನತಾ ವಿಮೋಚನಾ ಸೇನೆ ನಿಜವಾಗಿಯೂ ಜನತೆಯನ್ನು ಸೇನೆ ಎಂದು ಇದು ತೋರಿಸಿಕೊಡುತ್ತದೆ.

ಇಷ್ಟೊಂದು ಸಂಯಮದಿಂದ ವರ್ತಿಸಿದರೂ ಕೊನೆಗೆ ನಿರ್ವಾಹವಿಲ್ಲದೆ ದಂಗೆಯನ್ನು ಅಡಗಿಸಲು, ರಾಜಧಾನಿಯಲ್ಲಿ ಕಾನೂನು ವ್ಯವಸ್ಥೆ ತರುವ ತಮ್ಮ ಕರ್ತವ್ಯ ನೆರವೇರಸಲು ಲಷ್ಕರೀ ಶಾಸನ- ಪಡೆಗಳು ದಂಗೆಕೋರರ ಮೇಲೆ ಗುಂಡು ಹಾರಿಸಲೇಬೇಕಾಯಿತು. ಇದರಿಂದಾಗಿ ನೂರು ನಾಗರಿಕರು ಸತ್ತರು. ಒಂದು ಸಾವಿರ ಮಂದಿ ಗಾಯಗೊಂಡರು.

ಇನ್ನು ತಿಯಾನ್‌ಮೆನ್ ಚೌಕದಲ್ಲಿ ರಕ್ತಪಾತದ ಸುದ್ದಿ ಬಗ್ಗೆ ವಾಸ್ತವಿಕ ಸಂಗತಿ ಹೀಗಿದೆ:

ಜೂನ್ 4ರ ಮುಂಜಾವಿನ 1.30 ಗಂಟೆ ಸೇನೆ ತಿಯಾನ್‌ಮೆನ್ ಚೌಕವನ್ನು ಪ್ರವೇಶಿಸಿದ ನಂತರ ಬೈಜಿಂಗ್ ನಗರ ಸರಕಾರ ಮತ್ತು ಲಷ್ಕರಿ ಶಾಸನ ಮುಖ್ಯಾಲಯ ಒಂದು ತುರ್ತು ಸೂಚನೆ ಜಾರಿಗೊಳಿಸಿದವು.

"ಈ ಸಂಜೆ ರಾಜಧಾನಿಯಲ್ಲಿ ಒಂದು ಗಂಭೀರ ಕ್ರಾಂತಿ-ವಿರೋಧಿ ದಂಗೆ ನಡೆದಿದೆ. ದಂಗೆಕೋರರು ಚೀಣಾ ಜನತಾಗಣತಂತ್ರವನ್ನು, ಸಮಜವಾದೀ ವ್ಯವಸ್ಥೆಯನ್ನು ಕಿತ್ತೆಸೆಯಲು ಸೈನಿಕರ ಮೇಲೆ ಕ್ರೂರ ಹಲ್ಲೆ ನಡೆಸಿದರು, ಅವರ ಮದ್ದುಗುಂಡುಗಳನ್ನು ಕಿತ್ತುಕೊಂಡರು. ಮಿಲಿಟರಿ ವಾಹನಗಳನ್ನು ಸುಟ್ಟರು. ರಸ್ತೆಗಳಲ್ಲಿ ಅಡ್ಡಿ-ಆತಂಕ ಸೃಷ್ಟಿಸಿದರು. ಕೆಲವುದಿನಗಳವರೆಗೆ ಜನತಾವಿಮೋಚನಾ ಸೇನೆ ಸಂಯಮದ ನಿಲುವು ತಳೆದಿದೆ. ಆದರೆ ಈಗ ಈ ಪ್ರತಿಕ್ರಾಂತಿಯ ಮೇಲೆ ದೃಢವಾದ ಪ್ರತ್ಯಾಕ್ರಮಣ ನಡೆಯಬೇಕಾಗಿದೆ. ಬೈಜಿಂಗ್‌ವಾಸಿಗಳು ಲಷ್ಕರೀ ಶಾಸನದ ನಿಯಮಗಳನ್ನು ಪಾಲಿಸಬೇಕು. ಸಂವಿಧಾನವನ್ನು ಕಾಪಾಡಲು, ಸಮಾಜವಾದೀ ತಾಯ್ನಾಡು ಹಾಗೂ ಅದರ ರಾಜಧಾನಿ ಭದ್ರತೆಯ ರಕ್ಷಣೆಯಲ್ಲಿ ಸೈನಿಕರೊಂದಿಗೆ ಸಹಕರಿಸಬೇಕು. ಈ ಎಚ್ಚರಿಕೆಯನ್ನು ನಿರ್ಲಕ್ಷಿಸಿದವರು ವೈಯುಕ್ತಿಕ ಭದ್ರತೆಯ ಭರವಸೆ ನೀಡಲು ಈಗ ಸಾಧ್ಯವಿಲ್ಲ. ಮುಂದಿನ ಪರಿಣಾಮಗಳಿಗೆ ಅವರೇ ಸ್ವತಃ ಹೊಣೆಯಾಗುತ್ತಾರೆ.

ಈ ಸೂಚನೆಯನ್ನು ಮೂರುಗಂಟೆಗಳ ಕಾಲ ಪದೇ ಪದೇ ಬಿತ್ತರಿಸಲಾಯಿತು. ಇದನ್ನು ಕೇಳಿದ ಮೇಲೆ ಚೌಕದ ಕೇಂದ್ರದಲ್ಲಿದ್ದ ಹಲವಾರು ಮಂದಿ ಚೌಕಬಿಟ್ಟು ತೆರಳಲಾರಂಭಿಸಿದರು.

ಮುಂಜಾವಿನ 3 ಗಂಟೆಯ ಹೊತ್ತಿಗೆ ಧರಣಿ ಕುಳಿತಿದ್ದ ಮತ ಪ್ರದರ್ಶನಕಾರರು ಸೇನಾಪಡೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಸಾವು ಚೌಕದಿಂದ ತೆರಳುವ ಅಪೇಕ್ಷೆಯನ್ನು ತಿಳಿಸಿದರು. ಇದನ್ನು ಸೇನಾ ಪಡೆಗಳು ಸ್ವಾಗತಿಸಿದವು. ಮುಂಜಾವಿನ 4.30 ರ ಹೊತ್ತಿಗೆ ಚೌಕದ ದಕ್ಷಿಣ ಭಾಗದಲ್ಲಿರುವ ಜನತಾ ವೀರರ ಸ್ಮಾರಕದ ಸುತ್ತ ಕೆಲವು ಸಾವಿರ ವಿದ್ಯಾರ್ಥಿಗಳಷ್ಟೇ ಉಳಿದಿದ್ದರು.

"ಇದೀಗ ಚೌಕವನ್ನು ತೆರವು ಮಾಡಬೇಕಾದ ಸಮಯ. ತಮ್ಮನ್ನು ಹಿಂತೆರಳು ಬಿಡಬೇಕೆಂಬ ವಿದ್ಯಾರ್ಥಿಗಳ ಕೋರಿಕೆಯನ್ನು ಲಷ್ಕರಿ ಶಾಸನ ಮುಖ್ಯಾಲಯ ಸ್ವೀಕರಿಸುತ್ತದೆ" ಎಂದು ಧ್ವನಿವರ್ಧಕಗಳ ಮೂಲಕ ಸಾರಲಾಯಿತು. ಇದೇ ಹೊತ್ತಿಗೆ ಚೌಕದಲ್ಲಿ ಸುವ್ಯವಸ್ಥೆ ತರುವ ಶರತ್ತುಗಳನ್ನು ವಿವರಿಸುವ ಇನ್ನೊಂದು ಸೂಚನೆಯನ್ನು ಬೈಜಿಂಗ್‌ಮುನಿಸಿಪಲ್ ಸರಕಾರ ಹೊರಡಿಸಿತು. ಇದನ್ನು ಕೂಡಾ ಬಿತ್ತರಿಸಲಾಯಿತು.

"ಈ ಪ್ರಸಾರ ಕೇಳಿದ ನಂತರ ಎಲ್ಲರೂ ತಕ್ಷಣ ಚೌಕವನ್ನು ಬಿಡಬೇಕು. ಈ ಡಿಕ್ರಿಯನ್ನು ಪಾಲಿಸಲು ಯಾರಾದರೂ ನಿರಾಕರಿಸಿದರೆ ಸೇನೆ ಈ ಸೂಚನೆಯನ್ನು ಯಾವುದೇ ರೀತಿಯಲ್ಲಿ ಜಾರಿಗೆ ತರಬಹುದು.

ತೆರವಾದ ನಂತರ ಚೌಕ ಲಷ್ಕರೀ ಶಾಸನ ಪಡೆಗಳ ಹತೋಟಿಯಲ್ಲಿರುತ್ತದೆ. ದೇಶಪ್ರೇಮವುಳ್ಳ ದೇಶದಲ್ಲಿ ಅವ್ಯವಸ್ಥೆ ಕಾಣಬಯಸದ ವಿದ್ಯಾರ್ಥಿಗಳು ಮತ್ತು ಇತರ ಜನರು ಈ ತೆರವು ಕಾರ್ಯಾಚರಣೆಯಲ್ಲಿ ಸೇನೆಗಳೊಂದಿಗೆ ಸಹಕರಿಸುತ್ತಾರೆ ಎಂದುಆಶಿಸುತ್ತೇವೆ."

ಈ ಪ್ರಸಾರ ಕೇಳಿದ ನಂತರ 5 ಗಂಟೆಗೆ ವಿದ್ಯಾರ್ಥಿಗಳು ಕೈಕೈ ಹಿಡಿದುಕೊಂಡು ವ್ಯವಸ್ಥಿತವಾಗಿ ಚೌಕದಿಂದ ತೆರಳಲಾರಂಭಿಸಿದರು. ಚೌಕದ ಆಗ್ನೇಯ ಭಾಗದಲ್ಲಿ ವಿದ್ಯಾರ್ಥಿಗಳು ಅಡೆ ತಡೆಯಿಲ್ಲದೆ ವಾಪಾಸಾಗಲು ಅನುಕೂಲವಾಗುವಂತೆ ಒಂದು ವಿಶಾಲ ಜಾಗವನ್ನು ಸೇನಾಪಡೆಗಳು ತೆರವು ಮಾಡಿದವು. ಹಿಂತೆರಳಲು ನಿರಾಕರಿಸಿದ ಕೆಲವು ವಿದ್ಯಾರ್ಥಿಗಳನ್ನು ಪೋಲಿಸರು ಬಲವಂತದಿಂಥ ಹೊರಗೆ ಕಳುಹಿಸಿದರು.

ಜೂನ್ 4 ಮುಂಜಾವಿನ 5.30 ಗಂಟೆ ತೆರವು ಕಾರ್ಯಾಚರಣೆ ಅರ್ಧಗಂಟೆಯಲ್ಲೇ ಪೂರ್ಣ ಗೊಂಡಿತು. ಈ ಅವಧಿಯಲ್ಲಿ ಒಬ್ಬನೂ ಸಾಯಲಿಲ್ಲ. ತಿಯಾನ್‌ಮಾನ್ ಚೌಕದಲ್ಲಿ ಜೂನ್ 4ರಂದು ರಕ್ತದ ಹೊಳೆ ಹರಿಯಿತು ಎಂಬುದು ಸಾಮ್ರಾಜ್ಯಶಾಹೀ ಸುದ್ದಿ ಸಂಸ್ಥೆಗಳು ಹರಡಿದ ಅತೀ ದೊಡ್ಡ ಸುಳ್ಳು ವಂದತಿಯಾಗಿತ್ತು. ತಮ್ಮ ವಸಾಹತುಕಾಲದ ಗುಲಾಮ ಬುದ್ಧಿಯನ್ನು ಇನ್ನೂ ಬಿಟ್ಟಿರದ ನಮ್ಮ ದೊಡ್ಡ ಪತ್ರಿಕೆಗಳು ಈ ಆಧಾರಹೀನ ಪಾಶ್ಚಿಮಾತ್ಯ ವಂದಂತಿಗಳನ್ನೇ ಅತ್ಯಂತ ವಿಧೇಯತೆಯಿಂದ ದೊಡ್ಡ ಶಿರೋನಾಮೆಗಳಲ್ಲಿ ಪ್ರಕಟಿಸಿದವು.

ಐ.ಪಿ.ಕೆ.ಎಫ್. ವಾಪಾಸಾತಿಯ ವೇಳಾಪಟ್ಟಿ ಚರ್ಚಿಸಬೇಕು ಭಾರತ-ಶ್ರೀಲಂಕಾ ಒಪ್ಪಂದದ ಜಾರಿ ಪೂರ್ಣಗೊಳ್ಳಬೇಕು

ಜುಲೈ 29 ರೊಳಗೆ ಭಾರತೀಯ ಶಾಂತಿ ಪಡೆಗಳನ್ನು ವಾಪಾಸು ಪಡೆಯಬೇಕೆಂಬ ಶ್ರೀಲಂಕಾ ಅಧ್ಯಕ್ಷ ಪ್ರೇಮದಾಸರವರ ಏಕಪಕ್ಷೀಯ ಹೇಳಿಕೆಯನ್ನು ಸಿ.ಪಿ.ಐ. (ಎಂ) ಈಗಾಗಲೇ ಟೀಕಿಸಿದೆ. ಇದು ಗಂಭೀರ ಕ್ಲಿಷ್ಟ ಪರಿಸ್ಥಿತಿ ನಿರ್ಮಿಸಬಹುದು. ಪ್ರಾಂತೀಯ ಮಂಡಳಿಗೆ ಅಧಿಕಾರಗಳನ್ನು ವರ್ಗಾಯಿಸಲು ತನ್ನ ಪಾಲಿನ ಹೊಣೆಯನ್ನು ಶ್ರೀಲಂಕಾ ಸರಕಾರ ಇನ್ನೂ ಪೂರೈಸಿಲ್ಲ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಉದಾಹರಣೆಗೆ ಈಶಾನ್ಯ ಪ್ರಾಂತೀಯ ಮಂಡಳಿಗೆ ಒಂದು ಪೋಲೀಸ್ ಪಡೆಯೂ ಇಲ್ಲದ್ದರಿಂದ ಕಾನೂನು ವ್ಯವಸ್ಥೆ ಕಾಪಾಡು ವುದರಲ್ಲಿ ತೀವ್ರ ತೊಂದರೆಯಾಗಿದೆ.

ಜೆ.ವಿ.ಪಿ. ಯ ನೇತೃತ್ವದಲ್ಲಿ ಸಿಂಹಳೀ ಸಂಕುಚಿತವಾದ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಶ್ರೀಲಂಕಾ ಅಧ್ಯಕ್ಷರ ಈ ಏಕಪಕ್ಷೀಯ ಹೇಳಿಕೆ ಹೊರಬಂದಿದೆ. ಎಲ್ಲಾ ಭಾರತೀಯ ಹಾಗೂ ತಮಿಳರ ವಿರುದ್ಧ ಹಿಂಸಾಚಾರದ ಬೆದರಿಕೆ ಮತ್ತು ಶ್ರೀಲಂಕಾ ಆಳುವ ಪಕ್ಷ ,ಯು.ಎನ್.ಪಿ.ಯ ಧೋರಣೆಗಳಿಂದ ಹೆಚ್ಚುತ್ತಿರುವ ಅಸಂತೃಪ್ತಿ ಇವೆಲ್ಲಾ ಸೇರಿ ಉಂಟಾದ ಒಂದು ಸನ್ನಿವೇಶದಲ್ಲಿ ಶ್ರೀಯುತ ಪ್ರೇಮದಾಸರವರು ಈ ಗಂಡಾಂತಕಾರಿ ಹಾಗೂ ಹೇಗಾದರೂ ತಪ್ಪಿಸಿಕೊಳ್ಳುವ ಜೂಜಾಟಕ್ಕೆ ಕೈಹಾಕಿದಂತಿದೆ. ಈ ನಿಲುವು ಶ್ರೀಲಂಕಾದ ಐಕ್ಯತೆ ಮತ್ತು ಸಮಗ್ರತೆಯ ಮೇಲೆ ತೀವ್ರ ದುಷ್ಪರಿಣಾಮ ಬೀರುವ ಭಯವಿದ್ದರೂ ಈ ನಿರ್ಧಾರ ಕೈಗೊಂಡಿರುವುದು ತನ್ನ ಧೋರಣೆಯನ್ನು ತಾನೇ ನಿರ್ಣಯಿಸಬಲ್ಲ ಒಂದು ಸಾರ್ವಭೌಮ ದೇಶದ ಸರಕಾರ ಎಂಬುದನ್ನು ಮರೆಯಬಾರದು.

ಆದ್ದರಿಂದ ಸೇನಾಪಡೆಗಳನ್ನು ವಾಪಾಸು ಪಡೆಯುವ ಬಗ್ಗೆ ಮಾತುಕತೆ ನಡೆಸುವುದೇ ಭಾರತ ಸರಕಾರದಲ್ಲಿರುವ ಏಕೈಕಮಾರ್ಗ. ಆದರೆ ರಾಜೀವ್‌ಗಾಂಧಿಯವರು ಇದಕ್ಕೆ ಪೂರ್ವಶರತ್ತುಗಳನ್ನು ಹಾಕಿದ್ದಾರೆ. ಈ ನಿಲುವು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ಅಲ್ಲದೆ ನಮ್ಮೆರಡು ನೆರೆಕರೆ ದೇಶಗಳ ನಡುವಿನ ಸಂಬಂಧಗಳು ಹದಗೆಡಲೆಂದು ಬಯಸುವ ಶ್ರೀಲಂಕಾದ ಕೆಲವು ಶಕ್ತಿಗಳಿಗೆ ಇನ್ನಷ್ಟು ಬಲ ನೀಡಿದಂತಾಗುತ್ತದೆ.

ಭಾರತ - ಶ್ರೀಲಂಕಾ ಒಪ್ಪಂದ ಸ್ವಾಯತ್ತತೆಗೆ ಸಂಬಂಧಪಟ್ಟಂತೆ ತಮಿಳು ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಐಕ್ಯ ಶ್ರೀಲಂಕಾದ ಚೌಕಟ್ಟಿನೊಳಗೆ ಕಾಪಾಡಲು ಒಂದು ತರ್ಕಬದ್ಧ ಚೌಕಟ್ಟನ್ನು ಒದಗಿಸಿದೆ ಎಂಬುದನ್ನು ಸಿ.ಪಿ.ಐ.(ಎಂ) ಒಪ್ಪುತ್ತದೆ. ಶಾಂತಿ ಪಾಲನಾ ಪಡೆ ಈ ಒಪ್ಪಂದದ ಜಾರಿಗೆ ಸೂಕ್ತ ಪರಿಸ್ಥಿತಿ ನಿರ್ಮಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದೆ. ಎಲ್.ಟಿ.ಟಿ.ಇ.ಯ ಸಶಸ್ತ್ರ ಹಲ್ಲೆಗಳನ್ನೆದುರಿಸಿ ಕಷ್ಟಕರ ಪರಿಸ್ಥಿತಿಗಳಲ್ಲಿ ಅದು ಕೆಲಸ ಮಾಡಿದೆ. ಈ ಕರ್ತವ್ಯ ನೆರವೇರಿಕೆಯಲ್ಲಿ ನೂರಾರು ಸೈನಿಕರು ತಮ್ಮ ಪ್ರಾಣಾರ್ಪಣೆ ಕೂಡಾ ಮಾಡಿದ್ದಾರೆ.

ಆದರೆ ಈಗಿನ ಸಂದರ್ಭದಲ್ಲಿ ಭಾರತ ಸರಕಾರ ಶ್ರೀಲಂಕಾ ಅಧ್ಯಕ್ಷರ ಘೋಷಿತ ನಿಲುವಿಗೆ ತಕ್ಕುದಾಗಿ ಸ್ಪಂದಿಸಬೇಕಾಗಿದೆ. ಐ.ಪಿ.ಕೆ.ಎಫ್.ನ ವಾಪಸಾತಿಯ ಪರಸ್ಪರ ಒಪ್ಪಿಗೆಯಾದ ವೇಳಾಪಟ್ಟಿಯನ್ನು ತಯಾರಿಸುವ ಒಂದು ಸೌಹಾರ್ದಯುತ ಒಪ್ಪಂದಕ್ಕೆ ಬರಲು ತಕ್ಷಣ ಮಾತುಕತೆ ಆರಂಭಿಸಬೇಕು. ಶ್ರೀಲಂಕಾ ಸರಕಾರ ಕೂಡಾ ಪ್ರಾಂತೀಯ ಮಂಡಳಿಗಳಿಗೆ ಅಧಿಕಾರ ವರ್ಗಾವಣೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು.

ಐ.ಪಿ.ಕೆ.ಎಫ್. ವಾಪಾಸಾತಿಯ ನಂತರ ಪೂರ್ವ ಹಾಗೂ ಉತ್ತರದ ತಮಿಳು ಅಲ್ಪಸಂಖ್ಯಾತರು ತಮ್ಮ ಭದ್ರತೆಯ ಬಗ್ಗೆ ಶಂಕೆ ಪಡುವುದು ನ್ಯಾಯ ಬದ್ಧವೇ. ಅವರಲ್ಲಿ ಈ ಬಗ್ಗೆ ಭರವಸೆ ಮೂಡಿಸಲು ಕ್ರಮಗಳು ಅಗತ್ಯ. ಶ್ರೀಲಂಕಾದ ಸಾರ್ವಭೌಮತೆಗೆ ತೊಂದರೆಯಾಗದಂತೆ ಇದಕ್ಕೆ ಅಗತ್ಯ ಕ್ರಮಗಳನ್ನು ಚರ್ಚಿಸಬೇಕು.

ಭಾರತ - ಶ್ರೀಲಂಕಾ ಒಪ್ಪಂದದ ಹಾಗೂ 1987ರಲ್ಲಿ ಭಾರತದ ಪ್ರಧಾನಮಂತ್ರಿ ಮತ್ತು ಶ್ರೀಲಂಕಾ ಅಧ್ಯಕ್ಷರ ನಡುವಿನ ಪತ್ರ ವಿನಿಮಯ ನಮ್ಮೆರಡು ದೇಶಗಳ ನಡುವಿನ ಸಮಸ್ಯೆಗಳನ್ನು ದ್ವಿಪಕ್ಷೀಯವಾಗಿ ಪರಿಹರಿಸಿಕೊಳ್ಳಲು ಸೂಕ್ತ ಆಧಾರ ನಿರ್ಮಿಸಿವೆ. ಶ್ರೀಲಂಕಾದ ಐಕ್ಯತೆ ಮತ್ತು ಭಾರತ-ಶ್ರೀಲಂಕಾ ಸಂಬಂಧಗಳನ್ನು ಹಾಳುಗೆಡುವ ಬಯಸುವ ವಿದೇಶೀ ಹಿತಾಸಕ್ತಿಗಳ ಬಗ್ಗೆ ಇವು ಪೂರ್ಣ ಅರಿವು ತೋರ್ಪಡಿಸಿದ್ದವು. ಅಮೆರಿಕನ್ ಸಾಮ್ರಾಜ್ಯಶಾಹೀ ಟ್ರಿಂಕೋಮಾಲಿಯನ್ನು ಮಿಲಿಟರಿ ನೆಲೆಯಾಗಿ ಪಡೆಯುವ ಅವಕಾಶ ಕಳೆದುಕೊಂಡುದನ್ನು ಇನ್ನೂ ಮರೆಯಲು ಸಾಧ್ಯವಿಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಅಸ್ಥಿರತೆ ಉಂಟುಮಾಡಲು ಸತತ ಪ್ರಯತ್ನ ನಡೆಸುತ್ತಲೇ ಇದೆ. ಭಾರತಕ್ಕೆ ಇಂತಹ ಬೆಳವಣಿಗೆಗಳ ಬಗ್ಗೆ ಆತಂಕ ಸಹಜವೇ.

ಭಾರತ-ಶ್ರೀಲಂಕಾ ಒಪ್ಪಂದ ಛಿದ್ರಗೊಂಡರೆ ಅದರಿಂದ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಬಹಳ ಲಾಭ ಎಂಬುದು ಇತ್ತೀಚಿನ ಘಟನೆಗಳಿಂದ ತಿಳಿದು ಬರುತ್ತಿದೆ. ಶ್ರೀಲಂಕಾ ಸರಕಾರ ಹಾಗೂ ಎಲ್.ಟಿ.ಟಿ.ಇ ನಡುವೆ ಹೊಸದಾಗಿ ಕಂಡುಬಂದಿರುವ ಸಮಯಸಾಧಕ ಸಮಾನ ಅಭಿಪ್ರಾಯ, ಸಿಂಹಳೀ ಸಂಕುಚಿತವಾದೀ ಶಕ್ತಿಗಳ ಹೆಚ್ಚುತ್ತಿರುವ ಧಾಳಿ ದೇಶದ ಭವಿಷ್ಯದ ಒಳ್ಳೆಯ ಲಕ್ಷಣಗಳೇನಲ್ಲ. ಶ್ರೀಲಂಕಾ ಸರಕಾರ ವಿವಿಧ ಜನ ವಿಭಾಗಗಳ ನಡುವೆ ಶಾಂತಿ, ಐಕ್ಯತೆ ತರುವ ಕ್ರಮಗಳನ್ನು ಕೈಗೊಳ್ಳುತ್ತದೆ ಹಾಗೂ ನಮ್ಮೆರಡು ದೇಶಗಳ ನಡುವೆ ಸ್ನೇಹಪೂರ್ಣ ಸಂಬಂಧಗಳನ್ನು ಬಲಪಡಿಸುತ್ತದೆ ಎಂದು ಸಿ.ಪಿ.ಐ.(ಎಂ) ಆಶಿಸುತ್ತದೆ.

ವಾಯ್ಸ್ ಆಫ್ ಅಮೇರಿಕಾ! 'ನಿಜಸಂಗತಿ'

ಕಳೆದ ವಾರ ಚೀನಾದ ಕೇಂದ್ರೀಯ ಟೆಲಿವಿಷನ್ ಕೇಂದ್ರ ಒಂದು ದೃಶ್ಯ ತೋರಿಸಿತು. ಅದರಲ್ಲಿ, ಬೈಜಿಂಗ್‌ನ ಒಂದು ಬೀದಿಯಲ್ಲಿ ಕ್ಸಿಯಾವೋ ಬಿನ್ ಎಂಬಾತ ಒಬ್ಬ ವಿದೇಶೀಯನೊಡನೆ ಮಾತನಾಡುತ್ತಾ ಸುತ್ತ ನಿಂತವರಿಗೆ ಹೇಳುತ್ತಿದ್ದಾನೆ- "ತಿಯಾನ್‌ಮೆನ್ ಚೌಕದಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ಸತ್ತರು". "ನಿನಗಿದು ಹೇಗೆ ತಿಳಿಯಿತು?" ಎಂದು ಕೇಳಿದ್ದಕ್ಕೆ ಆತನ ಉತ್ತರ "ವಾಯ್ಸ್ ಆಫ್ ಅಮೆರಿಕಾ ಇದನ್ನು ವರದಿ ಮಾಡಿದೆ."!

ವಾಸ್ತವಿಕವಾಗಿ 20 ಸಾವಿರ ಸತ್ತರೆಂದು ಹೇಳುತ್ತಿದ್ದಾಗ ಆತ ಅಮೆರಿಕನ್ ಬ್ರಾಡ್‌ಕಾಸ್ಟಿಂಗ್ ಕಂಪೆನಿಯ ಸಂದರ್ಶನವೊಂದರಲ್ಲಿ ಭಾಗವಹಿಸುತ್ತಿದ್ದ ಎಂದು ಅದೇ ವಾಯ್ಸ್ ಆಫ್ ಅಮೆರಿಕಾದ ಜೂನ್ 21ರ ವರದಿ ಒಪ್ಪಿಕೊಂಡಿದೆ!

ಕ್ಸಿಯಾವೋ ಬಿನ್ ಬೈಜಿಂಗ್‌ನಲ್ಲಿ ಎಲ್ಲರಿಗೂ ತಿಳಿದಿರುವ ಊಹಾ-ಪೋಹಾಕೋರ.

ವಾಯ್ಸ್ ಆಫ್ ಅಮೆರಿಕಾದ ವರದಿಗಾರನನ್ನು ಚೀನಾದಿಂದ ಹೊರಹಾಕಿದ ಮೇಲೆ ಅದರ ನಿರ್ದೇಶಕ ತನ್ನ ಸಂಸ್ಥೆ "ಸಂಗತಿಗಳ ನಿಜಾಂಶ ತಿಳಿದೇ ವರದಿ ಮಾಡಿದೆ, ಊಹಾಪೋಹಗಳನ್ನಲ್ಲ" ಎಂದಿದ್ದಾರೆ. ವಾಯ್ಸ್ ಆಫ್ ಅಮೆರಿಕಾದ "ನಿಜ ಸಂಗತಿ"ಗಳ ಮೂಲ ಕ್ಸಿಯಾವೋ ಬಿನ್‌ನಂತವರು! ಕ್ಸಿಯಾವೋ ಬಿನ್‌ನಂತವರಿಗೆ ಆ "ನಿಜ ಸಂಗತಿ" ತಿಳಿಸುವುದು ವಾಯ್ಸ್ ಆಫ್ ಅಮೆರಿಕಾ!

ಶ್ರೀನಗರದಲ್ಲಿ ಬುರ್ಖಾ ಹಾಕಲು ಬೆದರಿಕೆ

ಶ್ರೀನಗರದಲ್ಲಿ ಹೆಂಗಸರು ಮತ್ತು ಹುಡುಗಿಯರು ಬುರ್ಖಾವನ್ನು ಸಾಮಾನ್ಯವಾಗಿ ಧರಿಸುವುದಿಲ್ಲ. ಆದರೆ ನಗರದಲ್ಲಿ 'ಹಿಜಬಿ ಇಸ್ಲಾಮಿ' ಎಂಬ ಮುಸ್ಲಿಂ ಮತಾಂಧ ಸಂಘಟನೆ ಬುರ್ಖಾ ಧರಿಸದ ಮುಸ್ಲಿಂ ಮಹಿಳೆಯರ ಮತ್ತು ಹುಡುಗಿಯರ ಮೇಲೆ ಹಿಂಸಾಚಾರ ನಡೆಸುವುದಾಗಿ ಬೆದರಿಕೆ ಹಾಕಿದೆ. ಆದರೆ ದೇವರು (ಅಥವಾ ಅಲ್ಲಾ) ಅವರ ಮುಖದ ಮೇಲೆ ಅವರು ಮುಸ್ಲಿಮರು ಅಥವಾ ಹಿಂದೂಗಳು ಎಂದು ಬರೆದಿಲ್ಲವಲ್ಲ. ಮುಸ್ಲಿಂ ಮಹಿಳೆಯರು ಹಿನ್ನಡೆ ಯಬೇಕೆಂಬ ಈ ಸಂಘಟನೆ ಇದಕ್ಕೂ ಒಂದು ಪರಿಹಾರ ಹುಡುಕಿದೆ. ಮುಸ್ಲಿಮರಲ್ಲದವರೂ ಕುಂಕುಮವಿಡಬೇಕು - ಎಂದು ಫರ್ಮಾನು ಹೊರಡಿಸಿದೆ. ಇಲ್ಲದಿದ್ದರೆ ಅವರೂ ಹಿಂಸಾಚಾರಕ್ಕೆ ಒಳಗಾಗುತ್ತಾರೆ. ಎಂದು ಬೆದರಿಸಿದೆ.

ಇದು ಬರಿ ಭ್ರಾಂತ ಮನಸ್ಸಿನ ಯೋಚನೆಗಳು ಮಾತ್ರವಲ್ಲ. ಗಿಗ್ರಿಬಾಲ್ ಎಂಬಲ್ಲಿ ಬುರ್ಖಾ ಧರಿಸದ ಮುಸ್ಲಿಂ ಹುಡುಗಿಯರ ಗುಂಪೊಂದರ ಮೇಲೆ ಆಸಿಡ್ ಚೆಲ್ಲಲಾಗಿದೆ.

AIDWA ಈ ಮತಾಂಧ ಮಹಿಳಾ-ವಿರೋಧಿ ಸಂಘಟನೆಯ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲು ಒತ್ತಾಯಿಸಿ, ಇದು ಮತಾಂಧ ರಾಜಕಾರಣವನ್ನು ರಾಜಕೀಯವಾಗಿ ಎದುರಿಸದೆ ಇರುವುದರ ದುಷ್ಪರಿಣಾಮ ಎಂದಿದೆ.

ಬಕ್ರೇಶ್ವರ ಯೋಜನೆಗೆ ವಿಮಾ ನೌಕರರ ಕಾಣಿಕೆ

ಪೂರ್ವ ಭಾರತದ ವಿಮಾನೌಕರರ ಫೆಡರೇಷನ್ ತನ್ನ ಪ್ರದೇಶ ಸಮ್ಮೇಳನದಲ್ಲಿ, ಎಲ್ಲಾ ವಿಮಾ ನೌಕರರು ಬಕ್ರೇಶ್ವರ ಥರ್ಮಲ್ ಯೋಜನೆಗೆ ಒಂದು ದಿನದ ವೇತನ ನೀಡಬೇಕೆಂದು ಕರೆ ನೀಡಿದೆ. ಇದಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ಬಂದಿದೆ. ಇದು ಸಂಘಟಕರ ನಿರೀಕ್ಷೆಯನ್ನು ಮೀರಿದೆ.

★ ★ ★

ತ್ರಿಪುರಾ ಕಾಂಗ್ರೆ -TUJS ಅಧಿಕಾರ ಉಳಿಸಿಕೊಳ್ಳಲು ಅಪಾಯಕಾರಿ ಕ್ರಮ

ತ್ರಿಪುರಾದ ಕಾಂಗ್ರೆ -TUJS ಸರಕಾರ ಜನತೆಯ ವಿಶ್ವಾಸ ಕಳೆದುಕೊಂಡಿದ್ದು, ಅಧಿಕಾರ ಉಳಿಸಿಕೊಳ್ಳಲು , ಜನತೆಯ ಐಕ್ಯತೆಗೆ ಭಂಗ ತರುವ ಅಪಾಯಕಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇದು ತಮ್ಮ ಆಡಳಿತದ ವಿರುದ್ಧ ಜನತೆಯಲ್ಲಿ ಭುಗಿಲೆದ್ದಿರುವ ಅಸಮಾಧಾನ ಆಕ್ರೋಶವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ಇದು ಜೂನ್ 11, 12 ರಂದು ಸಭೆ ಸೇರಿದ್ದ ತ್ರಿಪುರಾ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಬಂದಿರುವ ತೀರ್ಮಾನ.

ರಾಜ್ಯದಲ್ಲಿ ಕಾನೂನು ವ್ಯವಸ್ಥೆ ತೀರಾ ಹದಗೆಟ್ಟಿದೆ. ಇಡೀ ರಾಜ್ಯದಲ್ಲಿ ಪೋಲೀಸರ ಸಕ್ರಿಯ ಬೆಂಬಲದಿಂದ ಅವರ ಎದುರಲ್ಲೇ ಕಾಂಗ್ರೆ ಗೂಂಡಾಗಳು ರಾಜಕೀಯ ಭಯೋತ್ಪಾದಕತನದಲ್ಲೇ ತೊಡಗಿದ್ದಾರೆ. ಇದರಲ್ಲಿ ಕುಖ್ಯಾತವಾದದ್ದು ಬೆಲೋನಿಯ ಪೋಲೀಸು ಸ್ಟೇಶನ್. ಇದು ಡಕಾಯಿತರ, ಅತ್ಯಾಚಾರಿಗಳ, ಕೊಲೆಗಡುಕರ ಬೀಡಾಗಿದೆ. ಗಡಿಪ್ರದೇಶಗಳಲ್ಲಿ ಡಕಾಯಿತಿಗಳ ಸಂಖ್ಯೆ ಹೆಚ್ಚಾಗಿದೆ. ಮೇ 5 ರಂದು ರಾಜ್ಯ ಸಮಿತಿ ಆಫೀಸು ಸೇರಿದಂತೆ ಪಕ್ಷದ ಹಲವು ಆಫೀಸುಗಳ ಮೇಲೆ ಮಾಡಿದ ಆಕ್ರಮಣ ಮುಚ್ಚಿಕೊಳ್ಳಲು ರಬೀಂದ್ರ ದೇಬಬರ್ಮಾ (ಆದಿವಾಸಿಮಂತ್ರಿ) ಮೇಲೆ ಅಳುಕು ಆಕ್ರಮಣ ಮಾಡಿಸಿ ಅದರಲ್ಲಿ ಸಿ.ಪಿ.ಐ.(ಎಂ) ಆದಿವಾಸಿಯು ಕರನ್ನು ಸುಳ್ಳುಸುಳ್ಳೇ ಅಪಾದಿತರಾಗಿಸಿ ಆದಿವಾಸಿ ಯುವಕರ ಅನುಕಂಪ ಗಳಿಸುವ ಹತಾಶ ಪ್ರಯತ್ನ ನಡೆದಿದೆ.

ಮಿಶ್ರ ಸರಕಾರದಲ್ಲಿ ಕಾಂಗ್ರೆ-TUJS 'ನಡುವೆ ಕಿತ್ತಾಟ ಆರಂಭವಾಗಿದೆ. ಪರಸ್ಪರ ಮಂತ್ರಿಗಳು ಭ್ರಷ್ಟಾಚಾರ ಅಪಾದನೆ ಮಾಡುತ್ತಿದ್ದಾರೆ. ಸ್ವಾಯತ್ತ ಜಿಲ್ಲಾ ಕೌನ್ಸಿಗಳ ಪಾತ್ರದ ವಿರುದ್ಧ ಅಪಪಚಾರವನ್ನು ಸರ್ಕಾರ ಆರಂಭಿಸಿತ್ತು. ಆದರೆ TUJS ವಿದ್ಯಾರ್ಥಿ ಮತ್ತು ಯುವಕರ ಭಾವನೆಗಳನ್ನು ಕಂಡು ಕಾಂಗ್ರೆ ಇದನ್ನು ಹಿಂತೆಗೆಯಿತು.

TUJS ಮತ್ತು ಈಗ ಕಾನೂನು ಬದ್ಧವಾಗಿರುವ TNU ಆದಿವಾಸಿಯುವಕರನ್ನು, ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ವಿಫಲವಾಗಿವೆ. ಇದರಿಂದ ಹತಾಶರಾಗಿ ಕಾಂಗ್ರೆ ಅಪಾಯಕಾರಿ ಕ್ರಮಕ್ಕೆ ಕೈ ಹಾಕಿದೆ. TNLF (ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ) ಎಂಬ ಹೊಸ ಸಶಸ್ತ್ರ ಆದಿವಾಸಿ ತೀವ್ರಗಾಮಿ ಗುಂಪನ್ನು RAW ಸಹಾಯದಿಂದ ಹುಟ್ಟು ಹಾಕಿದೆ. ಈ TNLF ಮಾಡಿದ ಹಿಂಸಾಚಾರ ಮತ್ತು ಭಯೋತ್ಪಾದರ ಕಾರ್ಯಗಳನ್ನು, ಸಿ.ಪಿ.ಐ.(ಎಂ) ಸದಸ್ಯರ ಮೇಲೆ ಆರೋಪಿಸುವುದು ದೈನಂದಿನ ವಿಚಾರವಾಗಿ ಬಿಟ್ಟಿದೆ. TNLF ನ್ನು ತ್ರಿಪುರಾದ ಆದಿವಾಸಿ ಮತ್ತಿತರ ಯುವಕರ ಅಸಮಾಧಾನ, ಆಕ್ರೋಶವನ್ನು ದುರುಪಯೋಗಪಡಿಸಲು ಉಪಯೋಗಿಸಲಾಗುತ್ತಿದೆ. TNLF ಈಗಾಗಲೇ ಬಾಂಗ್ಲಾ ದೇಶದಲ್ಲಿ ನೆಲೆಗಳನ್ನು ಮಾಡಿದೆ.

ರಾಜ್ಯದ ಕೋಮು ಸೌಹಾರ್ದತೆ ವಾತಾವರಣ ಆದಿವಾಸಿ-ಆದಿವಾಸೇತರ ನಡುವೆ ಮಾತ್ರವಲ್ಲ, ಬೇರೆ ಕೋಮುಗಳ ನಡುವೆಯೂ ಪ್ರಕ್ಷೋಭೆ ಹುಟ್ಟಿಸಲು ಆಳುವ ಪಕ್ಷಗಳು ಯೋಜಿಸಿವೆ. ವಿಶ್ವಹಿಂದೂ ಪರಿಷತ್ ಮತ್ತು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಸೇನಾಮುರಾ, ಕೈಲಾಶಹರಗಳಲ್ಲಿ ಕೋಮು ಘರ್ಷಣೆ ನಡೆಸಲು ಪ್ರಚೋದನೆ ನೀಡುತ್ತಿದ್ದಾರೆ.

ಚಕಮಾ ನಿರಾಶ್ರಿತರ ಸಮಸ್ಯೆ ಅಪಾಯಕಾರಿ ಮುಟ್ಟ ಮುಟ್ಟಿದೆ. ಹಲವು ಪ್ರದೇಶಗಳಲ್ಲಿ ಚಕಮಾ ನಿರಾಶ್ರಿತರ ಮತ್ತು ಸ್ಥಳೀಯರ ನಡುವೆ ಅಗತ್ಯ ಸೇವೆಗಳು ಸಾಕಾಗದೆ ಘರ್ಷಣೆ ಯಾಗುವ ಪರಿಸ್ಥಿತಿ ಮುಟ್ಟಿದೆ. ಈ ಸಮಸ್ಯೆಯನ್ನು ನೆನೆಗುದಿಗೆ ಬಿಟ್ಟು ಸಾಮ್ರಾಜ್ಯಶಾಹಿ ವಲಯಗಳ ಹಿಗ್ಗಿಗೆ ಕಾರಣವಾಗಿರುವ ರಾಜ್ಯ-ಕೇಂದ್ರ ಸರ್ಕಾರಗಳನ್ನು ರಾಜ್ಯಸಮಿತಿ ತರಾಟೆ ತೆಗೆದುಕೊಂಡಿದೆ.

ಆಹಾರ ಸಮಸ್ಯೆ ಉಲ್ಬಣವಾಗಿದೆ. ಅದರಲ್ಲೂ ಸ್ವಾಯತ್ತ ಜಿಲ್ಲಾ ಕೌನ್ಸಿಲ್‌ಗಳ ಆಡಳಿತ ಪ್ರದೇಶದಲ್ಲಿ ತೀವ್ರವಾಗಿದೆ ಚೌಮಾನು ಬ್ಲಾಕ್ ಒಂದರಲ್ಲೇ 14 ಹಸಿವಿನಿಂದ ಮರಣಗಳಾಗಿವೆ.

ಆಳುವ ಪಕ್ಷಗಳ, ಮಿಲಿಟರಿ ಅರೆ-ಮಿಲಿಟರಿ ಪಡೆಗಳ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆ ನಡುವೆಯೂ ಜನರ ಸಮಸ್ಯೆಗಳಿಗಾಗಿ ಜನತೆಯ ಐಕ್ಯ ಮುರಿಯುವುದು ವಿರುದ್ಧ ಹೋರಾಟ ನಡೆಸಿದೆ. ಇದು ಪಕ್ಷದ ಸದಸ್ಯತ್ವ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯತ್ವದ ಹೆಚ್ಚಳದಲ್ಲಿ ಕಂಡು ಬಂದಿದೆ. ಎಂಬುದು ರಾಜ್ಯ ಸಮಿತಿ ಹೆಮ್ಮೆಪಟ್ಟಿದೆ. ಪಕ್ಷದ ಸದಸ್ಯತ್ವ ಸಂಖ್ಯೆ ಈ ವರ್ಷದಲ್ಲಿ 14, 701 ರಿಂದ 15, 608 ಕ್ಕೆ ಏರಿದೆ. DYFI 53 ಸಾವಿರದಿಂದ 75 ಸಾವಿರಕ್ಕೆ. ಆದಿವಾಸಿ ಯುವಕ ಫೆಡರೇಷನ್ 14 ಸಾವಿರಕ್ಕೇರಿದೆ. ಪಕ್ಷದ ದೈನಿಕ ದೇಶೆರ ಕಥಾ ರಕ್ಷಿಸಲು ಪಕ್ಷ ಬಲವಾದ ಪ್ರಚಾರ ರೂಪಿಸಿದೆ.

ಬೆಲೋನಿಯ ಪಕ್ಷದ ಆಫೀಸಿನ ಮೇಲೆ ದುರಾಕ್ರಮಣ

ಜೂನ್ 17 ರಂದು [illegible] ಸಶಸ್ತ್ರ ಕಾಂಗ್ರೆ ಗೂಂಡಾಗಳು ಬೆಲೋನಿಯ ಪಟ್ಟಣದ ಸಿ.ಪಿ.ಐ.(ಎಂ) ಆಫೀಸಿಗೆ ನುಗ್ಗಿ ಆಕ್ರಮಣ ನಡೆಸಿದರು. ಗೇಟ್ ಒಡೆದು ನುಗ್ಗಿದ ಈ ಗೂಂಡಾಗಳು ಆಫೀಸಿನ ಕುರ್ಚಿ ಮೇಜುಗಳನ್ನು ನಾಶಮಾಡಿದ್ದಲ್ಲದೆ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದರು. ಎರಡು ಪಕ್ಷದ ವಾಹನಗಳನ್ನೂ ಜಖಂ ಗೊಳಿಸಿದರು. ತ್ರಿಪುರಾ ರಾಜ್ಯ ಸಮಿತಿಯ ಸೆಕ್ರೆಟರಿಯಟ್ ಸದಸ್ಯರಾದ ನಾರಾಯಣ ಕರ್ ಮತ್ತು ಭಾನು ಘೋಷ್ ಆ ಸಮಯದಲ್ಲಿ ಆಫೀಸಿನಲ್ಲಿದ್ದು, ಒಳಗಿನಿಂದ ಬೀಗ ಹಾಕಿಕೊಳ್ಳುವುದರಿಂದಷ್ಟೇ, ಸುರಕ್ಷಿತವಾಗಿ ಪಾರಾಗಿದ್ದಾರೆ. ಈ ಪಕ್ಷದ ಆಫೀಸಿನಿಂದ ಪೋಲೀಸು ಸ್ಟೇಶನ್ 2 ನಿಮಿಷದ ನಡೆದಾರಿಯಾದರೂ ಆಕ್ರಮಣಕಾರರು [illegible] ಮೇಲೆ ಪೋಲೀಸರು ಆಫೀಸಿಗೆ ಬಂದರು. [illegible] ಪೋಲೀಸರು ಈ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ.

ಬೆಲೋನಿಯ ಕಾಂಗ್ರೆ [illegible] ಕೇಂದ್ರವಾಗಿದ್ದಾರೆ. [illegible] ಈ ಹಿಂಸಾಕೃತ್ಯವನ್ನು ನಿಂದಿಸಿ ಹೇಳಿಕೆ ನೀಡಿದ್ದಾರೆ.

KRNW / BGS-312 MAG(2) PRB DECR 319-78/79

ರಾಜ್ಯಪಾಲರ ಆಡಳಿತದ ಜನವಿರೋಧಿ ಕ್ರಮಗಳು

1 ನೇ ಪುಟದಿಂದ

ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಶಿಕ್ಷಣ ಶುಲ್ಕ ಏರಿಕೆ

ಬಹಳ ದಿನಗಳ ಹಿಂದೆಯೇ ಸಿದ್ಧವಿದ್ದ 'ಇಶ್ವಾರ್' ಸಮಿತಿಯ ವರದಿಯನ್ನು ಜಾರಿಗೆ ನೀಡಲು ಜನತೆಯ ವಿರೋಧಕ್ಕೆ ಹೆದರಿ ಜಾರಿ ಮಾಡಲು ಜನತಾ ದಳ ಸರ್ಕಾರ ಹಿಂಜರಿಯುತ್ತಿತ್ತು. ಆಡಳಿತ ವರ್ಗಗಳವರೊಡನೆ ಮಾತ್ರ ಸಮಾಲೋಚಿಸಿ ಜನತಾ ದಳ ಸರ್ಕಾರಕ್ಕಾದರೆ ಜನತೆಯ ಭಯ ತನಗ್ಯಾತರ ಭಯ ಎಂಬ ಲೆಂಕಾರದಿಂದ ಜಾರಿಗೆ ನೀಡಿದ್ದನ್ನು ರಾಜ್ಯ ಸಮಿತಿ ಖಂಡಿಸಿತು ಮತ್ತು ಕೂಡಲೇ ಇದನ್ನು ಹಿಂದೆಗೆದು ಕೊಳ್ಳಬೇಕೆಂದು ಒತ್ತಾಯಿಸಿತು. ಕ್ಯಾಪಿಟೇಷನ್ ಫೀಯಂತಹ ಕೊಳಗಳಿಗೆ ಹಿಂಬಾಗಿಲ ದಾರಿಯನ್ನು ನಿರ್ಮಿಸುವ ಪ್ರಯತ್ನ ಬಡವಿದ್ಯಾರ್ಥಿಗಳ ಮೇಲೆ ಮತ್ತಷ್ಟು ಹೊರೆ ಹೇರುವಲ್ಲಿ ಪರಿವರ್ತಿತವಾಗಿದೆಯೆಂದು ವರ್ಣಿಸಿತು.

ಬಸ್ ದರ ಏರಿಕೆ ಹಾಗೂ ಬಸ್ ಮಾರ್ಗಗಳ ಕಡಿತ

ಜನರ ಒತ್ತಾಯಕ್ಕೆ ಮಣಿದು ಬಸ್ ದರ ಏರಿಕೆ ಹಿಂತೆಗೆದುಕೊಂಡಿದ್ದರೂ ಕೇಂದ್ರದ ಸಲಹೆಗಾರರು, ಕೇಂದ್ರದ ಹೊಸ ಆರ್ಥಿಕ ನೀತಿಯ ಭಾಗವಾದ ಆಡಳಿತ ದರದ 'ಏಕಾಏಕಿ' ಏರಿಕೆಯನ್ನು, ರಾಜ್ಯದ ಜನತೆಯ ಸಂಕಷ್ಟಗಳಿಗೆ ಹಾಗೂ ಈಗಾಗಲೇ ಮುಗಿಲಿಗೇರುತ್ತಿರುವ ಬೆಲೆ ಏರಿಕೆಯನ್ನು ಹೊರಗೆ ಕಿಂಚಿತ್ತು ಗಮನ ಕೊಡದೆ, ಅಮಲುಗೊಳಿಸಲು ಪ್ರಯತ್ನಿಸಿದ್ದು ಖಂಡನೀಯ ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಒಂದೆಡೆ ಕಾಂಗ್ರೆ ಒತ್ತಡದಿಂದ ಬಸ್ ದರ ಏರಿಕೆ ಹಿಂತೆಗೆದುಕೊಂಡರೆಂಬ ನಾಟಕ ನಡೆದಿದ್ದರೆ ಮತ್ತೊಂದೆಡೆ ನೂರಾರು ಬಸ್ ಮಾರ್ಗಗಳನ್ನು ರದ್ದುಗೊಳಿಸಿ ಬಸ್ ಟ್ರಿಪ್‌ಗಳನ್ನು ಕಡಿತಗೊಳಿಸಿ ಇದನ್ನು ಸರಿದೂಗಿಸಿಕೊಳ್ಳಲುಪ್ರಯತ್ನಿಸಿರುವುದನ್ನು ರಾಜ್ಯ ಸಮಿತಿ ವಿರೋಧಿಸುತ್ತದೆ.

ವರ್ಗಾವರ್ಗಿ

ರಾಷ್ಟ್ರಪತಿಗಳ ಆಡಳಿತ ಜಾರಿಗೆ ಬಂದ ಕೂಡಲೇ ಪ್ರಮುಖ ಅಧಿಕಾರಿಗಳನ್ನು ಪೋಲೀಸ್ ಅಧಿಕಾರಿಗಳ ಸಾರಾಸಗಟಿ ವರ್ಗಾವಣೆಗಳನ್ನು ಮಾಡುವ ಆತುರ ತೋರಿರುವ ರಾಜ್ಯಪಾಲರು ಕೇಂದ್ರದಲ್ಲಿ ಆಡಳಿತದಲ್ಲಿರುವ ಕಾಂಗ್ರೆಗೆ ಮಣಿಯುವ ಆಡಳಿತ ಯಂತ್ರವನ್ನು ಸೃಷ್ಟಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಈ ವರ್ಗಾವರ್ಗಿಯಲ್ಲಿ ಕಾಂಗ್ರೆ ರಾಜಕಾರಣಿಗಳ ಚಟುವಟಿಕೆ ತೀವ್ರವಾಗಿದೆ ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಪ್ರಜಾಸತ್ತಾತ್ಮಕ ಪ್ರತಿಭಟನೆಗೆ ಅಸಹನೆ

ಅಧಿಕಾರಶಾಹಿ ಬಲಗೊಂಡು ಅದರ ದಬ್ಬಾಳಿಕೆಯ ಮುಖ ಅನೇಕ ರೀತಿಯಲ್ಲಿ ಪ್ರಕಟಗೊಳ್ಳುತ್ತಿದೆ. ಸರ್ಕಾರದ ಕಂದಾಯ, ತೆರಿಗೆ ಹಾಗೂ ರೈತರಿಂದ ಸಾಲಗಳ ವಸೂಲಿಯಲ್ಲಿ ದಬ್ಬಾಳಿಕೆಯ ಕ್ರಮಗಳು ಹಳ್ಳಿ ಹಳ್ಳಿಗಳಲ್ಲಿಯೂ ಆರಂಭವಾಗಿದೆ. ಅಲ್ಲದೆ ಜನಾಭಿಪ್ರಾಯವನ್ನು, ಸಂಘಟಿತ ಜನರ ನಿವೇದನೆಗಳನ್ನು ರಾಜ್ಯಪಾಲರಿಗೆ ನೀಡುವಲ್ಲಿಯೂ ಪೋಲಿಸ್ ಯಂತ್ರ ತಡೆಮಾಡಲಾರಂಭಿಸಿದೆ. ಪತ್ರಿಕೆಗಳ ವರದಿಗಾರರನ್ನು ನಿರ್ಲಕ್ಷಿಸಿದ ಘಟನೆಗಳು ನಡೆದಿವೆ.

ರೇಷನ್ ವಿತರಣೆ ಕಡಿತ

ಅಕ್ಕಿ ಪಾಮೋಲಿಯಾನ್ ಮೊದಲಾದ ರೇಷನ್ ವಿತರಣೆಯಲ್ಲಿ ತೀವ್ರ ಕಡಿತ ಮಾಡಲಾಗಿದೆ. ಇದರಿಂದ ಬೆಲೆ ಏರಿಕೆ 'ಯಿಂದ ತತ್ತರಿಸುತ್ತಿರುವ ಜನಸಮುದಾಯಕ್ಕೆ ಅದರಲ್ಲಿಯೂ ಬಡತನ ರೇಖೆಯ ಕೆಳಗಿರುವವರಿಗೆ ಜೀವನ ದುರ್ಭರವಾಗಿದೆ.

ರಾಜೀವ್ ಗಾಂಧಿಯವರ ಕರ್ನಾಟಕ ಪ್ರವಾಸ

1983 ನಂತರ ಅನಿವಾರ್ಯವಾಗಿ ಮೂಲೆ ಗುಂಪಾಗಿದ್ದ ಕಾಂಗ್ರೆ ಸಂಸ್ಕೃತಿ ರಾಜೀವ್ ಗಾಂಧಿಯವರ ಕರ್ನಾಟಕ ಪ್ರವಾಸ ಕಾಲದಲ್ಲಿ ಮತ್ತೆ ತನ್ನ ಹಳೆಯ ವೈಭವವನ್ನು ಪ್ರದರ್ಶಿಸಿರುವುದು-ಕಟೌಟ್‌ಗಳು, ಸರ್ಕಾರೀ, ಅರೆ ಸರ್ಕಾರಿ ಸಂಸ್ಥೆಗಳಿಂದ ಸ್ವಾಗತ ಕಮಾನುಗಳು, ಸ್ವಾಗತ ಸಮಾರಂಭಗಳಲ್ಲಿ ವಿವಿಧ ಕಾಂಗ್ರೆ ಗೂಂಡಾ ಗುಂಪುಗಳ ಮೇಲಾಟ, ಜನರನ್ನು ಕರೆತರುವ ನಾಯಕರು ಹಾದಿಯುದ್ದಕೂ ನಡೆಸುವ ದುಂಡಾವೃತ್ತಿ ಇವೆಲ್ಲವೂ ಸಾಮಾನ್ಯ ಜನರಲ್ಲಿ ಆತಂಕ ಮೂಡಿಸಿವೆ- ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಈ ಭೇಟಿಗಳಲ್ಲಿ ವಿರೋಧ ಪಕ್ಷಗಳ ಮೇಲೆ ಲಂಗು ಲಗಾಮಿಲ್ಲದೆ ಟೀಕೆ ಹಾಗೂ ಸುಳ್ಳುಗಳ ಸುರಿಮಳೆ ಆರಂಭವಾಗಿದೆ. ಪೊಳ್ಳು ಭರವಸೆಗಳು ಮಂಗಳೂರು ತೈಲಾಗಾರ, ವಿಜಯನಗರ ಉಕ್ಕು ಕಾರ್ಖಾನೆ, ರೈಲ್ವೆ ಮಾರ್ಗಗಳು ಇವುಗಳ ಬಗ್ಗೆ ಆರಂಭವಾಗಿವೆ. ಕರ್ನಾಟಕ ರಾಜ್ಯ ಸರ್ಕಾರಕ್ಕೆ ವಿಶೇಷ ಮುಂಗಡಗಳನ್ನು ನೀಡಿ ಅದನ್ನು ಮುಂದೆ ಚುನಾಯಿತವಾಗುವ ಸರ್ಕಾರದ ತಲೆಯಮೇಲೆ ಹೇರುವ ಘೋಷಣೆಗಳೂ ಆರಂಭವಾಗಿವೆ. ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಕೇಂದ್ರ ತನಿಖಾ ಆಯೋಗ

ತಾನು ನಡೆಸಿರುವ ಅಸಂಖ್ಯ ಭ್ರಷ್ಟಾಚಾರದ ಹಗರಣಗಳನ್ನು ಮುಚ್ಚಲು ದಿನನಿತ್ಯವೂ ಹೆಣಗುತ್ತಿರುವ ಹಾಗೂ ಈ ಪ್ರಯತ್ನದಲ್ಲಿ ಪ್ರಜಾಸತ್ತೆಯ ಎಲ್ಲಾ ಸಂಸ್ಥೆಗಳನ್ನೂ ನಿರ್ಜೀವಗೊಳಿಸಲು ಪ್ರಯತ್ನಿಸುತ್ತಿರುವ ಕೇಂದ್ರದ ಸರ್ಕಾರ ಸುಪ್ರೀಂ ಕೋರ್ಟು ನ್ಯಾಯಾಧೀಶರಿಂದ ರಾಜ್ಯ ಸರ್ಕಾರದ ಎರಡೂ ಭೂ ಹಗರಣಗಳ ಬಗ್ಗೆ ತನಿಖೆ ನಡೆಸಲು ತೀರ್ಮಾನಿಸಿರುವುದು ಒಂದು ರಾಜಕೀಯ ಸೇಡಿನ ಕ್ರಮ ಹಾಗೂ ಚುನಾವಣೆಯ ವರ್ಷದಲ್ಲಿ ವಿರೋಧ ಪಕ್ಷಗಳನ್ನು ಬಲಗುಂದಿಸಲು ಮಾಡಿರುವ ಪ್ರಯತ್ನ ಎಂದು ರಾಜ್ಯ ಸಮಿತಿ ಖಂಡಿಸಿತು.

ಭೂಮಿ ಚಳುವಳಿ ಹಾಗೂ ಅಸಂಘಟಿತ ಕಾರ್ಮಿಕರ ಚಳುವಳಿಗೆ ಬೆಂಬಲ

ಕರ್ನಾಟಕದಲ್ಲಿ ಸರ್ಕಾರಿ ಭೂಮಿ ಸಾಗುವಳಿ ಮಾಡುತ್ತಿರುವವರಿಗೆ ಪಟ್ಟಾ ಹಂಚಲು, ಇನ್ನೂ ವಿಪುಲವಾಗಿರುವ ಸರ್ಕಾರಿ ಭೂಮಿಯನ್ನು ಹಂಚಲು, ಭೂ ಸುಧಾರಣೆಯ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಳ್ಳಲು ಒತ್ತಾಯಿಸಿ ರಾಜ್ಯದ 7 ಜಿಲ್ಲೆಗಳಲ್ಲಿ ತೀವ್ರ ಚಳುವಳಿ ಆರಂಭಿಸಲು ಯೋಜಿಸಿರುವ ರೈತರಿಗೆ ರಾಜ್ಯ ಸಮಿತಿ ಬೆಂಬಲ ಸೂಚಿಸಿತು.

ಭಾರತಾದ್ಯಂತ ಎಲ್ಲಾ ಕೈಗಾರಿಕೆಗಳಲ್ಲಿ 1050ರೂ. ಗಳ ಕನಿಷ್ಠ ವೇತನವನ್ನು ಒತ್ತಾಯಿಸಿ ಚಳುವಳಿ ನಡೆಸಲು ಆಗಸ್ಟ್ 2ರಂದು ಅಖಿಲ ಭಾರತ ಪ್ರತಿಭಟನೆ, ಆಗಸ್ಟ್ ಕೊನೆಯಲ್ಲಿ ಮೂರು ದಿನಗಳ ಮುಷ್ಕರ ನಡೆಸಲಿರುವ ಅಸಂಘಟಿತ ಕಾರ್ಮಿಕರಿಗೆ ರಾಜ್ಯ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

ಕೋಮುವಾದ ವಿರೋಧಿ ರಾಜ್ಯ ಸಮಾವೇಶ

ಸಿ.ಪಿ.ಐ.(ಎಂ.) ಹಾಗೂ ಸಿ.ಪಿ.ಐ ಪಕ್ಷಗಳು ಆಗಸ್ಟ್ 15 ರಂದು ನಡೆಸಲು ಯೋಜಿಸಿರುವ ಕೋಮುವಾದ ವಿರೋಧಿ ರಾಜ್ಯ ಸಮಾವೇಶವನ್ನು ಪ್ರಜಾಸತ್ತಾತ್ಮಕ ಶಕ್ತಿಗಳು ಯಶಸ್ವಿಗೊಳಿಸಬೇಕೆಂದು ರಾಜ್ಯ ಸಮಿತಿ ವಿನಂತಿಸಿದೆ.

ಕಾಂಗ್ರೆ ವಿರೋಧಿ ಪಕ್ಷಗಳಿಗೆ ಕರೆ

ಕಾಂಗ್ರೆ ಸರ್ವಾಧಿಕಾರದ ಕುತಂತ್ರಗಳನ್ನು ಎದುರಿಸಲು ಕಾಂಗ್ರೆಸ್‌ಅನ್ನು ಸೋಲಿಸಲು ಪ್ರಯತ್ನಿಸುತ್ತಿರುವ ಜಾತ್ಯಾತೀತ ವಿರೋಧ ಪಕ್ಷಗಳೆಲ್ಲವೂ ಮುಖ್ಯವಾಗಿ ಜನತಾದಳ ಮತ್ತು ಜನತಾ ಪಕ್ಷಗಳು ತಮ್ಮ ನಡುವೆ ದೋಷಾರೋಪಣೆಗಳನ್ನು ನಡೆಸುವುದನ್ನು ನಿಲ್ಲಿಸಬೇಕೆಂದೂ ಈ ಮೂಲಕ ತಮ್ಮ ಕಾಂಗ್ರೆ ವಿರೋಧವನ್ನು ಪ್ರಾಮಾಣಿಕವಾಗಿ ಸಾಧಿಸಿ ತೋರಿಸಬೇಕೆಂದೂ ಪಕ್ಷದ ರಾಜ್ಯ ಸಮಿತಿ ಕರೆ ನೀಡುತ್ತದೆ. ಹಾಗೆಯೇ ರಾಜೀವ್ ಗಾಂಧಿಯವರ ಕೀಳುಮಟ್ಟದ ಪ್ರಚಾರ, ಸುಳ್ಳು ಆಶ್ವಾಸನೆಗಳಿಗೆ ಕರ್ನಾಟಕದ ಜನತೆ ಬಲಿಬೀಳಬಾರದೆಂದು ಕೇಳಿಕೊಂಡಿದೆ.

ಕಾ॥ಮುಜಫರ್ ಅಹ್ಮದ್ ಜನ್ಮಶತಾಬ್ಧಿ

ಆಗಸ್ಟ್ 5 ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನದ ಸಂಸ್ಥಾಪಕ ಮುಖಂಡರಲ್ಲಿ ಪ್ರಮುಖರಾದ ಕಾ॥ ಮುಜಫರ್ ಅಹ್ಮದ್‌ರವರ ಜನ್ಮ ಶತಾಬ್ಧಿ ದಿನ. ರಾಜ್ಯಾದ್ಯಂತ ಇದನ್ನು ಆಚರಿಸಬೇಕೆಂದು ರಾಜ್ಯ ಸಮಿತಿ ಎಲ್ಲಾ ಪ್ರಾದೇಶಿಕ ಸಮಿತಿಗಳಿಗೆ ಕರೆ ನೀಡಿದೆ. ರಾಯಚೂರು ಜಿಲ್ಲಾ ಸಮಿತಿ ಈಗಾಗಲೇ ಜಿಲ್ಲೆಯ ಎರಡು ಕಡೆ ಮೂರು ದಿನಗಳ ಕಾರ್ಯಕ್ರಮ ಹಾಕಿಕೊಂಡಿದೆ. ಕೋಮುಸೌಹಾರ್ದ, ಪಶ್ಚಿಮ ಬಂಗಾಳಎಡರಂಗ ಸರ್ಕಾರದ ಸಾಧನೆಗಳು ಮತ್ತು ಕಮ್ಯುನಿಸ್ಟ್ ಆಂದೋಲನದ ಭವ್ಯ ಇತಿಹಾಸದ ಬಗ್ಗೆ, ವಿಚಾರಸಂಕಿರಣಗಳನ್ನು ನಡೆಸಲಾಗುವುದು. ಬೆಂಗಳೂರು ಜಿಲ್ಲಾಸಮಿತಿಯೂ ಒಂದು ದಿನದ ಕಾರ್ಯಕ್ರಮ ರೂಪಿಸಿದೆ.

ಪಾಲಿಟ್ ಬ್ಯೂರೋ ಹೇಳಿಕೆ

ಮೋಗಾ ಸಮೂಹಿಕ ಹತ್ಯೆ ಸರಕಾರದ ಬೇಜವಾಬ್ದಾರಿ ಹೆಗ್ಗಳಿಕೆಯನ್ನು ಬಯಲಿಗೆಳೆದಿದೆ

ಜೂನ್ 25 ರಂದು ಪಂಜಾಬಿನ ಮೋಗಾದಲ್ಲಿ 26 ಮಂದಿಯನ್ನು ಖಾಲಿಸ್ತಾನಿ ಭಯೋತ್ಪಾದಕರು ನಿರ್ಮಮ ಸಾಮೂಹಿಕ ಹತ್ಯೆ ನಡೆಸಿದರು. ಇವರಲ್ಲಿ ಬಹುಮಂದಿ ಆರ್.ಎಸ್.ಎಸ್. ಕಾರ್ಯಕರ್ತರು. ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಇದನ್ನು ಕಟುವಾಗಿ ಖಂಡಿಸಿದೆ. ರಾಜ್ಯದಲ್ಲಿ ಕೋಮು ಸೌಹಾರ್ದವನ್ನು ಕೆಡಿಸಿ ತಮ್ಮ ರಾಷ್ಟ್ರ-ವಿರೋಧಿ ಪಿತೂರಿಗಳನ್ನು ಸಾಧಿಸುವುದೇ ಈ ಕ್ರೂರ ಹಲ್ಲೆಯ ಉದ್ದೇಶ ಎಂದಿರುವ ಪಾಲಿಟ್‌ಬ್ಯೂರೋ ಈ ಘಟನೆಯಲ್ಲಿ ಬಲಿಯಾದವರ ಕುಟುಂಬಗಳಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಪಂಜಾಬಿನ ಗಂಭೀರ ಪರಿಸ್ಥಿತಿಯನ್ನು ಈ ಬಹಿರಂಗ ಹಲ್ಲೆ ಮತ್ತೊಮ್ಮೆ ತೋರಿಸಿಕೊಟ್ಟಿದೆ. ಪರಿಸ್ಥಿತಿ ಹತೋಟಿಯಲ್ಲಿದೆ. ಭಯೋತ್ಪಾದಕರು ಓಟ ಕೀಳುತ್ತಿದ್ದಾರೆ ಎಂಬ ಪ್ರಧಾನ ಮಂತ್ರಿಗಳು, ಪಂಜಾಬಿನ ರಾಜ್ಯಪಾಲರ ಹೇಳಿಕೆಗಳು ಶುದ್ಧ ಹೊಣೆಗೇಡಿತನ ಮಾತುಗಳು ಎಂಬುದನ್ನು ಈ ಘಟನೆ ಬಯಲಾಗಿಸಿದೆ. ಎಸ್.ಎಸ್ ರಾಯ್ ನೇತೃತ್ವದ ಆಡಳಿತ ಭಯೋತ್ಪಾದಕರ ಪಿಡುಗಿನ ಬಗ್ಗೆ ಆತ್ಮಸಂತೃಪ್ತಿಯ, ನಿರ್ಲಕ್ಷ್ಯದ ನಿಲುವು ತಳೆದಿದೆ. ಕೇಂದ್ರ ಸರ್ಕಾರ ಹಾಗೂ ಪ್ರಧಾನ ಮಂತ್ರಿಗಳೂ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಪಾಲಿಟ್‌ಬ್ಯೂರೋ ಹೇಳಿದೆ. ಏಕೆಂದರೆ ದೇಶದಲ್ಲಿ ಜಾತ್ಯತೀತತೆಯ, ಐಕ್ಯತೆಯ ರಕ್ಷಣೆಗೆ ನೇರವಾಗಿ ಸಂಬಂಧಪಟ್ಟ ಪಂಜಾಬ್ ಸಮಸ್ಯೆ ಬಗೆಹರಿಸಲುಭಯೋತ್ಪಾದಕರನ್ನು ರಾಜಕೀಯವಾಗಿ ಜನರಿಂದ ದೂರಸರಿಸಲು, ಎಲ್ಲಾ ಜನವಿಭಾಗಗಳನ್ನು ಒಟ್ಟುಸೇರಿಸುವ ಸೂಕ್ತ ವಾತಾವರಣ ಮೂಡಿಸಲು ಅರ್ಥಪೂರ್ಣ ಕ್ರಮಗಳನ್ನು ಕೈಗೊಳ್ಳುವಲ್ಲಿ ಪ್ರಧಾನಮಂತ್ರಿಗಳು ಹಾಗೂ ಕೇಂದ್ರಸರ್ಕಾರ ವಿಫಲಗೊಂಡಿದ್ದಾರೆ ಎಂದು ಪಾಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ರಾಜ್ಯ ಸಮಾವೇಶ

1ನೇ ಪುಟದಿಂದ

ಸಭಾಂಗಣದಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ. ಹಾಗೂ ಎರಡೂ ಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳ ಹಾಗೂ ಇತರ ಜಾತ್ಯಾತೀತ ವ್ಯಕ್ತಿಗಳ ಸಭೆ ಕರೆಯುವುದು.

(iii) ಆಗಸ್ಟ್ 15ರ ಮೊದಲು ಕೋಮುವಾದದ ವಿರುದ್ಧ ಜಿಲ್ಲಾಸಮಾವೇಶಗಳು.

(iv) ಕೋಮುವಾದದ ವಿರುದ್ಧ ಪ್ರಕ್ಷೋಭೆಯನ್ನು ತೀವ್ರಗೊಳಿಸಲು ಮುಂದಿನ ಕ್ರಮ ಕೈಗೊಳ್ಳುವುದು.

ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಕೊಂಡು ಆಗಸ್ಟ್ 15ರ ಸಮಾವೇಶವನ್ನು ದೊಡ್ಡ ಪ್ರಮಾಣದಲ್ಲಿ ಯಶಸ್ವಿಗೊಳಿಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯಕಾರ್ಯದರ್ಶಿ ಪಿ.ರಾಮಚಂದ್ರರಾವ್ ಹಾಗೂ ಸಿ.ಪಿ.ಐ.ರಾಜ್ಯಕಾರ್ಯದರ್ಶಿ ಎಂ.ಎಸ್. ಕೃಷ್ಣನ್ ಎಲ್ಲಾ ಜಾತ್ಯಾತೀತ ಕೊಮುವಾದ ವಿರೋಧಿ ಶಕ್ತಿಗಳಿಗೆ ಮನವಿ ಮಾಡಿಕೊಂಡಿದ್ದಾರೆ.

ಜುಲೈ 18ರ ರಸ್ತೆ ತಡೆ ಚಳುವಳಿ ವಾಪಸ್

ಶುಲ್ಕ ರಿಯಾಯಿತಿಗೆ ಹಸಿರು ಕಾರ್ಡ ಕಡ್ಡಾಯವೆಂಬ ಆಜ್ಞೆಯನ್ನು ಸರಕಾರ ಹಿಂತೆಗೆದುಕೊಂಡಿರುವುದರಿಂದ ಜುಲೈ 18ರಂದು ರಾಜ್ಯಾದ್ಯಂತ ನಡೆಸಲು ಕರೆ ನೀಡಿದ್ದ ರಸ್ತೆ ತಡೆ ಚಳುವಳಿಯನ್ನು ವಾಪಸ್ ಪಡೆಯಲಾಗಿದೆ.

ವಾರ್ಷಿಕ 10,000ರೂ. ಒಳಗೆ ಆದಾಯವಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ನೀಡಬೇಕೆಂಬ ಬೇಡಿಕೆಯನ್ನು ಆಗಸ್ಟ್ ಮತ್ತು ಸೆಪ್ಟೆಂಬರ್ ನಲ್ಲಿ ನಡೆಯಲಿರುವ ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ಮಟ್ಟದ ಹೋರಾಟದ ಬೇಡಿಕೆಗಳ ಜೊತೆ ಸೇರಿಸಿ ಹೋರಾಟವನ್ನು ರೂಪಿಸುವುದೆಂದು ತೀರ್ಮಾನಿಸಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿ ಅಧ್ಯಕ್ಷ ಜಿ.ಸಿ.ಬೈಯಾರೆಡ್ಡಿ, ಉಪಾಧ್ಯಕ್ಷ ರಾಮನಗೌಡ ಹಾಗೂ ಸಹಕಾರ್ಯದರ್ಶಿ ಎಲ್. ಮಂಜುನಾಥರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎ.ಐ.ಡಿ.ಡಬ್ಲ್ಯು.ಎ. ಬೀದರ್ ಘಟಕದ ನೇತೃತ್ವದಲ್ಲಿ ನಾಗರೀಕ ಸೌಲಭ್ಯಗಳನ್ನು ಒತ್ತಾಯಿಸಿ ಮಹಿಳೆಯರ ರ್ಯಾಲಿ.

ವರದಿ ಮುಂದಿನವಾರ



Printed and published by P.RAMACHANDRA RAO on behalf of communist party of India (Marxist), Karnataka State committee L-56, K.V. Temple Street, Sulthanpet, Bangalore-560 053. Phone.No. 75331. Editor. P.RAMACHANDRA RAO. Managerial Office: C/O. Kriya Prakashana, Shobha Lodge Complex, 5th main Road, Gandhinagar, Bangalore